ಮಂಗಳವಾರ, ಜುಲೈ 5, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 185 | ಪುಟ 12


www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮಕುಶಲ
ಸಮಸ್ಯೆ ಇರುವುದು, ಆಯಾಸವಾದಾಗ ವಿಶ್ರಾಂತಿಗೆ ಕೂರುವುದಲ್ಲ; ಹಾಗೆ ಕೂತ ಮನುಷ್ಯ ಬಹಳ ಕಾಲ ಅಲ್ಲಿಂದ ಏಳದಿರುವುದು. ಕ್ರಿಯಾಶೀಲತೆ ಆರೋಗ್ಯವನ್ನು ಕಾಪಾಡುತ್ತದೆ



ಆಳ-ಅಗಲ ನವೋದ್ಯಮ ಕರ್ನಾಟಕ ಅತ್ಯುತ್ತಮ

ಹೋಟೆಲ್: ಸೇವಾ ಶುಲ್ಕ ಸಂಗ್ರಹಿಸುವಂತಿಲ್ಲ 11

ಪೌರಕಾರ್ಮಿಕರ ಮುಷ್ಕರ ಅಂತ್ಯ 5

ಸೆನ್ಸೆಕ್ಸ್	ನಿಫ್ಟಿ	₹/$
53,235 ▲	15,835 ▲	78.95 ▼

ಪಿಎಸ್‌ಐ ನೇಮಕ ಅಕ್ರಮ: ಮೊದಲ ಬಾರಿಗೆ ಎಡಿಜಿಪಿ ಶ್ರೇಣಿಯ ಅಧಿಕಾರಿ ಬಂಧನ, ಅಮಾನತು

ಬೀಗದ ಕೀ ಕೊಟ್ಟು ಸಿಕ್ಕಿಬಿದ್ದ ಪೌಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಪರೀಕ್ಷೆಯ ಒಎಂಆರ್ ಪ್ರತಿಗಳನ್ನು ಇರಿಸಿದ್ದ ಭದ್ರತಾ ಕೊಠಡಿಯ ಬೀಗದ ಕೀಯನ್ನು ತನ್ನ ಕೈಕೆಳಗಿನ ನೌಕರರಿಗೆ ನೀಡಿ, ಅವರ ಮೂಲಕವೇ ಉತ್ತರ ಪತ್ರಿಕೆಗಳನ್ನು ತಿದ್ದಿಸಿರುವ ಕೃತ್ಯದಲ್ಲಿ ಎಡಿಜಿಪಿ ಅಮ್ರಿತ್ ಪೌಲ್ ಭಾಗಿಯಾಗಿರುವುದು ತನಿಖೆಯಲ್ಲಿ ದೃಢಪಟ್ಟ ಬೆನ್ನಲ್ಲೇ, ಸಿಐಡಿ ಪೌಲ್ ಅವರನ್ನು ಸೋಮವಾರ ಬಂಧಿಸಲಾಯಿತು.

ಇದಾದ ಕೆಲವೇ ಗಂಟೆಗಳಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಅವರನ್ನು ಅಮಾನತುಗೊಳಿಸಿ ಆದೇಶ ಹೊರಡಿಸಿತು.

ರಾಜ್ಯದ ಇತಿಹಾಸದಲ್ಲಿ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರ ದರ್ಜೆಯ ಐಪಿಎಸ್ ಅಧಿಕಾರಿ ಅಪರಾಧ ಪ್ರಕರಣವೊಂದರಲ್ಲಿ ಬಂಧಿತರಾಗಿರುವುದು ಇದೇ ಮೊದಲು. ಪಿಎಸ್‌ಐ ನೇಮಕ ಅಕ್ರಮಕ್ಕೆ ಸಂಬಂಧಿಸಿದಂತೆ ಕಲಬುರಗಿಯ ಚೌಕ್ ಪೊಲೀಸ್ ಠಾಣೆಯಲ್ಲಿ ಏಪ್ರಿಲ್‌ನಲ್ಲಿ ಮೊದಲ ಎಫ್‌ಐಆರ್ ದಾಖಲಾಗಿತ್ತು. ಆಗಿನಿಂದಲೂ ಈ ಪ್ರಕರಣದಲ್ಲಿ ಅಮ್ರಿತ್ ಪೌಲ್ ಕೈವಾಡವಿರುವ ಆರೋಪ ಕೇಳಿಬಂದಿತ್ತು.

ಪಿಎಸ್‌ಐ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಈವರೆಗೆ ಎಂಟು ಎಫ್‌ಐಆರ್‌ಗಳು ದಾಖಲಾಗಿದ್ದು, ಒಟ್ಟು 65 ಆರೋಪಿಗಳನ್ನು ಬಂಧಿಸಲಾಗಿದೆ.

ಅವರಲ್ಲಿ ನಾಲ್ವರು ಡಿವೈಎಸ್‌ಪಿಗಳು ಸೇರಿದಂತೆ ಪೊಲೀಸ್ ಇಲಾಖೆಯ 18 ಅಧಿಕಾರಿಗಳು ಹಾಗೂ ಸಿಬ್ಬಂದಿ, 47 ಮಂದಿ ಅಭ್ಯರ್ಥಿಗಳು ಮತ್ತು ಮಧ್ಯವರ್ತಿಗಳು ಸೇರಿದ್ದಾರೆ. ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದಲ್ಲಿ 35ನೇ ಆರೋಪಿಯಾಗಿ ಪೌಲ್ ಅವರನ್ನು ಬಂಧಿಸಲಾಗಿದೆ.

7ನೇ ಪುಟ ನೋಡಿ



ಎಡಿಜಿಪಿ ಅಮ್ರಿತ್ ಪೌಲ್ ಅವರನ್ನು ಬೆಂಗಳೂರಿನ ಬೌರಿಂಗ್ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ನ್ಯಾಯಾಲಯಕ್ಕೆ ಕರೆದೊಯ್ಯಲಾಯಿತು

> ಪಿಎಸ್‌ಐ ನೇಮಕಾತಿ ಅಕ್ರಮದ ತನಿಖೆಯನ್ನು ನಮ್ಮ ಸರ್ಕಾರ ನಡೆಸಿದ್ದರಿಂದಲೇ ಹಗರಣ ಬಯಲಿಗೆ ಬರಲು ಸಾಧ್ಯವಾಗಿದೆ. ಹಿಂದಿನ ಸರ್ಕಾರದಲ್ಲಿ ಸಾಕಷ್ಟು ಹಗರಣಗಳು ನಡೆದಿದ್ದರೂ ಆಗ ಅಧಿಕಾರಲ್ಲಿದ್ದವರು ತನಿಖೆಗೆ ಹಿಂದೇಟು ಹಾಕಿದ್ದರು
>
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

> ಪಿಎಸ್‌ಐ ನೇಮಕಾತಿ ಹಗರಣವೇ ನಡೆದಿಲ್ಲ ಎಂದು ಮೈಮೇಲೆ ಬರುತ್ತಿದ್ದ ಮುಖ್ಯಮಂತ್ರಿ, ಗೃಹಸಚಿವ ಈಗ ಏನು ಹೇಳುತ್ತಾರೆ? ಈ ಹಗರಣಕ್ಕೆ ಅಧಿಕಾರಿಗಳಷ್ಟೇ ಗೃಹ ಸಚಿವ ಜ್ಞಾನೇಂದ್ರ ಅವರೂ ಕಾರಣ. ಅವರನ್ನು ಸಂಪುಟದಿಂದ ಕಿತ್ತುಹಾಕಬೇಕು
>
> **ಸಿದ್ದರಾಮಯ್ಯ,** ವಿಧಾನಸಭೆ ವಿರೋಧ ಪಕ್ಷದ ನಾಯಕ

> ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಅಧಿಕಾರಿಗಳ ಜತೆಗೆ ಸರ್ಕಾರದಲ್ಲಿ ಅತ್ಯಂತ ಪ್ರಭಾವಿ ಸ್ಥಾನಗಳಲ್ಲಿರುವ 'ಕಿಂಗ್ ಪಿನ್'ಗಳನ್ನು ತನಿಖಾ ತಂಡ ಹಿಡಿಯಬೇಕಿದೆ. ಯಾವುದೇ ಕಾರಣಕ್ಕೂ ಪ್ರಭಾವಿಗಳು ತಪ್ಪಿಸಿಕೊಳ್ಳಬಾರದು
>
> **ಎಚ್‌.ಡಿ. ಕುಮಾರಸ್ವಾಮಿ,** ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಬಂಧಿಸಲು ಹೆದರಿದ್ದ ಅಧಿಕಾರಿಗಳು?

'ಪುರಾವೆಗಳು ಇದ್ದರೂ ಎಡಿಜಿಪಿ ಅವರನ್ನು ಬಂಧಿಸಲು ಸಿಐಡಿ ಅಧಿಕಾರಿಗಳೇ ಹೆದರಿದ್ದರು. ಹೀಗಾಗಿ, ನಾಲ್ಕು ಬಾರಿ ನೋಟಿಸ್ ನೀಡಬೇಕಾಯಿತು' ಎಂದು ಮೂಲಗಳು ಹೇಳಿವೆ.

'ಮೊದಲ ಬಾರಿ ವಿಚಾರಣೆಗೆ ಬಂದಿದ್ದಾಗಲೇ ಎಡಿಜಿಪಿ ಅವರನ್ನು ಬಂಧಿಸುವ ಉದ್ದೇಶ ಅಧಿಕಾರಿಗಳದ್ದಾಗಿತ್ತು. ಆದರೆ, ತಮಗಿಂತ ಉನ್ನತ ದರ್ಜೆ ಅಧಿಕಾರಿಯನ್ನು ಬಂಧಿಸುವುದು ಹೇಗೆ ಎಂದು ಚಿಂತೆಗೀಡಾಗಿದ್ದರು. ಮೂರು ಬಾರಿ ನೋಟಿಸ್ ನೀಡಿ ವಿಚಾರಣೆ ನಡೆಸಿದ್ದರೂ, ಬಂಧನದ ಬಗ್ಗೆ ತೀರ್ಮಾನ ಕೈಗೊಂಡಿರಲಿಲ್ಲ' ಎಂದೂ ತಿಳಿಸಿವೆ.

'ಪ್ರಕರಣದ ಬಗ್ಗೆ ಇತ್ತೀಚೆಗೆ ವಿಚಾರಣೆ ನಡೆಸಿದ್ದ ಹೈಕೋರ್ಟ್, 'ಪಿಎಸ್‌ಐ ನೇಮಕಾತಿ ಅಕ್ರಮದ ಹಿಂದೆ ಯಾವುದೇ ಸಚಿವ, ಅಧಿಕಾರಿ ಅಥವಾ ಪ್ರಭಾವಿ ವ್ಯಕ್ತಿ ಇದ್ದರೂ ಮುಲಾಜಿಲ್ಲದೆ ಕ್ರಮ ಕೈಗೊಳ್ಳಬೇಕು' ಎಂದಿತ್ತು. ಇದೇ ಕಾರಣಕ್ಕೆ ಸಿಐಡಿ ಡಿಜಿಪಿ ಪಿ.ಎಸ್. ಸಂಧು, ಐಜಿಪಿ ಉಮೇಶ್‌ಕುಮಾರ್ ನೇತೃತ್ವದ ತಂಡ, ನಾಲ್ಕನೇ ಬಾರಿ ಪೌಲ್ ಅವರನ್ನು ವಿಚಾರಣೆಗೆ ಕರೆಸಿ ಬಂಧಿಸಿದೆ. ಮತ್ತಷ್ಟು ಪ್ರಭಾವಿಗಳಿಗೂ ಗಾಳ ಹಾಕಿದೆ' ಎಂದೂ ಹೇಳಿವೆ.

ಲಂಚ: ಐಎಎಸ್ ಅಧಿಕಾರಿ ಮಂಜುನಾಥ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಮೀನು ಮಾಲೀಕತ್ವದ ವ್ಯಾಜ್ಯಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಅರ್ಜಿದಾರರ ಪರ ಆದೇಶ ನೀಡಲು ಬೆಂಗಳೂರು ನಗರ ಜಿಲ್ಲಾಧಿಕಾರಿ ಹುದ್ದೆಯಲ್ಲಿದ್ದ ಅವಧಿಯಲ್ಲಿ ಲಂಚ ಪಡೆದಿರುವ ಆರೋಪ ಎದುರಿಸುತ್ತಿರುವ ಐಎಎಸ್ ಅಧಿಕಾರಿ ಜೆ. ಮಂಜುನಾಥ್ ಅವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಸೋಮವಾರ ಬಂಧಿಸಿದ್ದು, ಇದರ ಬೆನ್ನಲ್ಲೇ ಅವರನ್ನು ಅಮಾನತು ಮಾಡಲಾಗಿದೆ.

ಆನೇಕಲ್ ತಾಲ್ಲೂಕಿನ ಕೂಡ್ಲು ಗ್ರಾಮದ 38 ಗುಂಟೆ ಜಮೀನು ಒಡೆತನಕ್ಕೆ ಸಂಬಂಧಿಸಿದ ವ್ಯಾಜ್ಯದಲ್ಲಿ ಅನುಕೂಲಕರ ಆದೇಶ ನೀಡಲು ಬೇಗೂರು ನಿವಾಸಿ ಅಜಂ ಪಾಷಾ ಎಂಬುವವರಿಂದ ₹ 5 ಲಕ್ಷ ಲಂಚ ಪಡೆಯುತ್ತಿದ್ದಾಗ ಜಿಲ್ಲಾಧಿಕಾರಿ ಕಚೇರಿ ವ್ಯವಸ್ಥಾಪಕ ಮಹೇಶ್ ಮತ್ತು ನ್ಯಾಯಾಲಯ ವಿಭಾಗದ ಸಹಾಯಕ ಚೇತನ್ ಕುಮಾರ್ ಅಲಿಯಾಸ್ ಚಂದ್ರು ಎಂಬುವವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಮೇ 21ರಂದು ಬಂಧಿಸಿತ್ತು.

ತನಿಖೆ ಮುಂದುವರಿಸಿದ್ದ ಎಸಿಬಿ ಅಧಿಕಾರಿಗಳು, ಮಂಜುನಾಥ್ ಅವರನ್ನು ಪ್ರಕರಣದ ಮೂರನೇ ಆರೋಪಿಯನ್ನಾಗಿ ಪರಿಗಣಿಸುವಂತೆ ನ್ಯಾಯಾಲಯಕ್ಕೆ ವರದಿ ಸಲ್ಲಿಸಿದ್ದರು.



ಜೆ. ಮಂಜುನಾಥ್

ಬಳಿಕ ಅವರನ್ನು ಬೆಂಗಳೂರು ನಗರ ಜಿಲ್ಲಾಧಿಕಾರಿ ಹುದ್ದೆಯಿಂದ ಸಮಗ್ರ ಶಿಶು ಅಭಿವೃದ್ಧಿ ಯೋಜನೆ ನಿರ್ದೇಶಕರ ಹುದ್ದೆಗೆ ವರ್ಗಾವಣೆಗೊಳಿಸಿ ಶುಕ್ರವಾರ ಆದೇಶ ಹೊರಡಿಸಲಾಗಿತ್ತು. ಎಸಿಬಿ ಬೆಂಗಳೂರು ನಗರ ಘಟಕದ ಎಸ್‌ಪಿ ಜಿ.ಎಚ್. ಯತೀಶ್‌ಚಂದ್ರ ನೇತೃತ್ವದ ತಂಡ ಸೋಮವಾರ ಮಧ್ಯಾಹ್ನ 3 ಗಂಟೆಗೆ ಯಶವಂತಪುರದ ಮನೆಯಲ್ಲಿ ಮಂಜುನಾಥ್ ಅವರನ್ನು ಬಂಧಿಸಿತು.

ನ್ಯಾಯಾಂಗ ಬಂಧನಕ್ಕೆ: ಮಂಜುನಾಥ್ ಅವರನ್ನು ಎಸಿಬಿ ಕಚೇರಿಗೆ ಕರೆತಂದು ಪ್ರಾಥಮಿಕ ವಿಚಾರಣೆ ಪೂರ್ಣಗೊಳಿಸಿದ ತನಿಖಾಧಿಕಾರಿಗಳು, ಬೌರಿಂಗ್ ಆಸ್ಪತ್ರೆಗೆ ಕರೆದೊಯ್ದು ಆರೋಗ್ಯ ತಪಾಸಣೆ ನಡೆಸಿದರು. ನಂತರ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ಆರೋಪಿಯನ್ನು 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಕೆ. ಲಕ್ಷ್ಮೀನಾರಾಯಣ ಭಟ್ ಆದೇಶ ಹೊರಡಿಸಿದರು.

7ನೇ ಪುಟ ನೋಡಿ

ಬಂಧಿತರಾದ 3ನೇ ಜಿಲ್ಲಾಧಿಕಾರಿ

ಬೆಂಗಳೂರು ನಗರ ಜಿಲ್ಲಾಧಿಕಾರಿಗಳಾಗಿ ಭ್ರಷ್ಟಾಚಾರ ಆರೋಪ ಎದುರಿಸಿ ಬಂಧಿತರಾದ ಮೂರನೇ ಐಎಎಸ್ ಅಧಿಕಾರಿ ಜೆ. ಮಂಜುನಾಥ್.

2013ರ ಮಾರ್ಚ್‌ನಲ್ಲಿ ಬೆಂಗಳೂರು ನಗರ ಜಿಲ್ಲಾಧಿಕಾರಿಯಾಗಿದ್ದ ಎಂ.ಕೆ. ಅಯ್ಯಪ್ಪ ಅವರನ್ನು ಭೂ ಹಗರಣವೊಂದರಲ್ಲಿ ಲೋಕಾಯುಕ್ತ ಪೊಲೀಸರು ಬಂಧಿಸಿದ್ದರು.

ಐ ಮಾನಿಟರಿ ಅಡ್ವೈಸರಿ (ಐಎಂಎ) ವಂಚನೆ ಪ್ರಕರಣದಲ್ಲಿ ಭಾಗಿಯಾಗಿದ್ದ ಆರೋಪದ ಮೇಲೆ 2019ರಲ್ಲಿ ಆಗಿನ ಬೆಂಗಳೂರು ನಗರ ಜಿಲ್ಲಾಧಿಕಾರಿಯಾಗಿದ್ದ ಬಿ.ಎಂ. ವಿಜಯಶಂಕರ್ ಅವರನ್ನು ಸಿಬಿಐ ಬಂಧಿಸಿತ್ತು.

ವಿವಿಧೆಡೆ ಬಿರುಸಿನ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕರಾವಳಿ, ಮಲೆನಾಡು ಮತ್ತು ದಕ್ಷಿಣ ಒಳನಾಡಿನ ಹಲವೆಡೆ ಬಿರುಸಿನ ಮಳೆ ಮುಂದುವರಿದಿದ್ದು, ಜಲಾಶಯಗಳಿಗೆ ಒಳ ಹರಿವು ಹೆಚ್ಚಾಗಿದೆ. ಕಾವೇರಿ, ನೇತ್ರಾವತಿ, ಕುಮಾರಧಾರಾ, ಶಾಂಭವಿ ನದಿಗಳು ಹಾಗೂ ಅವುಗಳ ಉಪನದಿಗಳು ತುಂಬಿ ಹರಿಯುತ್ತಿವೆ.

ಚಿಕ್ಕಮಗಳೂರು ಜಿಲ್ಲೆಯ ಹೊಸಪೇಟೆಯ ಒಂದನೇ ತರಗತಿಯ ವಿದ್ಯಾರ್ಥಿನಿ ಸುಪ್ರಿತಾ ಶಾಲೆ ಮುಗಿಸಿ ಸಂಜೆ ಮನೆಗೆ ಹೋಗುವಾಗ ಕಂಬಿಹಳ್ಳಿ ಸಮೀಪ ಕಾಫಿ ಎಸ್ಟೇಟ್‌ನೊಳಗಿನ ಹಳ್ಳದಲ್ಲಿ ಕೊಚ್ಚಿಕೊಂಡು ಹೋಗಿದ್ದಾಳೆ. ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಹಲ್ಲೂರು ಗ್ರಾಮದಲ್ಲಿ ಮಳೆಯಿಂದಾಗಿ, ಗದ್ದೆಯಲ್ಲಿ ತುಂಬಿದ್ದ ನೀರನ್ನು ಹೊರಕ್ಕೆ ಹರಿಸಲು ಹೋಗಿದ್ದ ಕೃಷಿಕ ಮಹಿಳೆ ಲಕ್ಷ್ಮಿ ಪೂಜಾರ್ತಿ (66) ಎಂಬುವರು ಆಯತಪ್ಪಿ ಬಿದ್ದು ಮೃತಪಟ್ಟಿದ್ದಾರೆ.

ಮಳೆ ಕಾರಣ ಉಡುಪಿ ಜಿಲ್ಲೆಯ ಹೆಬ್ರಿ ತಾಲ್ಲೂಕಿನ ಅಂಗನವಾಡಿ, ಶಾಲಾ– ಕಾಲೇಜುಗಳಿಗೆ ಮಂಗಳವಾರ ರಜೆ ನೀಡಲಾಗಿದೆ. ಕೊಡಗು ಜಿಲ್ಲೆಯಲ್ಲಿ ಧಾರಾಕಾರ ಮಳೆಗೆ ಅಲ್ಲಲ್ಲಿ ಮಣ್ಣು ಕುಸಿತ ಉಂಟಾಗಿದ್ದು, ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡ (ಎನ್‌ಡಿಆರ್‌ಎಫ್) ವಿವಿಧೆಡೆ ತೆರಳಿ ಪರಿಸ್ಥಿತಿ ಅವಲೋಕಿಸಿದೆ.

ಉತ್ತರ ಕನ್ನಡ ಜಿಲ್ಲೆಯ ಜೊಯಿಡಾ ತಾಲ್ಲೂಕಿನ ಅನಮೋಡದ ಸಮೀಪ ಗೋವಾ ಭಾಗದ ರಾಷ್ಟ್ರೀಯ ಹೆದ್ದಾರಿ '4 ಎ' ಮೇಲೆ ಗುಡ್ಡ ಕುಸಿದಿದೆ. ಭಾನುವಾರ ರಾತ್ರಿ 11.30ರ ಸುಮಾರಿಗೆ ದೂಧ್ ಸಾಗರ ದೇವಸ್ಥಾನ ಬಳಿ ಅವಘಡವಾಗಿದ್ದು, ವಾಹನಗಳ ಸಂಚಾರ ಸಂಪೂರ್ಣ ಸ್ಥಗಿತಗೊಂಡಿದೆ.



ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನಲ್ಲಿ ಧಾರಾಕಾರ ಮಳೆಯಾಗುತ್ತಿದ್ದು, ಮಲ್ಲಳ್ಳಿ ಜಲಪಾತ ಪ್ರವಾಸಿಗರನ್ನು ಆಕರ್ಷಿಸುತ್ತಿದೆ –ಪ್ರಜಾವಾಣಿ ಚಿತ್ರ

ಎಸಿಬಿ ಪ್ರಕರಣ: ಸರ್ಕಾರವೂ ಅಪರಾಧದ ಭಾಗ – ನ್ಯಾ.ಸಂದೇಶ್ ಆರೋಪ

'ವರ್ಗಾವಣೆ ಬೆದರಿಕೆ ಬಂದಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಕಚೇರಿಗಳು ವಸೂಲಿ ಕೇಂದ್ರಗಳಾಗಿವೆ ಎಂದು ತರಾಟೆಗೆ ತೆಗೆದುಕೊಂಡ ಹಿನ್ನೆಲೆಯಲ್ಲಿ, ನಿನ್ನ ವರ್ಗಾವಣೆಯಾದೀತು ಹುಷಾರಾಗಿರು ಎಂದು ನ್ಯಾಯಮೂರ್ತಿಯೊಬ್ಬರು ನನಗೆ ಬೆದರಿಕೆ ಒಡ್ಡಿದ್ದಾರೆ' ಎಂಬ ಗಂಭೀರ ಆರೋಪ ಮಾಡಿರುವ ರಾಜ್ಯ ಹೈಕೋರ್ಟ್ ನ್ಯಾಯಮೂರ್ತಿ ಎಚ್.ಪಿ.ಸಂದೇಶ್, 'ನಾನು ಎಲ್ಲದಕ್ಕೂ ಸಿದ್ಧನಿದ್ದೇನೆ' ಎಂದು ಗುಡುಗಿದ್ದಾರೆ.



ನ್ಯಾಯಮೂರ್ತಿ ಎಚ್.ಪಿ.ಸಂದೇಶ್

'ಪ್ರಕರಣದಲ್ಲಿ ಆರೋಪಿಯಾಗಿರುವ ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿಯ ಉಪ ತಹಶೀಲ್ದಾರ್ ಪಿ.ಎಸ್. ಮಹೇಶ್ ಸಲ್ಲಿಸಿರುವ ಜಾಮೀನು ಅರ್ಜಿಯನ್ನು ಬುಧವಾರ ವಿಚಾರಣೆ ನಡೆಸಿದ ಸಂದೇಶ್, 'ಸಾಂವಿಧಾನಿಕ ಹುದ್ದೆ ನಿಭಾಯಿಸುವ ನ್ಯಾಯಮೂರ್ತಿಗಳು ಯಾವುದೇ ಪಕ್ಷದ ಸಿದ್ಧಾಂತದ ಪರವಾಗಿ ಇರಬಾರದು. ರಾಜ್ಯ ಸರ್ಕಾರ ಐಎಎಸ್ ಮತ್ತು ಐಪಿಎಸ್ ಲಾಬಿಯ ಆಣತಿಯಂತೆ ನಡೆಯುತ್ತಿದ್ದು ಸರ್ಕಾರವೂ ಅಪರಾಧದ ಭಾಗವಾಗಿದೆ' ಎಂದು ಅವರು ಆರೋಪಿಸಿದರು.

ಮುಖ್ಯಾಂಶಗಳು
- ನ್ಯಾಯಮೂರ್ತಿ ಒಬ್ಬರಿಂದ ಬೆದರಿಕೆ
- ಇದೇ 7ಕ್ಕೆ ವಿಚಾರಣೆ ಮುಂದೂಡಿಕೆ

ಬೆಳಗಿನ ಕಲಾಪದಲ್ಲಿ, 'ನನಗೆ ವರ್ಗಾವಣೆ ಬೆದರಿಕೆ ಹಾಕಿದ ನ್ಯಾಯಮೂರ್ತಿ ಯಾರು ಎಂಬ ವಿವರವನ್ನೆಲ್ಲಾ ಮಧ್ಯಾಹ್ನದ ಕಲಾಪದಲ್ಲಿ ಆದೇಶದಲ್ಲೇ ಬರೆಯಿಸಿ ತೀರುತ್ತೇನೆ' ಎಂದು ಪಟ್ಟು ಹಿಡಿದಿದ್ದರು.

ಮಧ್ಯಾಹ್ನ ಕಲಾಪ ಮುಂದುವರಿದಾಗ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವದಗಿ ಹಾಜರಾಗಿ, 'ಸರ್ಕಾರ ಯಾರನ್ನೂ ರಕ್ಷಣೆ ಮಾಡುತ್ತಿಲ್ಲ. ನಿಮಗೆ ನೋವು ಎನಿಸಿದ್ದರೆ ಅದು ನಮಗೇನೂ ಖುಷಿ ಉಂಟು ಮಾಡುವ ಸಂಗತಿಯಾಗಿರುವುದಿಲ್ಲ. ಆದ್ದರಿಂದ, ತಾವು ಯಾವುದಕ್ಕೂ ಬೇಸರ ಮಾಡಿಕೊಳ್ಳಬಾರದು. ಎಸಿಬಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನೂ ನೀಡುತ್ತೇವೆ. 'ಬಿ' ರಿಪೋರ್ಟ್‌ನ ಸಂಪೂರ್ಣ ಮಾಹಿತಿಯನ್ನೂ ಕೊಡುತ್ತೇವೆ. ಸರ್ಕಾರ ಹೈಕೋರ್ಟ್ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತದೆ' ಎಂಬ ಭರವಸೆ ನೀಡಿದರು.

ಇದಕ್ಕೆ ಸಂದೇಶ್, 'ನನಗೆ ವರ್ಗಾವಣೆಯ ಪರೋಕ್ಷ ಬೆದರಿಕೆ ಹಾಕಲಾಗಿದೆ. ನಾನೀಗ ನ್ಯಾಯಾಂಗದ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯಬೇಕಿದೆ. ಜಡ್ಜ್ ಆದ ಮೇಲೆ ನಾನು ಒಂದಿಂಚೂ ಆಸ್ತಿ ಮಾಡಿಲ್ಲ. ವರ್ಗಾವಣೆ ಬೆದರಿಕೆ ಎದುರಿಸುತ್ತೇನೆ. ಜನರ ಒಳಿತಿಗಾಗಿ ವರ್ಗಾವಣೆಯಾಗಲು ಸಿದ್ಧನಿದ್ದೇನೆ, ನನಗೆ ₹ 500ರಲ್ಲಿ ಜೀವನ ಮಾಡಿಯೂ ಗೊತ್ತು, ₹ 5,000ದಲ್ಲಿ ಜೀವನ ಮಾಡಿಯೂ ಗೊತ್ತು ಯಾರ ಹೆದರಿಕೆಯೂ ಇಲ್ಲ, ಬೆಕ್ಕಿಗೆ ಗಂಟೆ ಕಟ್ಟಲು ಸಿದ್ಧನಿದ್ದೇನೆ. ಇವತ್ತು ಭ್ರಷ್ಟಾಚಾರ ಸಮಾಜದಲ್ಲಿ ಕ್ಯಾನ್ಸರ್ ಆಗಿ ಪರಿಣಮಿಸಿದೆ' ಎಂದರು.

7ನೇ ಪುಟ ನೋಡಿ

ಸರ್ವರ್ 'ಕೋಮಾ'ಕ್ಕೆ: ಮದ್ಯದಂಗಡಿ ಖಾಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೆಬ್–ಇಂಡೆಂಟ್ ಮೂಲಕ ಮಾತ್ರ ಮದ್ಯ ಖರೀದಿಸುವ ವ್ಯವಸ್ಥೆಗೆ ಕರ್ನಾಟಕ ಪಾನೀಯ ನಿಗಮ (ಕೆಎಸ್‌ಬಿಸಿಎಲ್) ಅಭಿವೃದ್ಧಿಪಡಿಸಿರುವ ಪೋರ್ಟಲ್ ಕಳೆದ ನಾಲ್ಕು ದಿನಗಳಿಂದ ಆಮೆವೇಗದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಮದ್ಯ ಖರೀದಿ ಮಾಡಲಾಗದೆ ವ್ಯಾಪಾರಿಗಳು ಪರದಾಡುತ್ತಿದ್ದು, ಮಳಿಗೆಗಳಲ್ಲಿ ಮದ್ಯ ಖಾಲಿಯಾಗಿದೆ.

ಎಲ್ಲ ಜಿಲ್ಲೆಗಳಲ್ಲೂ ಇರುವ ಪಾನೀಯ ನಿಗಮದ ಡಿಪೋಗಳಿಗೆ ಸನ್ನದುದಾರರು ಮದ್ಯದ ಬೇಡಿಕೆ ಪಟ್ಟಿಯೊಂದಿಗೆ ಹೋಗಿ ಅಲ್ಲೇ ಹಣ ಪಾವತಿಸಿ ಖರೀದಿ ಮಾಡುವ ವ್ಯವಸ್ಥೆ ಹಲವು ವರ್ಷಗಳಿಂದ ಜಾರಿಯಲ್ಲಿತ್ತು. ಕುಳಿತಲ್ಲೇ ಮದ್ಯ ಖರೀದಿಸಲು ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ವೆಬ್–ಇಂಡೆಂಟಿಂಗ್ ವ್ಯವಸ್ಥೆಯನ್ನು ಕೆಎಸ್‌ಬಿಸಿಎಲ್ ಏಪ್ರಿಲ್‌ನಿಂದ ಜಾರಿಗೆ ತಂದಿದೆ.

ಈ ತಂತ್ರಾಂಶದಲ್ಲಿ ಪ್ರತಿ ಸನ್ನದುದಾರರಿಗೆ ಪ್ರತ್ಯೇಕ ಖಾತೆಗಳನ್ನು ಹೊಂದಲು ಅವಕಾಶ ಇದೆ. ಆ ಖಾತೆಯಲ್ಲಿ ಮೊದಲೇ ಹಣ ಜಮಾವಣೆ ಮಾಡಿಟ್ಟುಕೊಂಡಿರಬೇಕು. ಆ ಖಾತೆಯಲ್ಲಿ ಇರುವಷ್ಟು ಮೊತ್ತಕ್ಕಷ್ಟೇ ಮದ್ಯ ಖರೀದಿ ಮಾಡಲು ಅವಕಾಶ ಇದೆ.

ಅಂಕಿ–ಅಂಶ(ರಾಜ್ಯ)

1.75 ಲಕ್ಷ ಬಾಕ್ಸ್
ಪ್ರತಿದಿನ ಮಾರಾಟವಾಗುವ ಮದ್ಯ

90 ಸಾವಿರ ಬಾಕ್ಸ್
ಪ್ರತಿದಿನ ಮಾರಾಟವಾಗುವ ಬಿಯರ್

₹100 ಕೋಟಿ
ದಿನದ ಸರಾಸರಿ ವಹಿವಾಟು

₹75 ಕೋಟಿ
ಸರ್ಕಾರಕ್ಕೆ ಬರುವ ದಿನದ ಸರಾಸರಿ ವರಮಾನ

10ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ವಿಶ್ವಾಸಮತ ಗೆದ್ದ ಏಕನಾಥ ಶಿಂಧೆ

ಮುಂಬೈ (ಪಿಟಿಐ): ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂಧೆ ಅವರು ವಿಧಾನಸಭೆಯಲ್ಲಿ ಸೋಮವಾರ ವಿಶ್ವಾಸ ಮತ ಗೆದ್ದಿದ್ದಾರೆ. ಶಿವಸೇನಾ ಮುಖ್ಯಸ್ಥ ಉದ್ಧವ್ ಠಾಕ್ರೆ ವಿರುದ್ಧ ಬಂಡಾಯ ಎದ್ದ ಶಿಂಧೆ ಅವರು ಬಿಜೆಪಿ ಬೆಂಬಲದಲ್ಲಿ ಜೂನ್ 30ರಂದು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದರು. 10

ಒಳ ಪುಟ

2,100 ಹುದ್ದೆಗಳಿಗೆ ನೇಮಕ 5

ಸಂಚಾರ ದಟ್ಟಣೆ ನಿವಾರಣೆ: ಇಲಾಖೆಗಳ ಅಧಿಕಾರಿಗಳೊಂದಿಗೆ ಪುನರಾವಲೋಕನ ಸಭೆ

‘ಸಮನ್ವಯದಿಂದ ಕಾರ್ಯ ನಿರ್ವಹಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಉಂಟಾಗುತ್ತಿರುವ ಸಂಚಾರ ದಟ್ಟಣೆಯನ್ನು ನಿರ್ವಹಿಸಲು ಎಲ್ಲ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಈ ಬಗ್ಗೆ ಅಲ್ಪಾವಧಿ ಹಾಗೂ ದೀರ್ಘಾವಧಿ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕು ಎಂದು ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್‌ಸಿಂಗ್ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಸಂಚಾರ ದಟ್ಟಣೆ ನಿರ್ವಹಣೆಗೆ ಸಂಬಂಧಿಸಿದಂತೆ ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ. ರಜನೀಶ್ ಗೋಯಲ್, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೇರಿ ಹಿರಿಯ ಅಧಿಕಾರಿಗಳೊಂದಿಗೆ ಸೋಮವಾರ ಸಭೆ ನಡೆಸಿದ ರಾಕೇಶ್ ಸಿಂಗ್ ತುರ್ತು ಕ್ರಮಕ್ಕೆ ಆದೇಶಿಸಿದರು.

‘ಗೊರಗುಂಟೆ ಪಾಳ್ಯ, ಹೆಬ್ಬಾಳ ಹಾಗೂ ಕೆ.ಆರ್.ಪುರ ಜಂಕ್ಷನ್‌ಗಳಲ್ಲಿ ಕಳೆದ ವಾರ ಜಂಟಿ ತಪಾಸಣೆ ನಡೆಸಿ ಅಲ್ಪಾವಧಿ ಯೋಜನೆ ಜಾರಿಗೊಳಿಸಲು ಸೂಚಿಸಲಾಗಿತ್ತು. ಅದರಂತೆ ಗೊರಗುಂಟೆ ಪಾಳ್ಯ ಜಂಕ್ಷನ್‌ನಲ್ಲಿ ಪೊಲೀಸ್ ಚೌಕಿ ತೆರವುಗೊಳಿಸಿ ವಾಹನಗಳ ತಿರುವಿಗೆ ಅವಕಾಶ ಕಲ್ಪಿಸಲಾಗಿದೆ. ಹೆಬ್ಬಾಳ ಜಂಕ್ಷನ್‌ನಲ್ಲಿ ಮೀಡಿಯನ್‌ಗೆ ಬ್ಯಾರಿಕೇಡ್ ಅಳವಡಿಸಿ ಸರ್ವೀಸ್ ರಸ್ತೆಯಿಂದ ಬರುವ ಬಸ್‌ಗಳನ್ನು ಜಂಕ್ಷನ್ ಕೆಳಗಿರುವ ರ‍್ಯಾಂಪ್ ಮೂಲಕ ಹೋಗಲು ಅವಕಾಶ ನೀಡಲಾಗಿದೆ. ರ‍್ಯಾಂಪ್‌ಗಿಂತ ಮುಂದೆಯೇ ಬಸ್‌ಗಳ ನಿಲುಗಡೆ ಮಾಡಲು ವ್ಯವಸ್ಥೆ ಮಾಡಲಾಗಿದೆ’ ಎಂದರು.

ಕೆ.ಆರ್.ಪುರ ಜಂಕ್ಷನ್‌ನಲ್ಲಿ ಬಸ್ ನಿಲ್ದಾಣದ ಸ್ಥಳದಲ್ಲಿ ಡಾಂಬರೀಕರಣ ಮಾಡಲು ಬಿಎಂಆರ್‌ಸಿಎಲ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇಬ್ಲೂರು, ಸೆಂಟ್ರಲ್ ಸಿಲ್ಕ್ ಬೋರ್ಡ್, ಸಾರಕ್ಕಿ ಹಾಗೂ ಜಯದೇವ ವೃತ್ತಕ್ಕೆ ಬುಧವಾರ ಭೇಟಿ ನೀಡಿ ಪರಿಶೀಲಿಸಿದ ಅವರು, ಮುಂದಿನ ಸೋಮವಾರ ನಡೆಯುವ ಪುನರಾವಲೋಕನ ಸಭೆಯಲ್ಲಿ ಕೈಗೊಂಡ ಕ್ರಮಗಳು, ಅದರಿಂದಾದ ಉಪಯೋಗಗಳ ಬಗ್ಗೆ ಮಾಹಿತಿ ನೀಡಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಜಲಮಂಡಳಿ ಅಧ್ಯಕ್ಷ ಜಯರಾಮ್, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್, ಬಿಡಿಎ ಆಯುಕ್ತ ರಾಜೇಶ್ ಗೌಡ, ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅನ್ಬು ಕುಮಾರ್, ಸಂಚಾರ ಪೊಲೀಸ್ ಜಂಟಿ ಆಯುಕ್ತ ರವಿಕಾಂತೇಗೌಡ, ಸ್ಮಾರ್ಟ್ ಸಿಟಿ/ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಚೋಳನ್, ಬಿಎಂಟಿಸಿ ಐಟಿ ನಿರ್ದೇಶಕ ಸೂರ್ಯ ಸೇನ್, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕರು, ಪಾಲಿಕೆಯ ಎಲ್ಲಾ ವಿಶೇಷ ಆಯುಕ್ತರು, ವಲಯ ಜಂಟಿ ಆಯುಕ್ತರು, ಮುಖ್ಯ ಎಂಜಿನಿಯರ್‌ಗಳು ಹಾಜರಿದ್ದರು.

ರಸ್ತೆ ಗುಂಡಿ ಮುಚ್ಚಲು ಸೂಚನೆ

‘ಸಂಚಾರ ಪೊಲೀಸ್ ಇಲಾಖೆ ನೀರು ನಿಂತುಕೊಳ್ಳುವ ಹಾಗೂ ಹದಗೆಟ್ಟ ರಸ್ತೆಗಳನ್ನು ಗುರುತಿಸಿದೆ. ಇವುಗಳ ದುರಸ್ತಿಯನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಬೇಕು. ನಗರದ ಎಂಟೂ ವಲಯಗಳಲ್ಲಿ ರಸ್ತೆಗುಂಡಿಗಳನ್ನು ಶೀಘ್ರವೇ ಮುಚ್ಚಬೇಕು. ಮುಖ್ಯ, ಪ್ರಮುಖ ರಸ್ತೆಗಳ ಗುಂಡಿಗಳನ್ನು ಮುಚ್ಚುವ ಕೆಲಸ ರಸ್ತೆ ಮೂಲಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ನೇತೃತ್ವದಲ್ಲಿ ತ್ವರಿತವಾಗಿ ನಡೆಯಬೇಕು’ ಎಂದು ರಾಕೇಶ್ ಸಿಂಗ್ ಸೂಚಿಸಿದರು.

ಕುಡಿಯುವ ನೀರು ಹಾಗೂ ಒಳ ಚರಂಡಿ ಕಾಮಗಾರಿ ಪೂರ್ಣಗೊಳಿರುವ ರಸ್ತೆಗಳ ಪಟ್ಟಿಯನ್ನು ಜಲಮಂಡಳಿಯಿಂದ ಪಡೆದು, ಆ ರಸ್ತೆಗಳನ್ನು ದುರಸ್ತಿಗೊಳಿಸಬೇಕು. ಅವೆನ್ಯೂ ರಸ್ತೆ ಕಾಮಗಾರಿಯನ್ನು ಒಂದು ತಿಂಗಳಲ್ಲಿ ಪೂರ್ಣಗೊಳಿಸಬೇಕು ಎಂದು ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕರಿಗೆ ತಾಕೀತು ಮಾಡಿದರು.

ಸಂಚಾರ ದಟ್ಟಣೆ ಜಂಕ್ಷನ್‌ಗಳು

ಗೊರಗುಂಟೆ ಪಾಳ್ಯ, ಹೆಬ್ಬಾಳ, ಕೆ.ಆರ್.ಪುರ ಜಂಕ್ಷನ್, ಕೆ.ಎಸ್. ಲೇಔಟ್ ಜಂಕ್ಷನ್, ಆರ್.ಆರ್-ಎಂ.ಆರ್ ಜಂಕ್ಷನ್, ಸಾರಕ್ಕಿ ಜಂಕ್ಷನ್, ಸಿಲ್ಕ್ ಬೋರ್ಡ್ ಜಂಕ್ಷನ್, ಇಬ್ಲೂರ್ ಜಂಕ್ಷನ್, ಜಯದೇವ ವೃತ್ತ ಹಾಗೂ ಕಾಡುಬೀಸನಹಳ್ಳಿ ಜಂಕ್ಷನ್.

‘ಡಿಸೆಂಬರ್‌ನಲ್ಲಿ ಮತ್ತೊಮ್ಮೆ ಸಿಇಟಿ’

ಕಲಬುರಗಿ: ‘ಅಗತ್ಯ ಬಿದ್ದರೆ ಡಿಸೆಂಬರ್‌ನಲ್ಲಿ ಶಿಕ್ಷಕರ ನೇಮಕಾತಿಗೆ ಮತ್ತೊಮ್ಮೆ ಸಿಇಟಿ ಪರೀಕ್ಷೆ ನಡೆಸಲಾಗುವುದು’ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ಅಫಜಲಪುರ ತಾಲ್ಲೂಕಿನ ದೇವಲಗಾಣಗಾಪುರದಲ್ಲಿ ಮಾತನಾಡಿದ ಅವರು,‘ಸರ್ಕಾರ ಈಗಾಗಲೇ 15 ಸಾವಿರ ಹುದ್ದೆಗೆ ಸಿಇಟಿ ಪರೀಕ್ಷೆ ನಡೆಸಿದೆ. ನಿಗದಿತ ಪ್ರಮಾಣದಲ್ಲಿ ಶಿಕ್ಷಕರು ಪರೀಕ್ಷೆಯಲ್ಲಿ ಉತ್ತೀರ್ಣರಾಗದಿದ್ದರೆ, ಮತ್ತೊಮ್ಮೆ ಪರೀಕ್ಷೆ ನಡೆಸಲಾಗುವುದು’ ಎಂದರು.



ಪೀಣ್ಯ ದಾಸರಹಳ್ಳಿ ಸಮೀಪದ ಹಾವನೂರು ಬಡಾವಣೆಯ ಸೌಂದರ್ಯ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಎಫ್‌ಕೆಸಿಸಿಐ ಅಧ್ಯಕ್ಷ ಡಾ.ಐ.ಎಸ್. ಪ್ರಸಾದ್ ಉದ್ಘಾಟಿಸಿದರು. ಟ್ರಸ್ಟಿಗಳಾದ ಸೌಂದರ್ಯ ಪಿ. ಮಂಜಪ್ಪ, ಸುನಿತಾ, ಕಾರ್ಯನಿರ್ವಾಹಕ ಅಧಿಕಾರಿ ಎಂ. ಕೀರ್ತನ್ ಕುಮಾರ್, ಪ್ರಾಂಶುಪಾಲ ಮಹಾಬಲೇಶ್ವರ ತುಂಗಾ ಹಾಜರಿದ್ದರು

ಸುದ್ದಿ 2 ನಿಮಿಷ


ಎರಡು ತಿಂಗಳಲ್ಲಿ 862 ಟ್ರಾನ್ಸ್‌ಫಾರ್ಮರ್ ಸ್ಥಳಾಂತರ

ಬೆಂಗಳೂರು: ‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿನ ಪಾದಚಾರಿ ಮಾರ್ಗದಲ್ಲಿ ಅಳವಡಿಸಲಾಗಿರುವ 862 ಟ್ರಾನ್ಸ್‌ಫಾರ್ಮರ್‌ಗಳನ್ನು ಎರಡು ತಿಂಗಳಲ್ಲಿ ಸ್ಥಳಾಂತರಿಸಲಾಗುವುದು’ ಎಂದು ಬೆಸ್ಕಾಂ (ವಿದ್ಯುತ್ ಸರಬರಾಜು ಕಂಪನಿ ನಿಯಮಿತ) ಹೈಕೋರ್ಟ್‌ಗೆ ತಿಳಿಸಿದೆ.

‘ಪಾದಚಾರಿ ಮಾರ್ಗ ಹಾಗೂ ರಾಜಕಾಲುವೆಗಳ ಮೇಲಿರುವ ಟ್ರಾನ್ಸ್‌ಫಾರ್ಮರ್‌ಗಳನ್ನು ತೆರವುಗೊಳಿಸಲು ನಿರ್ದೇಶಿಸಬೇಕು’ ಎಂದು ಕೋರಿ ನಿವೃತ್ತ ವಿಂಗ್ ಕಮಾಂಡರ್ ವಿ.ಜಿ. ಅತ್ರಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬೆಸ್ಕಾಂ ಪರ ವಕೀಲರು ಮೆಮೊ (ಜ್ಞಾಪನಾ ಪತ್ರ) ಸಲ್ಲಿಸಿ, ‘ಪಾದಚಾರಿ ಮಾರ್ಗಗಳಲ್ಲಿ ಅಳವಡಿಸಲಾಗಿರುವ 2,587 ಟ್ರಾನ್ಸ್‌ಫಾರ್ಮರ್ ಸ್ಥಳಾಂತರಿಸಲು ಗುರುತಿಸಲಾಗಿದೆ. ಈವರೆಗೆ 620 ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಳಾಂತರಿಸಲಾಗಿದೆ. ಉಳಿದ 862 ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಳಾಂತರಿಸಲು ಎರಡು ತಿಂಗಳ ಗುರಿ ಇರಿಸಿಕೊಳ್ಳಲಾಗಿದೆ. ಇದಕ್ಕೆ ಇನ್ನಷ್ಟು ಕಾಲಾವಕಾಶ ನೀಡಬೇಕು’ ಎಂದು ಕೋರಿದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, ಸ್ಥಳಾಂತರ ಕಾರ್ಯದ ಪ್ರಗತಿ ವರದಿ ಸಲ್ಲಿಸಲು ನಿರ್ದೇಶಿಸಿ ವಿಚಾರಣೆಯನ್ನು ಸೆಪ್ಟೆಂಬರ್ 12ಕ್ಕೆ ಮುಂದೂಡಿದೆ. ಅರ್ಜಿದಾರರ ಪರ ವಕೀಲ ಜಿ.ಆರ್. ಮೋಹನ್ ವಾದ ಮಂಡಿಸಿದರು.



ಬದ್ಧತೆಯಿಂದ ಕಾರ್ಯ ನಿರ್ವಹಿಸಿ: ಹೊಸ ಸಿಬ್ಬಂದಿಗೆ ಕಿವಿಮಾತು

ಬೆಂಗಳೂರು: ಕೆಪಿಟಿಸಿಎಲ್ ಹಾಗೂ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಕಿರಿಯ ಪವರ್ ಮ್ಯಾನ್, ಸ್ಟೇಷನ್ ಪರಿಚಾರಕ ಹುದ್ದೆಗೆ ನೇಮಕಗೊಂಡ ಎಲ್ಲರೂ ಬದ್ಧತೆಯಿಂದ ಕೆಲಸ ಮಾಡಬೇಕು ಎಂದು ಇಂಧನ ಸಚಿವ ವಿ.ಸುನಿಲ್ ಕುಮಾರ್ ಸಲಹೆ ನೀಡಿದ್ದಾರೆ.

‘ನೇಮಕಗೊಂಡ ಎಲ್ಲರನ್ನೂ ಇಂಧನ ಕುಟುಂಬಕ್ಕೆ ಸ್ವಾಗತಿಸುವೆ. ನಿರೀಕ್ಷೆಗೆ ತಕ್ಕಂತೆ, ವೃತ್ತಿ ಧರ್ಮಕ್ಕೆ ಚ್ಯುತಿ ಬಾರದಂತೆ ಕಾರ್ಯನಿರ್ವಹಿಸುವ ನಂಬಿಕೆ ಇದೆ. ಸರ್ಕಾರಿ ನೌಕರಿಗೆ ಸೇರುವುದು ಎಂದರೆ ಉದ್ಯೋಗ ಭದ್ರತೆಗೆ ಮಾತ್ರವಲ್ಲ. ನಿಯೋಜಿತಗೊಂಡ ಕೆಲಸಕ್ಕೆ ಬದ್ಧರಾಗಿರುವುದು ಅಷ್ಟೇ ಮುಖ್ಯ. ಆಗ ಮಾತ್ರ ಬದುಕಿಗೊಂದು ಸಾರ್ಥಕತೆ ಲಭಿಸುತ್ತದೆ. ಕೆಲಸ ಪಡೆಯುವಾಗ ತೋರಿದ ಬದ್ಧತೆ, ಶ್ರದ್ಧೆಯನ್ನು ಕೊನೆಯವರೆಗೂ ಉಳಿಸಿಕೊಳ್ಳಬೇಕು. ಕಳಂಕರಹಿತ ಜೀವನವೂ ಅಗತ್ಯ ಎಂದು ಕಿವಿಮಾತು ಹೇಳಿದ್ದಾರೆ.

ರಾಜ್ಯ ಕಾಂಗ್ರೆಸ್ ನಾಯಕರಲ್ಲಿ ಬೆಂಬಲಿಗರ ಒತ್ತಾಯ

ಸೀತಾರಾಂ ‘ಕೈ’ ಬಿಡದಂತೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ ಟಿಕೆಟ್ ಕೈತಪ್ಪಿದ ಕಾರಣಕ್ಕೆ ಮುನಿಸಿಕೊಂಡಿರುವ ಕೆಪಿಸಿಸಿ ಉಪಾಧ್ಯಕ್ಷ ಎಂ.ಆರ್. ಸೀತಾರಾಂ ಅವರು ಪಕ್ಷ ತೊರೆಯದಂತೆ ಮನವೊಲಿಸಬೇಕು ಎಂದು ಚಿಕ್ಕಬಳ್ಳಾಪುರ ಜಿಲ್ಲೆಯ ಮುಖಂಡರು, ಕಾರ್ಯಕರ್ತರು, ಬಲಿಜ ಸಮುದಾಯದ ಪ್ರಮುಖರು ರಾಜ್ಯ ಕಾಂಗ್ರೆಸ್ ನಾಯಕರನ್ನು ಒತ್ತಾಯಿಸಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಸೋಮವಾರ ಪ್ರತ್ಯೇಕವಾಗಿ ಭೇಟಿ ಮಾಡಿದ ಬೆಂಬಲಿಗರು, ‘ಸೀತಾರಾಂ ಅವರು ಬೇಸರಗೊಂಡಿದ್ದಾರೆ. ಅವರು ಕಾಂಗ್ರೆಸ್ ತ್ಯಜಿಸಿದರೆ ಚಿಕ್ಕಬಳ್ಳಾಪುರ, ಕೋಲಾರ ಭಾಗದಲ್ಲಿ ಪಕ್ಷ ಸಂಘಟನೆಯ ಮೇಲೆ ಪರಿಣಾಮ ಬೀರಲಿದೆ’ ಎಂದರು.

‘ಚಿಕ್ಕಬಳ್ಳಾಪುರ ಜಿಲ್ಲೆಯ ಐದು ತಾಲ್ಲೂಕುಗಳಲ್ಲಿ, ಅದರಲ್ಲೂ ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಬಲಿಜ ಸಮುದಾಯ ಪ್ರಬಲವಾಗಿದೆ. ಈ ಸಮುದಾಯದ ನಾಯಕರೂ ಆಗಿರುವ ಸೀತಾರಾಂ ಅವರನ್ನು ಪಕ್ಷದಲ್ಲಿಯೇ ಉಳಿಸಿಕೊಳ್ಳಬೇಕು’ ಎಂದು ಆಗ್ರಹಿಸಿದರು.

ಸಿದ್ದರಾಮಯ್ಯ ಭರವಸೆ: ಬೆಂಬಲಿಗರ ಜೊತೆ ಮಾತುಕತೆ ನಡೆಸಿದ ಸಿದ್ದರಾಮಯ್ಯ, ‘ವಿಧಾನಸಭೆ, ವಿಧಾನ ಪರಿಷತ್‌ನಲ್ಲಿ ಪಕ್ಷದಿಂದ ಬಲಿಜ ಸಮುದಾಯದ ಪ್ರತಿನಿಧಿಗಳಿಲ್ಲ. ಹೀಗಾಗಿ, ಸೀತಾರಾಂ ಅವರಿಗೆ ಪರಿಷತ್ ಸ್ಥಾನ ನೀಡುವಂತೆ ಹೈಕಮಾಂಡ್ ನಾಯಕರನ್ನು ಒತ್ತಾಯಿಸಿದ್ದೆ. ಆದರೆ, ಕಾರಣಾಂತರಗಳಿಂದ ಅದು ಆಗಲಿಲ್ಲ. 2018ರಲ್ಲಿ ವಿಧಾನಸಭಾ ಚುನಾವಣೆಗೆ ಮಲ್ಲೇಶ್ವರ ಕ್ಷೇತ್ರದಿಂದ ಸ್ಪರ್ಧಿಸುವಂತೆ ಹೇಳಿದ್ದೆವು. ಕೊನೆಕ್ಷಣದಲ್ಲಿ ಅವರು ಒಲವು ತೋರಲಿಲ್ಲ’ ಎಂದು ಅವರು ಹೇಳಿದರು.

‘ಯಾವುದೇ ಕಾರಣಕ್ಕೂ ಪಕ್ಷ ಬಿಡದಂತೆ ಸೀತಾರಾಂ ಅವರಿಗೆ ಹೇಳಿದ್ದೇನೆ. ಮುಂದೆ ವಿಧಾನಸಭೆ ಅಥವಾ ಲೋಕಸಭೆ ಚುನಾವಣೆಯಲ್ಲಿ ಟಿಕೆಟ್ ಕೊಡಿಸಲು ಪ್ರಯತ್ನಿಸುತ್ತೇನೆ ಎಂದಿದ್ದೇನೆ. ಪುತ್ರ ರಕ್ಷಾ ರಾಮಯ್ಯಗೆ ಚಿಕ್ಕಬಳ್ಳಾಪುರದಲ್ಲಿ ಟಿಕೆಟ್ ಕೊಡಿಸುವ ಭರವಸೆ ನೀಡಿದ್ದೇನೆ’ ಎಂದರು.


ಕೆಪಿಸಿಸಿ ಕಚೇರಿಯಲ್ಲಿ ನಡೆದ ಚಿಕ್ಕಬಳ್ಳಾಪುರ ಜಿಲ್ಲೆಯ ಬಲಿಜ ಸಮುದಾಯದ ನಾಯಕರ ಸಭೆಯಲ್ಲಿ ಡಿ.ಕೆ. ಶಿವಕುಮಾರ್, ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ, ಪಕ್ಷದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಕೇಶವರೆಡ್ಡಿ, ಶಾಸಕರಾದ ಶಿವಶಂಕರ ರೆಡ್ಡಿ, ಸುಬ್ಬಾರೆಡ್ಡಿ, ಮಾಜಿ ಶಾಸಕ ಎನ್. ಸಂಪಂಗಿ ಇದ್ದರು.

ಬಿಬಿಎಂಪಿ ವಾರ್ಡ್ ವಿಂಗಡಣೆ: 233 ಆಕ್ಷೇಪಣೆ ಸಲ್ಲಿಕೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ವಿಂಗಡಣೆಗೆ 233 ಆಕ್ಷೇಪಣೆಗಳು ಬಂದಿವೆ.

ಬಿಬಿಎಂಪಿಯ 198 ವಾರ್ಡ್‌ಗಳನ್ನು 243ಕ್ಕೆ ಹೆಚ್ಚಿಸಿ ಸರ್ಕಾರ ಜೂನ್ 23ರಂದು ಅಧಿಸೂಚನೆ ಹೊರಡಿಸಿತ್ತು. ಈ ಕರಡು ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಲಾಗಿದೆ. ಜುಲೈ 4ರ ಬೆಳಿಗ್ಗೆವರೆಗೆ 233 ಆಕ್ಷೇಪಣೆಗಳು ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕಚೇರಿಗೆ ಬಂದಿವೆ. ಜುಲೈ 7ರ ಸಂಜೆ 5ರವರೆಗೆ ಆಕ್ಷೇಪಣೆ ಸಲ್ಲಿಸಲು ಅವಕಾಶವಿದೆ.

ನಗರಾಭಿವೃದ್ಧಿ ಇಲಾಖೆಗೆ ಬಂದಿರುವ ಈ ಆಕ್ಷೇಪಣೆಗಳನ್ನು ಒಟ್ಟುಗೂಡಿಸಿ ಅದರ ವರದಿ ಸಲ್ಲಿಸಲು ಮೂರು ದಿನ ಬೇಕಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅದರ ನಂತರವಷ್ಟೇ ಅದನ್ನು ಪರಿಗಣಿಸಿ ಸರ್ಕಾರ ಅಂತಿಮ ಅಧಿಸೂಚನೆ ಹೊರಡಿಸುತ್ತದೆ. 2020ರ ಬಿಬಿಎಂಪಿ ಕಾಯ್ದೆಗೆ ಅನುಗುಣವಾಗಿ ವಾರ್ಡ್ ಪುನರ್‌ವಿಂಗಡಣೆ ಮಾಡಬೇಕು. ಮೀಸಲಾತಿ ಅಧಿಸೂಚನೆ ಹೊರಡಿಸಬೇಕು. ಇವೆಲ್ಲವನ್ನು ಎಂಟು ವಾರಗಳಲ್ಲಿ ಪೂರ್ಣಗೊಳಿಸಬೇಕು ಎಂದು ಸುಪ್ರೀಂ ಕೋರ್ಟ್ ಮೇ 20ರಂದು ಆದೇಶ ನೀಡಿತ್ತು. ವಾರ್ಡ್ ಹಾಗೂ ಮೀಸಲಾತಿಗೆ ಸಂಬಂಧಿಸಿದಂತೆ ಅಂತಿಮ ಅಧಿಸೂಚನೆಯನ್ನು ರಾಜ್ಯ ಸರ್ಕಾರ ಜುಲೈ 20ರೊಳಗೆ ಹೊರಡಿಸಬೇಕಿದೆ.



ಶ್ರೀ ಕುಮಾರ್ ಅವರ ‘ಹ್ಯಾವಿಂಗ್ ಎ ಬಾಲ್ ಇನ್ ದಿ ವಾಟರ್ಸ್’ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ (ಎಡದಿಂದ) ವಸಂತ ವಿಹಾರ ವಾಟರ್ ಪೋಲೋ ಕ್ಲಬ್‌ನ ಅಧ್ಯಕ್ಷ ಎಸ್. ಎನ್. ಪ್ರಭು, ಕರ್ನಾಟಕ ಈಜು ಸಂಸ್ಥೆ ಅಧ್ಯಕ್ಷ ಗೋಪಾಲ್ ಬಿ ಹೊಸೂರು, ಭಾರತ ಕ್ರೀಡಾ ಪ್ರಾಧಿಕಾರದ ಕ್ಷೇತ್ರೀಯ ನಿರ್ದೇಶಕಿ ರಿತು ಪಾಥಿಕ್, ಕೃತಿಯ ಲೇಖಕ ಶ್ರೀ ಕುಮಾರ್ ಇದ್ದರು

ಪರಪ್ಪನ ಅಗ್ರಹಾರ: ‘ಭ್ರಷ್ಟ ಅಧಿಕಾರಿಗಳಿಗೆ ಕಡಿವಾಣ’

ಶಿವಮೊಗ್ಗ: ಬೆಂಗಳೂರಿನ ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿನ ವ್ಯವಸ್ಥೆಯನ್ನು ಉದ್ದೇಶಪೂರ್ವಕವಾಗಿ ಹಾಳು ಮಾಡುವ ಅಧಿಕಾರಿಗಳ ತಂಡವೇ ಇದೆ. ಅವರದ್ದೇ ಆದ ಸಂಪರ್ಕ ಜಾಲ ಇರುವುದೂ ಬೆಳಕಿಗೆ ಬಂದಿದೆ. ಎಷ್ಟೇ ದೊಡ್ಡ ಅಧಿಕಾರಿಗಳಿದ್ದರೂ ಮಟ್ಟ ಹಾಕಲಾಗುವುದು ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ಕೈದಿಗಳು ಗಾಂಜಾ ಸೇವಿಸುತ್ತಿರುವುದು ಪತ್ತೆಯಾಗುತ್ತಿರುವ ಬಗ್ಗೆ ಸೋಮವಾರ ಪ್ರತಿಕ್ರಿಯಿಸಿದ ಅವರು, ಎಲ್ಲಿ ಲೋಪ ಆಗಿದೆ ಎಂಬುದನ್ನು ಗಮನಿಸಲಿದ್ದೇವೆ. ವ್ಯವಸ್ಥೆ ಹಾಳು ಮಾಡುವ ಅಧಿಕಾರಿಗಳ ವಿಚಾರಣೆ ನಡೆಸುತ್ತೇವೆ. ಆರೋಪ ಸಾಬೀತಾದರೆ ಎಫ್ ಐ‌ಆರ್ ದಾಖಲಿಸಿ ಶಿಕ್ಷಿಸುವ ಕೆಲಸ ನಡೆಯಲಿದೆ ಎಂದರು.

ಪ್ಲಾಸ್ಟಿಕ್ ನಿಷೇಧ ಗೊಂದಲ ಶೀಘ್ರ ನಿವಾರಣೆ: ಬಿಬಿಎಂಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಪ್ಲಾಸ್ಟಿಕ್ ಬಳಕೆ ನಿಷೇಧಕ್ಕೆ ಸಂಬಂಧಿಸಿದಂತೆ ತಪಾಸಣೆಗೆ ಹೋಗುವವರು ಹಾಗೂ ವ್ಯಾಪಾರಿಗಳ ನಡುವೆ ಕೆಲವು ಗೊಂದಲಗಳಿವೆ. ಅವುಗಳನ್ನು ಶೀಘ್ರ ಬಗೆಹರಿಸಲಾಗುತ್ತದೆ ಎಂದು ಬಿಬಿಎಂಪಿ ಘನತ್ಯಾಜ್ಯ ನಿರ್ವಹಣೆ ವಿಭಾಗದ ವಿಶೇಷ ಆಯುಕ್ತ ಹರೀಶ್ ಕುಮಾರ್ ಹೇಳಿದರು.

‘ಪ್ಲಾಸ್ಟಿಕ್ ಬಳಕೆ ಸಂಬಂಧ ನಮ್ಮ ತಂಡ ತಪಾಸಣೆಗೆ ಹೋದಾಗ ವ್ಯಾಪಾರಿಗಳು ಈ ಪ್ಲಾಸ್ಟಿಕ್ ನಿಷೇಧವಾಗಿಲ್ಲ, ಅದಾಗಿಲ್ಲ ಎಂದು ಹೇಳುತ್ತಿದ್ದಾರೆ. ಕೆಲವು ಬಾರಿ ಅಧಿಕಾರಿಗಳಿಗೂ ಗೊಂದಲವಾಗುತ್ತಿದೆ. ಮೊದಲು ಮೈಕ್ರಾನ್ ಆಧಾರದಲ್ಲಿ ಪ್ಲಾಸ್ಟಿಕ್ ನಿಷೇಧವಿತ್ತು. ಈಗ ಏಕಬಳಕೆ ಪ್ಲಾಸ್ಟಿಕ್ ಎಂದು ಸೂಚಿಸಲಾಗಿದೆ. ಈ ಬಗ್ಗೆ ಹೆಚ್ಚಿನ ಸ್ಪಷ್ಟನೆ ಹಾಗೂ ಮಾಹಿತಿಯನ್ನು ಜನರು ಹಾಗೂ ಅಧಿಕಾರಿಗಳಿಗೆ ನೀಡಬೇಕಾಗಿದೆ’ ಎಂದು ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ತಿಳಿಸಿದರು.

‘ವ್ಯಾಪಾರಸ್ಥರು ಹಾಗೂ ನಾಗರಿಕರಿಂದ ನಮಗೆ ದೂರು ಬಂದಿವೆ. ಪ್ಲಾಸ್ಟಿಕ್ ಬಳಕೆ ನಿಷೇಧ ಹಾಗೂ ತಪಾಸಣೆ ಸಂದರ್ಭದಲ್ಲಿ ಅಸಮಾಧಾನ ವ್ಯಕ್ತವಾಗಿದ್ದು ಕಿರುಕುಳ ನೀಡುತ್ತಿದ್ದಾರೆ ಎಂದಿದ್ದಾರೆ. ಹೀಗಾಗಿ ಈ ಬಗ್ಗೆ ಸ್ಪಷ್ಟ ತಿಳಿವಳಿಕೆಯನ್ನು ತಪಾಸಣೆ ನಡೆಸುವ ನಮ್ಮ ಅಧಿಕಾರಿಗಳಿಗೂ ಹಾಗೂ ವ್ಯಾಪಾರಿಗಳಿಗೂ ಶೀಘ್ರವೇ ಮಾಹಿತಿ ನೀಡಲಾಗುತ್ತದೆ’ ಎಂದು ಹೇಳಿದರು.

ನಗರದಲ್ಲಿ ಇಂದು

ಜರ್ನಿ ಆಫ್ ಜಿಎಸ್‌ಟಿ: ಅತಿಥಿಗಳು: ಡಿ.ಪಿ. ನಾಗೇಂದ್ರ ಕುಮಾರ್, ಸಿ. ಶಿಖಾ, ರಂಜನಾ ಝಾ, ಅಧ್ಯಕ್ಷತೆ: ಐ.ಎಸ್. ಪ್ರಸಾದ್, ಆಯೋಜನೆ: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ, ಸ್ಥಳ: ಸರ್.ಎಂ. ವಿಶ್ವೇಶ್ವರಯ್ಯ ಸಭಾಂಗಣ, ಎಫ್‌ಕೆಸಿಸಿಐ, ಕೆ.ಜಿ. ರಸ್ತೆ, ಸಂಜೆ 4.30

ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನದ ರಜತ ಮಹೋತ್ಸವ: ಸಾನ್ನಿಧ್ಯ: ಸಿದ್ಧಲಿಂಗ ಸ್ವಾಮೀಜಿ, ಅತಿಥಿಗಳು: ಕೆ. ಗೋಪಾಲಯ್ಯ, ಎಸ್.ಸುರೇಶ್ ಕುಮಾರ್, ಎಂ.ಕೃಷ್ಣಪ್ಪ, ಎಚ್. ಸಿ. ಬಾಲಕೃಷ್ಣ, ಕೆ.ರಂಗಣ್ಣ, ಪ್ರತಿಮಾ ರಮೇಶ್, ಆಯೋಜನೆ: ಸುಬ್ರಹ್ಮಣ್ಯಸ್ವಾಮಿ ಸೇವಾ ಟ್ರಸ್ಟ್, ಸ್ಥಳ: ಕೆ.ಎಚ್.ಬಿ ಕಾಲೊನಿ, 1ನೇ ಹಂತ, ಬಸವೇಶ್ವರನಗರ, ಸಂಜೆ 5



ಸಿದ್ಧಲಿಂಗ ಸ್ವಾಮೀಜಿ

ಕುವೆಂಪು 118ನೇ ಜಯಂತಿ, ದೇ.ಜವರೇಗೌಡ ಜಯಂತಿ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಮಹೇಶ್ ಜೋಶಿ, ಅತಿಥಿಗಳು: ಸರ್ವೋತ್ತಮ ಶೆಟ್ಟಿ, ಟಿ.ಎಸ್. ನಾಗಾಭರಣ, ನಾಗತಿಹಳ್ಳಿ ರಮೇಶ್, ವ.ಚ. ಚನ್ನೇಗೌಡ, ವಿ.ಮನೋಹರ್, ಡಾ.ಕಿಕ್ಕೇರಿ ಕೃಷ್ಣಮೂರ್ತಿ, ಅಧ್ಯಕ್ಷತೆ: ವೂಡೇ.ಪಿ. ಕೃಷ್ಣ, ಆಯೋಜನೆ: ಕುವೆಂಪು ಕಲಾನಿಕೇತನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ: 5.30

ಸತ್ಯು ಸಂಭ್ರಮ-93 ‘ಗುಲ್–ಎ–ಬಕಾವಲಿ’ ನಾಟಕ ಪ್ರದರ್ಶನ: ಪ್ರಸ್ತುತಿ: ಎಡಿಎ ಬೆಂಗಳೂರು, ರಚನೆ: ಸುಧೀರ್ ಅತ್ತಾವರ, ನಿರ್ದೇಶನ, ಎಂ.ಎಸ್. ಸತ್ಯು, ಸಹ ನಿರ್ದೇಶನ: ದಿವಂಗತ ಎಂ.ಸಿ. ಆನಂದ್, ಸುಷ್ಮಾ ನಾಣಯ್ಯ, ಸಂಗೀತ ಸಮೀರ್ ಕುಲಕರ್ಣಿ, ನೃತ್ಯ ಸಂಯೋಜನೆ: ನಂದಿನಿ ಕೆ. ಮೆಹತಾ, ಆಯೋಜನೆ: ವಿಭಿನ್ನ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ ರಸ್ತೆ, ಸಂಜೆ 6.30



ಪೀಣ್ಯ ಮೇಲ್ಸೇತುವೆಯಲ್ಲಿ ಭಾರಿ ವಾಹನಗಳ ಸಂಚಾರ ತಡೆಯಲು ಕಬ್ಬಿಣದ ತಾತ್ಕಾಲಿಕ ಕಮಾನು ನಿರ್ಮಿಸಲಾಗಿದ್ದು, ಮೇಲ್ಸೇತುವೆಯಲ್ಲಿ ಸಂಚರಿಸಲು ಯತ್ನಿಸಿ ಕಮಾನಿನಲ್ಲಿ ಸಿಲುಕಿದ್ದ ಕ್ಯಾಂಟರನ್ನು ಪೊಲೀಸ್ ಸಿಬ್ಬಂದಿ ವಾಪಸು ಕಳುಹಿಸಿದರು



ಮೇಲ್ಸೇತುವೆ ಕೆಳಭಾಗದ ಎಸ್‌ಆರ್‌ಎಸ್ ಜಂಕ್ಷನ್‌ನಲ್ಲಿ ಸೋಮವಾರ ವಿಪರೀತ ವಾಹನ ದಟ್ಟಣೆ ಉಂಟಾಗಿತ್ತು
– ಪ್ರಜಾವಾಣಿ ಚಿತ್ರಗಳು/ರಂಜು ಪಿ.


'ಪತ್ರ ಬರೆದರೂ ಸಮಸ್ಯೆ ಬಗೆಹರಿಸದ ಸರ್ಕಾರ'



'ಪೀಣ್ಯ ಮೇಲ್ಸೇತುವೆಯಲ್ಲಿ ಭಾರಿ ವಾಹನಗಳ ನಿರ್ಬಂಧದಿಂದ ಸ್ಥಳೀಯರಿಗೆ ಹೆಚ್ಚು ತೊಂದರೆಯಾಗುತ್ತಿರುವ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದರೂ, ಸಮಸ್ಯೆ ಬಗೆಹರಿಯುತ್ತಿಲ್ಲ' ಎಂದು ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕ ಆರ್. ಮಂಜುನಾಥ್ ಅಸಮಾಧಾನ ವ್ಯಕ್ತಪಡಿಸಿದರು.

'ಸಾಮಾನ್ಯ ದಿನಗಳಲ್ಲಿ ದಟ್ಟಣೆ ಹೆಚ್ಚಾಗುತ್ತಿದೆ. ವಾರಾಂತ್ಯದಲ್ಲಂತೂ ಕಿ.ಮೀ. ಗಟ್ಟಲೇ ವಾಹನಗಳು ರಸ್ತೆಯಲ್ಲಿ ನಿಲ್ಲುತ್ತಿವೆ. ಆರು ತಿಂಗಳಿನಿಂದ ಸ್ಥಳೀಯರು ರೋಸಿಹೋಗಿದ್ದಾರೆ. ಇದರ ನಡುವೆಯೇ ಐಕಿಯಾ ಮಳಿಗೆ ಆರಂಭಗೊಂಡಿದ್ದು, ದಟ್ಟಣೆ ಮತ್ತಷ್ಟು ಹೆಚ್ಚಿದೆ. ಸಮಸ್ಯೆ ಬಗೆಹರಿಸಲು ನಿರಂತರವಾಗಿ ಪ್ರಯತ್ನಿಸಲಾಗುತ್ತಿದೆ. ಮುಖ್ಯಮಂತ್ರಿ, ಎನ್‌ಎಚ್‌ಎಐ ಅಧಿಕಾರಿಗಳು, ಕಮಿಷನರ್ ಹಾಗೂ ಇತರರಿಗೆ ಪತ್ರ ಬರೆಯಲಾಗಿದೆ' ಎಂದರು.

'ದಟ್ಟಣೆ ಕಿರಿಕಿರಿ ತಪ್ಪಿಸಿ'



ಮೇಲ್ಸೇತುವೆಯಲ್ಲಿ ವಾಹನಗಳ ಸಂಚಾರ ಬಂದ್ ಆದಾಗಿನಿಂದ ಕೆಳ ರಸ್ತೆಯಲ್ಲಿ ವಿಪರೀತ ದಟ್ಟಣೆ ಉಂಟಾಗುತ್ತಿದೆ. ಇದರಿಂದ ಸ್ಥಳೀಯರು ಕಿರಿಕಿರಿ ಅನುಭವಿಸುತ್ತಿದ್ದು, ಈ ಸಮಸ್ಯೆ ನಿವಾರಣೆಗೆ ಸಂಬಂಧಪಟ್ಟ ಅಧಿಕಾರಿಗಳು ತ್ವರಿತ ಕ್ರಮ ಕೈಗೊಳ್ಳಬೇಕು.

ಲಕ್ಷ್ಮೀನಾರಾಯಣ, ನಾಗಸಂದ್ರ ವಿಕಾಸನಗರ ನಿವಾಸಿ

• 102–103ನೇ ಪಿಲ್ಲರ್ ನಡುವೆ ಬಾಗಿರುವ ಕೇಬಲ್ • ಭಾರಿ ವಾಹನಗಳ ಸಂಚಾರಕ್ಕೆ ನಿರ್ಬಂಧ

ಪೀಣ್ಯ ಮೇಲ್ಸೇತುವೆ ಫಜೀತಿ: ತಪ್ಪದ ಗೋಳು

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ನಗರದ ಪ್ರಮುಖ ರಸ್ತೆಗಳಲ್ಲಿ ಒಂದಾದ ತುಮಕೂರು ರಸ್ತೆಯಲ್ಲಿರುವ ಪೀಣ್ಯ ಮೇಲ್ಸೇತುವೆಯಲ್ಲಿ (ಶಿವಕುಮಾರ ಸ್ವಾಮೀಜಿ ಮೇಲ್ಸೇತುವೆ) ಭಾರಿ ವಾಹನಗಳ ಓಡಾಟಕ್ಕೆ ನಿರ್ಬಂಧ ವಿಧಿಸಿ 6 ತಿಂಗಳಾಗಿದ್ದು, ಸರ್ವೀಸ್ ರಸ್ತೆ ಹಾಗೂ ಕೆಳ ರಸ್ತೆಯಲ್ಲಷ್ಟೇ ಅವು ಸಂಚರಿಸುತ್ತಿರುವುದರಿಂದ ವಿಪರೀತ ದಟ್ಟಣೆಯಲ್ಲಿ ಸಿಲುಕಿ ಜನ ನಿತ್ಯ ಪರದಾಡುತ್ತಿದ್ದಾರೆ.

ಕೆನ್ನಮೆಟಲ್ ಜಂಕ್ಷನ್‌ನಿಂದ (ವಿಡಿಯಾ ವೃತ್ತ) ಗೊರಗುಂಟೆಪಾಳ್ಯ ವೃತ್ತದವರೆಗೆ 2010ರಲ್ಲಿ ಮೇಲ್ಸೇತುವೆ ನಿರ್ಮಿಸಲಾಗಿದ್ದು, ತುಮಕೂರು ರಸ್ತೆ ಹಾಗೂ ಹಾಸನ ರಸ್ತೆ ಮೂಲಕ 25ಕ್ಕೂ ಹೆಚ್ಚು ಜಿಲ್ಲೆ ಮತ್ತು ಹೊರ ರಾಜ್ಯಗಳಿಂದ ಬರುವ ವಾಹನಗಳು ದಟ್ಟಣೆ ಸಮಸ್ಯೆಯಿಲ್ಲದೇ ಬೆಂಗಳೂರು ಪ್ರವೇಶಿಸುತ್ತಿದ್ದವು.

ನಾಗಸಂದ್ರ, ದಾಸರಹಳ್ಳಿ, 8ನೇ ಮೈಲಿ, ಜಾಲಹಳ್ಳಿ ವೃತ್ತ, ಪೀಣ್ಯ ಪೊಲೀಸ್ ಠಾಣೆ ವೃತ್ತ, ಎಸ್‌ಆರ್‌ಎಸ್ ಜಂಕ್ಷನ್ ವೃತ್ತದಲ್ಲಿ ವಿಪರೀತವಾಗಿದ್ದ ದಟ್ಟಣೆಗೂ ಮೇಲ್ಸೇತುವೆ ಪರಿಹಾರವಾಗಿತ್ತು. ರಾಷ್ಟ್ರೀಯ ಹೆದ್ದಾರಿ ಮೂಲಕ ನಗರಕ್ಕೆ ಬರುವ ವಾಹನಗಳು ಮೇಲ್ಸೇತುವೆ ಮೂಲಕ ಸರಾಗವಾಗಿ ಗೊರಗುಂಟೆಪಾಳ್ಯಕ್ಕೆ ಬಂದು ಯಶವಂತಪುರ ಹಾಗೂ ರಾಜ್‌ಕುಮಾರ್ ಸಮಾಧಿ ರಸ್ತೆ (ಹೊರ ವರ್ತುಲ ರಸ್ತೆ), ಪಶ್ಚಿಮ ಕಾರ್ಡ್ ರಸ್ತೆ ಮೂಲಕ ನಿಗದಿತ ಸ್ಥಳಗಳಿಗೆ ಹೋಗುತ್ತಿದ್ದವು. ಅಂದಾಜಿನ ಪ್ರಕಾರ ನಿತ್ಯವೂ ಲಕ್ಷಕ್ಕೂ ಹೆಚ್ಚು ವಾಹನಗಳು ಮೇಲ್ಸೇತುವೆಯಲ್ಲಿ ಸಂಚರಿಸುತ್ತಿದ್ದವು.

'ತುಮಕೂರು ರಸ್ತೆಯಲ್ಲಿ ಸಂಚಾರ ಸುಗಮವಾಗಿದೆ' ಎಂದು ಸ್ಥಳೀಯರು ನಿಟ್ಟುಸಿರು ಬಿಟ್ಟಿದ್ದ ಸಮಯದಲ್ಲೇ 2022ರ ಜನವರಿಯಲ್ಲಿ ಮೇಲ್ಸೇತುವೆಯ 102–103ನೇ ಪಿಲ್ಲರ್ ಮಧ್ಯದಲ್ಲಿ ಕೇಬಲ್‌ಗಳು ಬಾಗಿ ಅಪಾಯದ ಮುನ್ಸೂಚನೆ ಸಿಕ್ಕಿತ್ತು. ಇದನ್ನು ಗಮನಿಸಿದ್ದ ಪೀಣ್ಯ ಸಂಚಾರ ಠಾಣೆ ಪೊಲೀಸರು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ (ಎನ್‌ಎಚ್‌ಎಐ) ಪತ್ರ ಬರೆದು ಎಚ್ಚರಿಸಿದ್ದರು. ವಿಷಯ ತಿಳಿಯುತ್ತಿದ್ದಂತೆ ಎನ್‌ಎಚ್‌ಎಐ, ಮೇಲ್ಸೇತುವೆ ಪ್ರವೇಶವನ್ನು ಬಂದ್ ಮಾಡಿ, ಎಲ್ಲ ಪ್ರಕಾರದ ವಾಹನಗಳ ಸಂಚಾರವನ್ನು ನಿರ್ಬಂಧಿಸಿತ್ತು.

ಕಾರು, ದ್ವಿಚಕ್ರ ವಾಹನ, ಲಘು ಹಾಗೂ ಭಾರಿ ವಾಹನಗಳು ಮೇಲ್ಸೇತುವೆ ಬದಲು, ಸರ್ವೀಸ್ ರಸ್ತೆ ಹಾಗೂ ಕೆಳ ರಸ್ತೆಗಳಲ್ಲಿ ಸಂಚರಿಸಲಾರಂಭಿಸಿದ್ದವು. ಇದರಿಂದ ವಿಪರೀತ ದಟ್ಟಣೆ ಉಂಟಾಗಿ, ಕಿ.ಮೀ. ಗಟ್ಟಲೇ ವಾಹನಗಳು ನಿಂತಲೇ ನಿಲ್ಲಬೇಕಾಗಿತ್ತು. ಸ್ಥಳೀಯರಂತೂ ದಟ್ಟಣೆಯಿಂದ ಬೇಸತ್ತು, ಪೊಲೀಸ್ ಇಲಾಖೆ ಹಾಗೂ ಎನ್‌ಎಚ್‌ಎಐಗೆ ದೂರು ನೀಡಿ ಆಕ್ರೋಶ ಹೊರಹಾಕಿದ್ದರು. ತಜ್ಞರಿಂದ ಪರಿಶೀಲನೆ ನಡೆಸಿದ್ದ ಎನ್‌ಎಚ್‌ಎಐ, ಕಾರು, ದ್ವಿಚಕ್ರ ವಾಹನ ಹಾಗೂ ಲಘು ವಾಹನಗಳಿಗೆ ಮೇಲ್ಸೇತುವೆಯಲ್ಲಿ ಸಂಚರಿಸಲು ಎರಡು ತಿಂಗಳ ಹಿಂದೆಯೇ ಅನುಮತಿ ನೀಡಿತ್ತು. ಆದರೆ, ಭಾರಿ ವಾಹನಗಳ (ಮಲ್ಟಿ ಆ್ಯಕ್ಸಲ್–ಆರ್ಟಿಕ್ಯುಲೇಟೆಡ್ ವಾಹನಗಳು, ಟ್ರಕ್–ಲಾರಿಗಳು, ಬಸ್‌ಗಳು) ಸಂಚಾರಕ್ಕೆ ಇದುವರೆಗೂ ಒಪ್ಪಿಗೆ ಸಿಕ್ಕಿಲ್ಲ.

ಭಾರಿ ವಾಹನಗಳೇ ಹೆಚ್ಚು: 'ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಿಂದ ನಗರಕ್ಕೆ ಬರುವ ವಾಹನಗಳ ಪೈಕಿ, ಭಾರಿ ವಾಹನಗಳ ಸಂಖ್ಯೆಯೇ ಹೆಚ್ಚಿರುತ್ತದೆ. ಅದರಲ್ಲೂ ತುಮಕೂರು ರಸ್ತೆ ಮೂಲಕವೇ ಭಾರಿ ವಾಹನಗಳು ನಗರ ಪ್ರವೇಶಿಸುತ್ತಿವೆ. ಇಂಥ ವಾಹನಗಳು ಸರ್ವೀಸ್ ರಸ್ತೆ ಹಾಗೂ ಕೆಳ ರಸ್ತೆಯಲ್ಲಿ ಓಡಾಡುತ್ತಿರುವುದರಿಂದ ದಟ್ಟಣೆ ಮತ್ತಷ್ಟು ಹೆಚ್ಚಾಗಿದೆ' ಎಂದು ಸಂಚಾರ ವಿಭಾಗದ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಮೇಲ್ಸೇತುವೆಯಲ್ಲಿರುವ ಸಮಸ್ಯೆ ಸರಿಪಡಿಸಿ, ಎಲ್ಲ ಪ್ರಕಾರದ ವಾಹನಗಳ ಸಂಚಾರಕ್ಕೆ ಮುಕ್ತಗೊಳಿಸುವಂತೆ ನಿರಂತರವಾಗಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (ಎನ್‌ಎಚ್‌ಎಐ) ಅಧಿಕಾರಿಗಳನ್ನು ಕೋರಲಾಗುತ್ತಿದೆ. ಆದರೆ, ಅವರಿಂದ ತ್ವರಿತ ಭರವಸೆ ಸಿಗುತ್ತಿಲ್ಲ. ಪರಿಶೀಲನೆ ಹೆಸರಿನಲ್ಲೇ 6 ತಿಂಗಳು ಕಳೆಯಿತು' ಎಂದು ತಿಳಿಸಿದರು.

ತ್ರಿಸದಸ್ಯ ಸಮಿತಿಯಿಂದ ಪರಿಶೀಲನೆ: 'ಮೇಲ್ಸೇತುವೆ ಸದೃಢತೆ ಬಗ್ಗೆ ಭಾರತೀಯ ವಿಜ್ಞಾನ ಸಂಸ್ಥೆ ವರದಿ ನೀಡಿದ್ದು, ಇದರ ಆಧಾರದಲ್ಲಿ ತ್ರಿಸದಸ್ಯ ಸಮಿತಿ ರಚಿಸಲಾಗಿದೆ' ಎಂದು ಎನ್‌ಎಚ್‌ಎಐ ಅಧಿಕಾರಿಯೊಬ್ಬರು ಹೇಳಿದರು.

'ತಜ್ಞರಾದ ಚಂದ್ರಕಿಶನ್, ಮಹೇಶ್ ಟಂಡನ್ ಹಾಗೂ ಡಾ. ಶರ್ಮಾ ಅವರು ತ್ರಿಸದಸ್ಯ ಸಮಿತಿಯಲ್ಲಿದ್ದಾರೆ. ಮೇಲ್ಸೇತುವೆಯಲ್ಲಿ ಈಗಾಗಲೇ ಪರಿಶೀಲನೆ ನಡೆಸಿರುವ ತಂಡ, ಜುಲೈ 15ರಂದು ಅಂತಿಮ ವರದಿ ಸಲ್ಲಿಸುವ ಸಾಧ್ಯತೆ ಇದೆ. ವರದಿ ಆಧರಿಸಿ, ಭಾರಿ ವಾಹನಗಳ ಸಂಚಾರಕ್ಕೆ ಅವಕಾಶ ನೀಡುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

'ಐಕಿಯಾ ಮಳಿಗೆಯಿಂದಲೂ ದಟ್ಟಣೆ'

ನಾಗಸಂದ್ರ ಮೆಟ್ರೊ ನಿಲ್ದಾಣಕ್ಕೆ ಹೊಂದಿಕೊಂಡ ಜಾಗದಲ್ಲಿ 'ಐಕಿಯಾ' ಪೀಠೋಪಕರಣ ಹಾಗೂ ಗೃಹೋಪಯೋಗಿ ವಸ್ತುಗಳ ಮಾರಾಟದ ಬೃಹತ್ ಮಳಿಗೆ ಇದೆ. ನಿತ್ಯವೂ ಸಾವಿರಾರು ಸಂಖ್ಯೆಯಲ್ಲಿ ಮಳಿಗೆಗೆ ಸಾರ್ವಜನಿಕರು ಬಂದು ಹೋಗುತ್ತಿದ್ದು, ಇದರಿಂದಾಗಿ ನಾಗಸಂದ್ರ ಹಾಗೂ ಸುತ್ತಮುತ್ತ ಸ್ಥಳದಲ್ಲಿ ದಟ್ಟಣೆ ಉಂಟಾಗುತ್ತಿದೆ.


'ಐಕಿಯಾ ಮಳಿಗೆ ಎದುರಿನ ರಸ್ತೆಯಲ್ಲಿ ಸಾರ್ವಜನಿಕರ ಓಡಾಟ ಹೆಚ್ಚಿರುತ್ತದೆ. ಇದೇ ರಸ್ತೆಯಲ್ಲೇ ಭಾರಿ ವಾಹನಗಳು ಸಂಚರಿಸುತ್ತಿವೆ. ಕೆಲ ವಾಹನಗಳು ಅಡ್ಡಾದಿಡ್ಡಿ ಓಡಾಡುತ್ತಿವೆ. ಇದರಿಂದಾಗಿ ಇತರೆ ವಾಹನಗಳ ಸಂಚಾರಕ್ಕೆ ತೊಂದರೆಯಾಗಿ, ದಟ್ಟಣೆ ಕಂಡುಬರುತ್ತಿದೆ' ಎಂದು ಸ್ಥಳೀಯ ನಿವಾಸಿಗಳು ದೂರಿದರು.

'ಕಬ್ಬಿಣದ ಕಮಾನಿಗೆ ಡಿಕ್ಕಿ: 10 ವಾಹನಗಳ ವಿರುದ್ಧ ಎಫ್‌ಐಆರ್'

'ಭಾರಿ ವಾಹನಗಳ ಸಂಚಾರ ತಡೆಯಲು ಮೇಲ್ಸೇತುವೆ ಪ್ರವೇಶದಲ್ಲಿ ಕಬ್ಬಿಣದ ತಾತ್ಕಾಲಿಕ ಕಮಾನು ನಿರ್ಮಿಸಲಾಗಿದೆ. ಇಂಥ ಕಮಾನಿಗೆ ವಾಹನಗಳು ಡಿಕ್ಕಿ ಹೊಡೆಯುತ್ತಿದ್ದು,ಚಾಲಕರ ವಿರುದ್ಧ ಇದುವರೆಗೂ 10 ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೀಣ್ಯ ಸಂಚಾರ ಪೊಲೀಸರು ಹೇಳಿದರು.

'ನಿರ್ಬಂಧವಿದ್ದರೂ ಕೆಲ ಚಾಲಕರು ಮೇಲ್ಸೇತುವೆಯಲ್ಲಿ ಸಂಚರಿಸಲು ಮುಂದಾಗುತ್ತಿದ್ದಾರೆ. ಕಬ್ಬಿಣದ ಕಮಾನಿಗೆ ಡಿಕ್ಕಿ ಹೊಡೆದು ಬೀಳುವಂತೆ ಮಾಡಿ, ವಾಹನಗಳನ್ನು ಚಾಲನೆ ಮಾಡಿಕೊಂಡು ಹೋಗುತ್ತಿದ್ದಾರೆ. ಇಂಥ ವರ್ತನೆಯಿಂದ ಪದೇ ಪದೇ ಕಮಾನಿನ ದುರಸ್ತಿ ಕೆಲಸ ನಡೆಯುತ್ತಿದೆ. ಆದರೆ, ಇತ್ತೀಚೆಗೆ ಮೇಲ್ಸೇತುವೆ ಪ್ರವೇಶದಲ್ಲಿ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಅವರೇ ಭಾರಿ ವಾಹನಗಳು ಮೇಲ್ಸೇತುವೆಯಲ್ಲಿ ಸಂಚರಿಸದಂತೆ ತಡೆಯುತ್ತಿದ್ದಾರೆ' ಎಂದು ತಿಳಿಸಿದರು.

'ಮೇಲ್ಸೇತುವೆ ಕೆಳಗಿನ ರಸ್ತೆಯಲ್ಲಿ ನಿತ್ಯವೂ ದಟ್ಟಣೆ ಉಂಟಾಗುತ್ತಿದ್ದು, ವಾಹನಗಳ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಿಕೊಡಲು ಪೊಲೀಸರು ಹರಸಾಹಸಪಡುತ್ತಿದ್ದಾರೆ. ವಾಹನಗಳ ಓಡಾಟ ಹೆಚ್ಚಾಗಿರುವುದರಿಂದ ಬಿಳಿ ಸಮವಸ್ತ್ರವೆಲ್ಲ ಕಪ್ಪು ಬಣ್ಣದಿಂದ ಗಲೀಜಾಗುತ್ತಿದೆ' ಎಂದೂ ಅಳಲು ತೋಡಿಕೊಂಡರು.



ಪೀಣ್ಯ ಮೇಲ್ಸೇತುವೆಯಲ್ಲಿ ಲಘು ವಾಹನಗಳ ಸಂಚಾರಕ್ಕೆ ಮಾತ್ರ ಅವಕಾಶ ನೀಡಲಾಗಿದ್ದು, ಕೆಳರಸ್ತೆಯಲ್ಲಿ ಭಾರಿ ವಾಹನಗಳಿಂದ ದಟ್ಟಣೆ ಉಂಟಾಗಿರುವುದು

ಆರ್‌ಜೆಡಿ, ಎಸ್‌ಪಿ, ಜೆಡಿಎಸ್‌ಗಳಲ್ಲಿ ಆಂತರಿಕ ಪ್ರಜಾಪ್ರಭುತ್ವ ಇಲ್ಲ

ಫಲಾನುಭವಿಗಳಿಗಾಗಿ 'ಮಿಷನ್ ದಕ್ಷಿಣ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಿಷನ್ ದಕ್ಷಿಣ್' ಯೋಜನೆ ಅನ್ವಯ ಜನಸಂಖ್ಯೆಯ ಶೇ 70ಕ್ಕೂ ಹೆಚ್ಚು ಇರುವ ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳನ್ನು ತಲುಪುವುದರ ಜತೆಗೆ, ಆ ಫಲಾನುವಿಗಳನ್ನು ಪಕ್ಷದ ತೆಕ್ಕೆಗೆ ತೆಗೆದುಕೊಳ್ಳಲು ಶ್ರಮಿಸಬೇಕು. ಅದರಿಂದ ದಕ್ಷಿಣವೂ ಸೇರಿ ಎಲ್ಲ ರಾಜ್ಯಗಳಲ್ಲೂ ಪಕ್ಷವು ಗಟ್ಟಿಯಾಗಿ ಬೇರು ಬಿಡಲಿದೆ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದ್ದಾರೆ.

ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಈ ವಿಷಯ ಚರ್ಚೆಯಾಗಿದೆ. ಈ ಸಂಬಂಧ ಪ್ರಧಾನಿ ಮೋದಿಯವರು 'ಸ್ನೇಹಯಾತ್ರೆ'ಯ ಕಲ್ಪನೆಯನ್ನು ಮುಂದಿಟ್ಟಿದ್ದಾರೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬಿಜೆಪಿ ಬೆಳವಣಿಗೆಯಿಂದ ಪರಿವಾರವಾದಿಗಳು, ಜಾತಿವಾದಿಗಳು ಕಂಗೆಟ್ಟಿದ್ದಾರೆ. ಅವರೆಲ್ಲರೂ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಕಾಲ- ಕಾಲಕ್ಕೆ ಕೆಲವು ಮುಖವಾಡ ಹಾಕುತ್ತಾರೆ. ಜಾತ್ಯತೀತತೆಯೂ ಅವರ ಜಾತಿ ರಾಜಕಾರಣವನ್ನು ಮುಚ್ಚಿಕೊಳ್ಳುವ ಮುಖವಾಡ ಎಂದು ರವಿ ಹೇಳಿದರು.

ನ್ಯಾಷನಲ್ ಕಾನ್ಫರೆನ್ಸ್, ಆರ್‌ಜೆಡಿ, ಸಮಾಜವಾದಿ ಪಕ್ಷ, ಜೆಡಿಎಸ್‌ಗಳಲ್ಲಿ ಆಂತರಿಕ ಪ್ರಜಾಪ್ರಭುತ್ವ ಇಲ್ಲ. ಆದರೆ, ಇವರೆಲ್ಲರೂ ಆಂತರಿಕ ಪ್ರಜಾಪ್ರಭುತ್ವದ ಕುರಿತು ಭಾಷಣ ಮಾಡುತ್ತಾರೆ. ಜನ ಇವರನ್ನು ತಿರಸ್ಕರಿಸಿ, ಬಿಜೆಪಿಯನ್ನು ಬೆಂಬಲಿಸುತ್ತಿರುವುದರಿಂದ ಈಗ ಇವರೆಲ್ಲ ಬಾಲ ಸುಟ್ಟ ಬೆಕ್ಕಿನಂತೆ ಚೀರಾಡುತ್ತಿದ್ದಾರೆ ಎಂದರು.

ವಿಧಾನಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ ಇದ್ದರು.

'ದೇವತೆಗಳ ಅಪಮಾನ ಸಲ್ಲ'

ಕೆನಡಾ ಚಲನಚಿತ್ರೋತ್ಸವದಲ್ಲಿ 'ಕಾಳಿ' ಸಿನಿಮಾದ ಪೋಸ್ಟರ್‌ನಲ್ಲಿ ಕಾಳಿ ಮಾತೆ ಸಿಗರೇಟ್ ಸೇದುವ ಚಿತ್ರವಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ನಮ್ಮ ದೇವಾನು ದೇವತೆಗಳನ್ನು ಅಪಮಾನಿಸುವುದು ಎಷ್ಟು ಸೂಕ್ತ? ನಾವು ಬೇರೆಯವರಂತೆ ರೊಚ್ಚಿಗೇಳುವುದಿಲ್ಲ. ಅದು ನಮ್ಮ ದೌರ್ಬಲ್ಯ ಎಂದೂ ಭಾವಿಸಬಾರದು. ನಿರ್ಮಾಪಕರು ಮತ್ತು ನಿರ್ದೇಶಕರು ತಕ್ಷಣ ತಮ್ಮ ನಿಲುವು ಬದಲಿಸಬೇಕು. ಇಲ್ಲದಿದ್ದರೆ ನಾವು ಕಾನೂನಾತ್ಮಕವಾಗಿ ನಮ್ಮ ಧರ್ಮದ ಪರಂಪರೆ ಉಳಿಸಲು ಹೋರಾಡುತ್ತೇವೆ' ಎಂದರು.

'ಆಪರೇಷನ್ ದಕ್ಷಿಣವಲ್ಲ, ಪ್ರಜಾಪ್ರಭುತ್ವದ ನಿರ್ನಾಮ'

ಬೆಂಗಳೂರು: 'ಆಪರೇಷನ್ ದಕ್ಷಿಣ್ ಹೆಸರಿನಲ್ಲಿ ಬಿಜೆಪಿಯು ಪ್ರಾದೇಶಿಕ ಪಕ್ಷಗಳೂ ಸೇರಿದಂತೆ ವಿರೋಧ ಪಕ್ಷಗಳನ್ನು ಮೂಲೋತ್ಪಾಟನೆ ಮಾಡಲು ಹೊರಟಿದೆ. ಭಾರತದಲ್ಲಿ ಪ್ರಜಾಪ್ರಭುತ್ವವನ್ನು ನಿರ್ನಾಮ ಮಾಡಲು ಬಿಜೆಪಿ ಯತ್ನಿಸುತ್ತಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದ್ದಾರೆ.

ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಕೈಗೊಂಡಿರುವ 'ಆಪರೇಷನ್ ದಕ್ಷಿಣ್' ನಿರ್ಣಯದ ಕುರಿತು ಸೋಮವಾರ ಸರಣಿ ಟ್ವೀಟ್ ಮೂಲಕ ಪ್ರತಿಕ್ರಿಯಿಸಿರುವ ಅವರು, 'ದಕ್ಷಿಣ ಭಾರತದಲ್ಲಿ ಪ್ರಾದೇಶಿಕ ಪಕ್ಷಗಳ ಶಕ್ತಿಯಿಂದಾಗಿ ಬಿಜೆಪಿಗೆ ಪ್ರಬಲವಾಗಿ ನೆಲೆಯೂರಲು ಸಾಧ್ಯವಾಗಿಲ್ಲ. ಪ್ರಾದೇಶಿಕ ಪಕ್ಷಗಳನ್ನು ನೇರವಾಗಿ ಮಣಿಸಲಾಗದೆ ಈಗ 'ಪರಿವಾರ ರಾಜಕಾರಣ' ಕೊನೆಗೊಳಿಸುವ ರಾಗ ತೆಗೆದಿದೆ. ಆಪರೇಷನ್ ದಕ್ಷಿಣವಲ್ಲ, ಬಿಜೆಪಿ ಅಸ್ತಿತ್ವಕ್ಕೇ ಆಪರೇಷನ್ ಆಗುವ ಕಾಲ ಸಮೀಪಿಸಿದೆ' ಎಂದಿದ್ದಾರೆ.

'ಜೆಡಿಎಸ್‌ನಲ್ಲಿ ಆಂತರಿಕ ಪ್ರಜಾಪ್ರಭುತ್ವ ಇಲ್ಲ ಎಂದು ಸಿ.ಟಿ. ರವಿ ಹೇಳಿದ್ದಾರೆ. 'ಆಂತರಿಕ ಪ್ರಜಾಪ್ರಭುತ್ವ' ಎಂದರೆ ಪ್ರಧಾನಿ ಮೋದಿ ಎದುರು 'ಸತ್ತ ಸೊಂಟ'ದವರಂತೆ ನಡು ಬಗ್ಗಿಸಿ ತಲೆ ಅಲ್ಲಾಡಿಸುವುದಾ? ಜೀ ಹುಜೂರ್ ಎನ್ನುವುದಾ?' ಎಂದು ಪ್ರಶ್ನಿಸಿದ್ದಾರೆ.

'ಆಪರೇಷನ್ ದಕ್ಷಿಣದ ಹೆಸರಿನಲ್ಲಿ ಕೋಮು ವಿಷದ ಬೀಜ ಬಿತ್ತಿ ಜನರ ಮನಸ್ಸು ಒಡೆಯುವ 'ರಾವಣ ರಾಜಕೀಯ'ಕ್ಕೆ ಗುಪ್ತ ಕಾರ್ಯಸೂಚಿ ಸಿದ್ಧಪಡಿಸಲಾಗಿದೆ. ಕರ್ನಾಟಕದಲ್ಲಿ ಬಿತ್ತಿದ ಕೋಮು ವಿಷದ ರಾಜಕೀಯವನ್ನು ದಕ್ಷಿಣ ಭಾರತದಲ್ಲೂ ಬಿತ್ತಲು ಹೊರಟಿದ್ದಾರೆ' ಎಂದು ವಾಗ್ದಾಳಿ ನಡೆಸಿದ್ದಾರೆ.

ಡಾ.ಗುರುಲಿಂಗ ಕಾಪಸೆಗೆ ಕವಿವ ಸಂಘದ ಪ್ರಶಸ್ತಿ

ಧಾರವಾಡ: 'ಕರ್ನಾಟಕ ವಿದ್ಯಾವರ್ಧಕ ಸಂಘವು ಇದೇ ಮೊದಲ ಬಾರಿಗೆ ನೀಡುತ್ತಿರುವ 'ಸಿರಿಗನ್ನಡಂ ಗೆಲ್ಗೆ ರಾ.ಹ. ದೇಶಪಾಂಡೆ ಪ್ರಶಸ್ತಿ'ಯು ಸಾಹಿತಿ ಡಾ. ಗುರುಲಿಂಗ ಕಾಪಸೆ ಅವರಿಗೆ ಲಭಿಸಿದೆ' ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಹೇಳಿದರು.



ಡಾ. ಗುರುಲಿಂಗ ಕಾಪಸೆ

'ಕನ್ನಡ ಪ್ರಪಂಚ ಪಾಟೀಲ ಪುಟ್ಟಪ್ಪ ಪ್ರಶಸ್ತಿ'ಯು 'ಸಂಯುಕ್ತ ಕರ್ನಾಟಕ' ದಿನಪತ್ರಿಕೆಗೆ ಲಭಿಸಿದೆ. ಎರಡೂ ಪ್ರಶಸ್ತಿಗಳು ತಲಾ ₹50 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿವೆ' ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಷಿಕಾಗೊ: ಗುಂಡಿನ ದಾಳಿಗೆ 6 ಸಾವು

ವಾಷಿಂಗ್ಟನ್ (ಎಎಫ್‌ಪಿ): ಷಿಕಾಗೊದ ಹೈಲ್ಯಾಂಡ್ ಪಾರ್ಕ್‌ನಲ್ಲಿ ಸೋಮವಾರ ನಡೆದ ಅಮೆರಿಕ ಸ್ವಾತಂತ್ರ್ಯೋತ್ಸವ ದಿನದ ಪಥಸಂಚಲನದ ಮೇಲೆ ವ್ಯಕ್ತಿಯೊಬ್ಬ ಮನಸೋಇಚ್ಛೆ ಗುಂಡಿನ ದಾಳಿ ನಡೆಸಿದ್ದು, ಕನಿಷ್ಠ ಆರು ಮಂದಿ ಮೃತಪಟ್ಟಿದ್ದಾರೆ. ಕನಿಷ್ಠ 48 ಮಂದಿ ಗಾಯಗೊಂಡಿದ್ದಾರೆ.

ಶಂಕಿತ ದಾಳಿಕೋರ ಚಾವಣಿಯಲ್ಲಿ ನಿಂತು ದಾಳಿ ನಡೆಸಿರುವ ಸಾಧ್ಯತೆ ಇದೆ. ಆತನಿಗಾಗಿ ಹುಡುಕಾಟ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.



ಆದಿ ಚುಂಚನಗಿರಿಶ್ರೀ ಪೂಜೆ..

ಆದಿ ಚುಂಚನಗಿರಿ ಮಹಾಸಂಸ್ಥಾನ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಅವರು ಅಮೆರಿಕದ ಟೆಕ್ಸಾಸ್ ರಾಜ್ಯದ ಡಲ್ಲಾಸ್ ನಗರದ ಕಾರ್ಯಸಿದ್ಧಿ ಹನುಮಾನ್ ಮಂದಿರದಲ್ಲಿ ಸೋಮವಾರ ಪೂಜೆ ನೆರವೇರಿಸಿದರು.

ಕಸ: ಖಾಸಗಿ ನೌಕರರ ಮುಂದುವರಿಕೆ

ಬೆಂಗಳೂರು: ಪೌರಕಾರ್ಮಿಕರ ಮುಷ್ಕರ ಅಂತ್ಯಗೊಂಡಿದ್ದರೂ ರಸ್ತೆ ಸ್ವಚ್ಛತೆಗೆ ನಿಯೋಜಿಸಿಕೊಂಡಿದ್ದ ಖಾಸಗಿ ನೌಕರರನ್ನು ಬಿಬಿಎಂಪಿ ಮುಂದುವರಿಸಲಿದೆ.

'ರಸ್ತೆಯ ಸ್ವಚ್ಛತೆಗಾಗಿ ಗುತ್ತಿಗೆ ಆಧಾರದಲ್ಲಿ ಯಂತ್ರಗಳು ಹಾಗೂ ಸುಮಾರು ಮೂರು ಸಾವಿರ ಖಾಸಗಿ ನೌಕರರನ್ನು ನೇಮಿಸಿಕೊಳ್ಳಲಾಗಿತ್ತು. ಅವರು ಮುಂದಿನ ಕೆಲಸವನ್ನು ಮುಂದುವರಿಸಲಿದ್ದಾರೆ. ಅವರನ್ನು ತೆಗೆದುಕೊಳ್ಳುವಾಗ 15 ದಿನಕ್ಕಾಗಿ ಎಂದು ಹೇಳಲಾಗಿತ್ತು. ಅದರಂತೆ ಅವರು ಕೆಲಸ ನಿರ್ವಹಿಸಲಿದ್ದಾರೆ' ಎಂದು ಬಿಬಿಎಂಪಿ ಘನತ್ಯಾಜ್ಯ ನಿರ್ವಹಣೆ ವಿಭಾಗದ ವಿಶೇಷ ಆಯುಕ್ತ ಹರೀಶ್ ಕುಮಾರ್ ತಿಳಿಸಿದರು.

'ಸುವಿಧಾ ಕ್ಯಾಬಿನ್‌ಗಳನ್ನು ನಗರದಾದ್ಯಂತ ನಿರ್ಮಿಸಲಾಗುತ್ತಿದೆ. ಈಗಾಗಲೇ 71 ಸುವಿಧಾ ಕ್ಯಾಬಿನ್ ನಿರ್ಮಾಣವಾಗಿವೆ. 180 ಸ್ಥಳಗಳನ್ನು ಅಂತಿಮಗೊಳಿಸಿದ್ದು, ಕೆಲವೆಡೆ ಬದಲಾವಣೆ ಕೇಳಿರುವುದರಿಂದ ಅವುಗಳ ನಿರ್ಮಾಣ ಪೂರ್ಣಗೊಂಡಿಲ್ಲ. ಈ ಕ್ಯಾಬಿನ್‌ಗಳಲ್ಲಿ ಪೌರಕಾರ್ಮಿಕರಿಗಾಗಿ ಶೌಚಾಲಯವಿರುತ್ತದೆ. ಬಟ್ಟೆ ಬದಲಿಸಿಕೊಳ್ಳಲು ಸ್ಥಳಾವಕಾಶ ಇರುತ್ತದೆ. ಜೊತೆಗೆ ಸಾಮಗ್ರಿ ಇರಿಸಿಕೊಳ್ಳಲು ಜಾಗವಿರುತ್ತದೆ' ಎಂದು ಅವರು ಹೇಳಿದರು.

‘ಶೀತಲೀಕರಣ ವಾಹನದಲ್ಲಿ ಮೀನು ಮಾರಾಟಕ್ಕೆ ವ್ಯವಸ್ಥೆ’

ಬೆಂಗಳೂರು: ‘ವಾಹನಗಳಿಗೆ ಶೀತಲೀಕರಣ ಘಟಕ ಅಳವಡಿಸಿ ರಾಜ್ಯದ ವಿವಿಧೆಡೆ ಮೀನು ಮಾರಾಟಕ್ಕೆ ವ್ಯವಸ್ಥೆ ಕಲ್ಪಿಸಲಾಗುವುದು. ಈ ಯೋಜನೆಗೆ ಸದ್ಯದಲ್ಲೇ ಅನುದಾನ ಬಿಡುಗಡೆ ಮಾಡಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದಲ್ಲಿ ಸೋಮವಾರ ಕಬ್ಬನ್ ಪಾರ್ಕ್‌ನ ಸರ್ಕಾರಿ ಮತ್ಸ್ಯಾಲಯದ ಆಧುನೀಕರಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿ, ‘ರಾಜ್ಯದಲ್ಲಿ ಒಳನಾಡು, ಸಮುದ್ರ ಮೀನುಗಾರಿಕೆಗೆ ಸಾಕಷ್ಟು ಅವಕಾಶಗಳಿವೆ. ಮೀನು ಉತ್ಪಾದನೆ, ಸಂಸ್ಕರಣೆ, ರಫ್ತಿಗೆ ಆದ್ಯತೆ ನೀಡಲಾಗುವುದು. ರಾಜ್ಯದ 2,500 ಕೆರೆಗಳಲ್ಲಿ ಒಳನಾಡು ಮೀನುಗಾರಿಕೆಗೆ ಉತ್ತೇಜನ ನೀಡಲಾ ಗುವುದು’ ಎಂದು ಹೇಳಿದರು.

‘ಮೀನುಗಾರರಿಗೆ 10 ಸಾವಿರ ಮನೆ ನಿರ್ಮಿಸಲಾಗುವುದು. ಮೀನುಗಾರರ ಮಕ್ಕಳಿಗೆ ವಿದ್ಯಾನಿಧಿ ಅಡಿ ಸೌಲಭ್ಯ ಕಲ್ಪಿಸಲಾಗುತ್ತಿದೆ. ಒಳನಾಡು ಮೀನುಗಾರಿಕೆಗೆ ಮೀನು ಮರಿ ಉತ್ಪಾದನೆ ಹೆಚ್ಚಿಸಲಾಗುವುದು’ ಎಂದರು. ‘ಕರಾವಳಿಯಲ್ಲಿ ಆಳ ಮೀನುಗಾರಿಕೆಗೆ ಬೋಟ್‌ಗಳು ಇರಲಿಲ್ಲ. ಆಳ ಮೀನುಗಾರಿಕೆಗೆ ಅನುಕೂಲಕ್ಕೆ 100 ಹೊಸ ಬೋಟ್ ವಿತರಣೆ ಮಾಡಲಾಗುವುದು’ ಎಂದರು.

ಕಬ್ಬನ್‌ಪಾರ್ಕ್‌ನಲ್ಲಿ ಮತ್ಸ್ಯಾಲಯದ ಆಧುನೀಕರಣ ಕಾಮಗಾರಿಗೆ ಶಂಕುಸ್ಥಾಪನೆ

ಲಾಲ್‌ಬಾಗ್‌ನಲ್ಲೂ ಅಕ್ವೇರಿಯಂ ನಿರ್ಮಾಣ

ಪ್ರಜಾವಾಣಿ ವಾರ್ತೆ



ಕಬ್ಬನ್‌ಪಾರ್ಕ್‌ನಲ್ಲಿರುವ ಸರ್ಕಾರಿ ಮತ್ಸ್ಯಾಲಯವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವೀಕ್ಷಿಸಿದರು. ವಿಧಾನ ಪರಿಷತ್ ಸದಸ್ಯರಾದ ಡಾ.ಕೆ.ಗೋವಿಂದರಾಜ್, ನಾಗರಾಜ್ ಯಾದವ್ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಕಬ್ಬನ್‌ಪಾರ್ಕ್‌ನಲ್ಲಿ ಮೀನುಗಾರಿಕೆ ಇಲಾಖೆಯು ಸಾರ್ವಜನಿಕ ಸಹಭಾಗಿತ್ವದಲ್ಲಿ ಅಂತರ ರಾಷ್ಟ್ರೀಯ ಮಟ್ಟದ ಅಕ್ವೇರಿಯಂ ನಿರ್ಮಿಸುತ್ತಿದ್ದು, ಆ ಮಾದರಿಯಲ್ಲಿ ಲಾಲ್‌ಬಾಗ್‌ನಲ್ಲೂ ಅಕ್ವೇರಿಯಂ ನಿರ್ಮಾಣ ಮಾಡಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೋಮವಾರ ಹೇಳಿದರು.

ನಗರದ ಕಬ್ಬನ್ ಪಾರ್ಕ್‌ನಲ್ಲಿ ಸರ್ಕಾರಿ ಮತ್ಸ್ಯಾಲಯದ ಆಧುನೀಕರಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

‘ಸೃಷ್ಟಿಕರ್ತನ ಅದ್ಭುತ ಸೃಷ್ಟಿ ಮೀನು. ಈ ಜಲಚರಕ್ಕೆ ತನ್ನದೇ ಸೌಂದರ್ಯ ಹಾಗೂ ಶುದ್ಧತೆ ಇದೆ. ನಾವೇ ಈ ಜಲಚರಕ್ಕೆ ಉಪದ್ರವ ನೀಡುತ್ತಿದ್ದೇವೆ-ಯೇ ಹೊರತು ಅವುಗಳು ನಮಗೆ ಹಾನಿ ಪಡಿಸುತ್ತಿಲ್ಲ. ಮನುಷ್ಯರ ಸ್ವಾರ್ಥದಿಂದ ವರ್ಷದಿಂದ ವರ್ಷಕ್ಕೆ ಪರಿಸರ ಹಾನಿ ಪ್ರಮಾಣ ಹೆಚ್ಚುತ್ತಿದೆ. ಅದನ್ನು ತಡೆಗಟ್ಟಲು ಸರ್ಕಾರ ಕ್ರಮ ಕೈಗೊಂಡಿದೆ’ ಎಂದು ಹೇಳಿದರು.

‘ಮೀನುಗಾರಿಕೆ ಕೃಷಿಯ ಒಂದು ಭಾಗವಾಗಿದೆ. ಸಮಗ್ರ ಕೃಷಿಯಿಂದ ರೈತರಿಗೆ ಲಾಭವಿದೆ. ಒಳನಾಡು ಮೀನುಗಾರಿಕೆಗೆ ಆದ್ಯತೆ ಸಿಗಬೇಕು. ಉತ್ಪಾದನೆ, ಸಂಸ್ಕರಣೆ ಹಾಗೂ ರಫ್ತು ಪ್ರಮಾಣ ಹೆಚ್ಚಿಸಬೇಕು. 330 ಕಿ.ಮೀ. ಕರಾವಳಿ ವ್ಯಾಪ್ತಿ ಇದ್ದು, ಬಂದರು ಅಭಿವೃದ್ಧಿ ಪಡಿಸಲಾಗುತ್ತಿದೆ. ಕರಾವಳಿ ಹಾಗೂ ಒಳನಾಡಿನಲ್ಲಿ ಮೀನು ಸಂಸ್ಕರಣೆಗೆ ಆದ್ಯತೆ ನೀಡಲಾಗುತ್ತಿದೆ’ ಎಂದರು.

ಮೀನುಗಾರಿಕೆಗೆ ಉತ್ತೇಜನ ನೀಡಿದಷ್ಟೂ ಸ್ವಯಂ ಉದ್ಯೋಗ, ಕೃಷಿಯ ಜೊತೆಗೆ ಮೀನುಗಾರಿಕೆಯಿಂದ ಆದಾಯ ಹೆಚ್ಚಳವಾಗಲಿದೆ. ರಾಜ್ಯದ ಒಟ್ಟು ಜಿಡಿಪಿಯಲ್ಲಿ ವೃದ್ಧಿಯಾಗಲಿದೆ ಎಂದರು.

ಕೈಗಾರಿಕೆ ನೀತಿ ಮಾದರಿಯಲ್ಲೇ ಮುಂದಿನ ದಿನಗಳಲ್ಲಿ ಉದ್ಯೋಗ ನೀತಿ ಜಾರಿಗೆ ತರಲಾಗುವುದು ಎಂದರು.

ಮೀನುಗಾರಿಕೆ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವ ಎಸ್. ಅಂಗಾರ ಮಾತನಾಡಿ, ‘ರಾಜ್ಯದಲ್ಲಿ ಒಳನಾಡು ಮೀನುಗಾರಿಕೆಗೆ ಉತ್ತೇಜಿಸಲು 5 ಕಡೆ ಆಧುನಿಕ ಮಾರುಕಟ್ಟೆ ನಿರ್ಮಿಸಲಾಗುತ್ತಿದೆ. ಮೀನುಗಾರಿಕೆ ಕ್ಷೇತ್ರದಲ್ಲಿ ನಿರೀಕ್ಷೆಗೆ ಮೀರಿ ಅಭಿವೃದ್ಧಿ ಕೆಲಸಗಳನ್ನು ನಡೆಸಲಾಗುತ್ತಿದೆ. ಹಳೇ ತಳಿಗಳನ್ನು ಉಳಿಸಿಕೊಳ್ಳಬೇಕಿದೆ’ ಎಂದು ಹೇಳಿದರು.

ಜನರಲ್ಲಿ ಪೌಷ್ಟಿಕಾಂಶ ಹಾಗೂ ರೋಗ ನಿರೋಧಕ ಶಕ್ತಿ ಕಡಿಮೆ ಇದೆ. ಮೀನಿನಲ್ಲಿ ಹೇರಳವಾದ ಪೌಷ್ಟಿಕಾಂಶ ಇದೆ. ಮೀನಿನ ಖಾದ್ಯ ಬಳಕೆಯಿಂದ ಪೌಷ್ಟಿಕಾಂಶ ಹೆಚ್ಚಲಿದೆ ಎಂದು ತಿಳಿಸಿದರು.

ಶಾಸಕ ರಿಜ್ವಾನ್ ಅರ್ಷದ್ ಮಾತನಾಡಿ, ‘ಸಮುದ್ರದ ಸೌಂದರ್ಯದ ಬಗ್ಗೆ ಮೀನುಗಾರರಿಗೆ ಮಾತ್ರ ತಿಳಿದಿದೆ. ಮೀನುಗಾರರಿಗೆ ವೃತ್ತಿಯು ಸುಲಭವಲ್ಲ. ತಮ್ಮ ಪ್ರಾಣವನ್ನೇ ಒತ್ತೆಯಿಟ್ಟು ಮೀನುಗಾರಿಕೆ ಮಾಡಬೇಕು. ಅವರಿಗೆ ಶಕ್ತಿ ತುಂಬಿ ನ್ಯಾಯ ಕಲ್ಪಿಸಬೇಕಿದೆ’ ಎಂದು ಕೋರಿದರು.

ಮೇಲ್ಮನೆ ಸದಸ್ಯ ಡಾ.ಕೆ.ಗೋವಿಂದ ರಾಜ್, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸಲ್ಮಾ ಕೆ. ಫಹೀಮ್, ಮೀನುಗಾರಿಕೆ ಇಲಾಖೆ ನಿರ್ದೇಶಕ ರಾಮಾಚಾರ್ಯ ಹಾಜರಿದ್ದರು.

ಮುಖ್ಯಾಂಶಗಳು

- ಮೀನುಗಾರರಿಗೆ ನ್ಯಾಯ ಕಲ್ಪಿಸಲು ಆಗ್ರಹ
- ಮೀನಿನ ಖಾದ್ಯದಲ್ಲಿ ಹೇರಳ ಪೌಷ್ಟಿಕಾಂಶ
- ಉದ್ಯೋಗ ನೀತಿ ಜಾರಿ: ಮುಖ್ಯಮಂತ್ರಿ ಭರವಸೆ

ಸುದ್ದಿ 2 ನಿಮಿಷ

‘ನಾಟಕ ಪ್ರದರ್ಶನಕ್ಕೆ ಅಡ್ಡಿ: ಸಾಂಸ್ಕೃತಿಕ ಭಯೋತ್ಪಾದನೆ’

ಬೆಂಗಳೂರು: ‘ಶಿವಮೊಗ್ಗದ ಆನವಟ್ಟಿಯಲ್ಲಿ ‘ರಂಗಬೆಳಕು’ ತಂಡ ಪ್ರಸ್ತುತ ಪಡಿಸುತ್ತಿದ್ದ ‘ಜತೆಗಿರುವನು ಚಂದಿರ’ ಪ್ರದರ್ಶನಕ್ಕೆ ಆರೆಸ್ಸೆಸ್ ಅಡ್ಡಿಪಡಿಸಿರುವುದು ಸಾಂಸ್ಕೃತಿಕ ಭಯೋತ್ಪಾದನೆಯಲ್ಲದೆ ಮತ್ತೇನಲ್ಲ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಭಾನುವಾರ ರಾತ್ರಿ ಆಯೋಜಿಸಿದ್ದ ಈ ನಾಟಕ ಪ್ರದರ್ಶನಕ್ಕೆ ಬಜರಂಗದಳ, ಆರೆಸ್ಸೆಸ್ ಕಾರ್ಯಕರ್ತರು ಅಡ್ಡಿಪಡಿಸಿದ್ದರು.



ಈ ಬಗ್ಗೆ ‘ಪ್ರಜಾವಾಣಿ’ಯಲ್ಲಿ ಪ್ರಕಟಗೊಂಡ ಸುದ್ದಿಯನ್ನು ಟ್ಯಾಗ್ ಮಾಡಿ ಟ್ವೀಟ್ ಮಾಡಿರುವ ಸಿದ್ದರಾಮಯ್ಯ, ‘ಈ ಗೂಂಡಾಗಿರಿಯಲ್ಲಿ ಪಾಲುದಾರರಾದ ಎಲ್ಲಾ ದುಷ್ಕರ್ಮಿಗಳನ್ನು ಕೂಡಲೇ ಬಂಧಿಸಿ, ಕಾನೂನು ಕ್ರಮಕೈಗೊಳ್ಳಬೇಕು’ ಎಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ. ‘ಸತ್ಯ, ನ್ಯಾಯ ಮತ್ತು ನಿಜವಾದ ಧರ್ಮದ ಪರವಾಗಿರುವ ಸಾಹಿತ್ಯ, ನಾಟಕ, ಕಲೆ ಮೊದಲಾದ ಸಾಂಸ್ಕೃತಿಕ ಅಭಿವ್ಯಕ್ತಿಗಳನ್ನು ಕಂಡರೆ ಆರೆಸ್ಸೆಸ್ ಮತ್ತು ಪರಿವಾರಕ್ಕೆ ಭಯ. ಈ ದಾಳಿಗೂ ಇದೇ ಕಾರಣ. ಇಂತಹ ಅಡ್ಡಿ- ಆತಂಕಗಳನ್ನು ಎದುರಿಸುವ ಚೈತನ್ಯ ಕನ್ನಡದ ಸಾಂಸ್ಕೃತಿಕ ಲೋಕಕ್ಕೆ ಇದೆ’ ಎಂದಿದ್ದಾರೆ.

‘ಜತೆಗಿರುವನು ಚಂದಿರ’ಗೆ ಅಡ್ಡಿ; ‘ಸಮುದಾಯ’ ಖಂಡನೆ

ಬೆಂಗಳೂರು: ಶಿವಮೊಗ್ಗ ಜಿಲ್ಲೆಯ ಆನವಟ್ಟಿಯಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಜಯಂತ ಕಾಯ್ಕಿಣಿ ಅವರ ‘ಜತೆಗಿರುವನು ಚಂದಿರ’ ನಾಟಕ ಪ್ರದರ್ಶನಕ್ಕೆ ಅಡ್ಡಿಪಡಿಸಿದ ಬಜರಂಗ ದಳ, ಆರ್‌ಎಸ್‌ಎಸ್ ಕಾರ್ಯಕರ್ತರ ನಡೆಯನ್ನು ‘ಸಮುದಾಯ ಕರ್ನಾಟಕ’ ಸಂಘಟನೆ ಖಂಡಿಸಿದೆ.

ಕೆಲವರ ವರ್ತನೆಯಿಂದ ನಾಟಕವನ್ನು ಮಧ್ಯದಲ್ಲೇ ನಿಲ್ಲಿಸುವಂತಾಗಿದೆ. ಕೋಮು ಸಾಮರಸ್ಯ ಮತ್ತು ದೇಶದ ಏಕತೆ ಸಾರುವ ನಾಟಕವಿದು. ಮುಸ್ಲಿಂ ಪಾತ್ರಗಳಿವೆ ಎನ್ನುವ ನೆಪವೊಡ್ಡಿ ನಾಟಕ ಪ್ರದರ್ಶನಕ್ಕೆ ಅಡ್ಡಿಪಡಿಸಲಾಗಿದೆ.

‘ಇದು ಕೇವಲ ಒಂದು ನಾಟಕ ಪ್ರದರ್ಶನಕ್ಕೆ ಒಡ್ಡಿದ ತಡೆಯಲ್ಲ; ಬದಲಿಗೆ ದೇಶದಾದ್ಯಂತ ಜನಸಮುದಾಯಗಳ ಮಧ್ಯೆ ಧರ್ಮ, ಜಾತಿ, ಭಾಷೆಗಳ ಹೆಸರಲ್ಲಿ ಕ್ಷೋಭೆಯನ್ನು ಉಂಟು ಮಾಡುವ ಪ್ರವೃತ್ತಿಯ ಮುಂದುವರಿದ ಭಾಗ. ಕೋಮು ಧ್ರುವೀಕರಣದ ಮೂಲಕ ರಾಜಕೀಯ ಅಧಿಕಾರವನ್ನು ನಿರಂತರಗೊಳಿಸುವ ಹುನ್ನಾರ. ದ್ವೇಷ ಬಿತ್ತಿ ಜನರ ಏಕತೆಯನ್ನು ಛಿದ್ರಗೊಳಿಸುವ ಬದಲು ವಿವೇಕ, ಪ್ರೀತಿ ಮತ್ತು ಪರಸ್ಪರ ವಿಶ್ವಾಸ ಮೂಡಿಸಿ ಸಮಾಜದಲ್ಲಿ ಒಗ್ಗಟ್ಟು ತರುವ ಕೆಲಸ ಇಂದಿನ ತುರ್ತು ಅಗತ್ಯ. ದೇಶ ಒಡೆಯುವ ಇಂತಹ ಪ್ರಯತ್ನಗಳನ್ನು ಸಂಘಟನೆ ಬಲವಾಗಿ ಖಂಡಿಸುತ್ತದೆ. ನಾಟಕ ಪ್ರದರ್ಶನಕ್ಕೆ ಅಡ್ಡಿಪಡಿಸಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಸಂಘಟನೆಯ ಅಧ್ಯಕ್ಷ ಅಚ್ಯುತ, ಪ್ರಧಾನ ಕಾರ್ಯದರ್ಶಿ ದೇವೇಂದ್ರಪ್ಪ ಆಗ್ರಹಿಸಿದ್ದಾರೆ.

ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಆರೋಪ

‘ನಗರದ ಕಳಪೆ ಸ್ಥಿತಿಗೆ ಬಿಜೆಪಿ ಕಾರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದಿ ಎಕನಾಮಿಸ್ಟ್ ಇಂಟೆಲಿಜೆನ್ಸ್ ಯುನಿಟ್ಸ್‌ನ ‘ಜಾಗತಿಕ ಜೀವನಯೋಗ್ಯ ಸೂಚ್ಯಂಕ– 2022’ರ ವರದಿಯಲ್ಲಿ ಬೆಂಗಳೂರು ನಗರ ಅತ್ಯಂತ ಕಳಪೆ ಸ್ಥಾನ ಪಡೆದಿದೆ. ರಾಜ್ಯ ಬಿಜೆಪಿ ಸರ್ಕಾರ ಕಳೆದ 3–4 ವರ್ಷಗಳಲ್ಲಿನ ಕಳಪೆ ಸಾಧನೆಗೆ ಈ ವರದಿಯೇ ಸಾಕ್ಷಿ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಆರೋಪಿಸಿದರು.

ಪಕ್ಷದ ಶಾಸಕ ಪ್ರಿಯಾಂಕ್ ಖರ್ಗೆ ಜೊತೆ ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ‘ಸ್ಥಿರತೆ, ಆರೋಗ್ಯ, ಶಿಕ್ಷಣ, ಸಂಸ್ಕೃತಿ ಮತ್ತು ಪರಿಸರ, ಮೂಲಸೌಕರ್ಯ ಈ ಐದು ಮಾನದಂಡಗಳ ಮೇಲೆ ಈ ಸ್ಥಾನ ನೀಡಲಾಗುತ್ತದೆ’ ಎಂದರು.

‘ಸ್ವಾತಂತ್ರ್ಯ ಬಂದ ನಂತರದ ಎಲ್ಲ ಸರ್ಕಾರಗಳು ಬೆಂಗಳೂರನ್ನು ಕಟ್ಟಿ ಬೆಳೆಸಿದ್ದನ್ನು ಬಿಜೆಪಿ ಸರ್ಕಾರ ಕೇವಲ ಮೂರು ವರ್ಷದಲ್ಲಿ ಕಳಪೆ ಸ್ಥಿತಿಗೆ ತಳ್ಳಿರುವುದು ಶೋಚನೀಯ ವಿಚಾರ. ಸರ್ಕಾರ ಇನ್ನಾದರೂ ಎಚ್ಚೆತ್ತುಕೊಂಡು ಮೂಲಸೌಲಭ್ಯ ಕಲ್ಪಿಸಬೇಕು’ ಎಂದು ಆಗ್ರಹಿಸಿದರು.

‘ಬೆಂಗಳೂರು ಅಭಿವೃದ್ಧಿ ಎಂದರೆ ಕೇವಲ ಬಿಜೆಪಿಯ 15 ಶಾಸಕರ ಕ್ಷೇತ್ರದ ಅಭಿವೃದ್ಧಿಯಲ್ಲ. ₹ 9,819 ಕೋಟಿ ಅನುದಾನವನ್ನು 15 ಬಿಜೆಪಿ ಶಾಸಕರು ಪಡೆದರೆ, ಕಾಂಗ್ರೆಸ್ ಶಾಸಕರಿಗೆ ₹ 2,165 ಕೋಟಿ ನೀಡಿದ್ದಾರೆ. ಜೆಡಿಎಸ್ ಶಾಸಕರಿಗೆ ಹೋರಾಟದ ನಂತರ ₹ 125 ಕೋಟಿ ಕೊಟ್ಟಿದ್ದಾರೆ. ಕಾಂಗ್ರೆಸ್ ಹಾಗೂ ಜೆಡಿಎಸ್ ಶಾಸಕರಿರುವ ಕ್ಷೇತ್ರಗಳಲ್ಲಿ ಅನುದಾನ ನೀಡದಿದ್ದರೆ ಅಭಿವೃದ್ಧಿ ಆಗುವುದಿಲ್ಲ ಎನ್ನುವುದನ್ನು ಮುಖ್ಯಮಂತ್ರಿ ಅರ್ಥ ಮಾಡಿಕೊಳ್ಳಬೇಕು’ ಎಂದರು.

ರಸ್ತೆ ಗುಂಡಿಗಳ ನಗರ: ‘ಗಾರ್ಡನ್ ಸಿಟಿಯಾಗಿದ್ದ ಬೆಂಗಳೂರು ಈಗ ಗಾರ್ಬೇಜ್ ಸಿಟಿಯಾಗಿದೆ. ನಂತರ ಗಾಂಜಾ ಸಿಟಿಯಾಗಿದೆ. ಪಿಂಚಣಿದಾರರ ಸ್ವರ್ಗವಾಗಿದ್ದ ಬೆಂಗಳೂರು ರಸ್ತೆ ಗುಂಡಿಗಳ ನಗರವಾಗಿದೆ. ಸ್ಟಾರ್ಟ್ ಅಪ್ ಸಿಟಿಯಾಗಿದ್ದ ಬೆಂಗಳೂರು ಶಟ್ ಡೌನ್ ಸಿಟಿಯಾಗಿದೆ. ಕಾಸ್ಮೋಪಾಲಿಟನ್ ಸಿಟಿಯಾಗಿದ್ದ ಬೆಂಗಳೂರು ಕೋಮುವಾದದ ನಗರವಾಗಿದೆ. ವಾಣಿಜ್ಯ ಬಂಡವಾಳದ ನಗರವಾಗಿದ್ದ ಬೆಂಗಳೂರು ಭ್ರಷ್ಟಾಚಾರದ ನಗರವಾಗಿದೆ. ‘ಕಲ್ಚರಲ್’ ಕ್ಯಾಪಿಟಲ್ ಆಗಿದ್ದ ಬೆಂಗಳೂರು ‘ಕ್ರೈಂ ಕ್ಯಾಪಿಟಲ್’ ಆಗಿದೆ’ ಎಂದು ಪ್ರಿಯಾಂಕ್ ಖರ್ಗೆ ಆರೋಪಿಸಿದರು.

‘ನಗರದ ಅಭಿವೃದ್ಧಿಗೆ ಬಿಜೆಪಿ ಸರ್ಕಾರ ಮೂರು ವರ್ಷಗಳಲ್ಲಿ ಯಾವುದೇ ಕೆಲಸ ಮಾಡಿಲ್ಲ. ಹೀಗಾಗಿ, ಪ್ರಧಾನಿಯನ್ನು ಕರೆಸಿ ನಮ್ಮ ಸರ್ಕಾರದ ಯೋಜನೆಯನ್ನು ಮತ್ತೆ ಅನಾವರಣ ಮಾಡಿದ್ದಾರೆ. ಪ್ರಧಾನಿ ಬಂದಾಗ ಹಾಕಿದ ರಸ್ತೆ ಒಂದೇ ದಿನಕ್ಕೆ ಕಿತ್ತು ಕೈಗೆ ಬಂದಿದೆ. ಇದರಲ್ಲಿ ಶೇ 40ಕ್ಕೂ ಮೀರಿದ ಭ್ರಷ್ಟಾಚಾರ ನಡೆದಿದೆ ಎಂದು ಕಾಣುತ್ತದೆ. ಕೇಂದ್ರಕ್ಕೆ ಶೇ 40, ರಾಜ್ಯದವರಿಗೆ ಶೇ 40, ರಸ್ತೆಗೆ ಕೇವಲ ಶೇ 20 ಹೋಗಿದೆ’ ಎಂದು ಅವರು ದೂರಿದರು.

ಮನೆಗೆ ನುಗ್ಗಿ ಲೈಂಗಿಕ ದೌರ್ಜನ್ಯ: ಆರೋಪಿಗೆ ಥಳಿಸಿದ ಜನ

ಅಪರಾಧ ಸುದ್ದಿ

ಬೆಂಗಳೂರು: ಈಜಿಪುರದ ಮನೆಯೊಂದಕ್ಕೆ ನುಗ್ಗಿ ಯುವತಿಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪಿ ಮಸೂರಲ್ ಎಂಬಾತನನ್ನು ಸ್ಥಳೀಯರೇ ಹಿಡಿದು ಥಳಿಸಿ ವಿವೇಕ್‌ನಗರ ಠಾಣೆ ಪೊಲೀಸರಿಗೆ ಒಪ್ಪಿಸಿದ್ದಾರೆ.

‘ಪಶ್ಚಿಮ ಬಂಗಾಳದ ಆರೋಪಿ ಮಸೂರಲ್, ಮನೆಯಲ್ಲಿ ಯುವತಿ ಒಂಟಿಯಾಗಿದ್ದನ್ನು ಗಮನಿಸಿ ಕೃತ್ಯ ಎಸಗಿದ್ದ. ಈತನನ್ನು ಬಂಧಿಸಿ, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಹೊರ ರಾಜ್ಯದಿಂದ ನಗರಕ್ಕೆ ಬಂದಿದ್ದ ಯುವತಿ, ನರ್ಸಿಂಗ್ ಕಾಲೇಜೊಂದರಲ್ಲಿ ವ್ಯಾಸಂಗ ಮಾಡುತ್ತಿದ್ದರು. ಈಜಿಪುರದ ಮನೆಯಲ್ಲಿ ಒಂಟಿಯಾಗಿ ಉಳಿದುಕೊಂಡಿದ್ದರು. ಯುವತಿ ಮನೆ ಬಳಿಯೇ ಆರೋಪಿ ಹಲವು ದಿನಗಳಿಂದ ಓಡಾಡುತ್ತಿದ್ದ. ಜುಲೈ 2ರಂದು ರಾತ್ರಿ 2 ಗಂಟೆಗೆ ಮನೆಗೆ ಹೋಗಿ ಬಾಗಿಲು ಬಡಿದಿದ್ದ. ಯುವತಿ ಬಾಗಿಲು ತೆರೆಯುತ್ತಿದ್ದಂತೆ, ಒಳಗೆ ನುಗ್ಗಿ ಕೈ ಹಿಡಿದು ಎಳೆದಾಡಿದ್ದ. ಬಾಗಿಲು ಲಾಕ್ ಮಾಡಿ ಯುವತಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ.’

‘ರಕ್ಷಣೆಗಾಗಿ ಯುವತಿ ಕಿರುಚಾಡಿದ್ದಳು. ಪಕ್ಕದ ಮನೆಯಲ್ಲಿದ್ದ ತೃತೀಯ ಲಿಂಗಿ ಮಹಿರಾ ಹಾಗೂ ಸ್ಥಳೀಯರು ರಕ್ಷಣೆಗೆ ಹೋಗಿದ್ದರು. ಬಾಗಿಲು ಒದ್ದು ತೆಗೆದು, ಆರೋಪಿಯನ್ನು ಹಿಡಿದು ಥಳಿಸಿದ್ದರು’ ಎಂದು ಮೂಲಗಳು ತಿಳಿಸಿವೆ.

ಸುಲಿಗೆ ಪ್ರಕರಣ: ವೈಟ್‌ನರ್ ಜಾಲ ಪತ್ತೆಹಚ್ಚಿದ ಪೊಲೀಸರು

ಬೆಂಗಳೂರು: ಅಪ್ರಾಪ್ತ ವಯಸ್ಸಿನವರಿಗೆ ನಿಯಮಬಾಹಿರವಾಗಿ ವೈಟ್‌ನರ್ ಮಾರಾಟ ಮಾಡಿ ವ್ಯಸನಿಗಳಾಗಿ ಮಾಡುತ್ತಿದ್ದ ಆರೋಪದಡಿ ಪುಸ್ತಕ ಮಳಿಗೆಯೊಂದರ ಮಾಲೀಕ ಲೋಕೇಶ್ ಎಂಬುವರನ್ನು ಸದಾಶಿವನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಯಶವಂತಪುರ ಆರ್‌ಟಿಒ ಕಚೇರಿ ಬಳಿ ಪುಸ್ತಕ ಅಂಗಡಿ ಇಟ್ಟುಕೊಂಡಿದ್ದ ಆರೋಪಿ, ವೈಟ್‌ನರ್ ಹಾಗೂ ಸೊಲ್ಯುಷನ್ಸ್ ಮಾರುತ್ತಿದ್ದ. ಅಂಗಡಿ ಮೇಲೆ ದಾಳಿ ಮಾಡಿ ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸುಲಿಗೆ ಪ್ರಕರಣವೊಂದರಲ್ಲಿ ಆರೋಪಿಗಳಾದ ತಬ್ರೇಜ್ ಹಾಗೂ ತೌಸಿಫ್ ಎಂಬುವರನ್ನು ಇತ್ತೀಚೆಗೆ ಬಂಧಿಸಲಾಗಿತ್ತು. ಅವರಿಬ್ಬರ ವರ್ತನೆ ವಿಚಿತ್ರವಾಗಿತ್ತು. ಆಗಾಗ ವಾಂತಿ ಮಾಡಿಕೊಳ್ಳುತ್ತಿದ್ದರು. ಈ ಬಗ್ಗೆ ವೈದ್ಯರಿಂದ ತಪಾಸಣೆ ನಡೆಸಿದಾಗ, ಅವರಿಬ್ಬರು ವೈಟ್‌ನರ್ ಹಾಗೂ ಸೊಲ್ಯುಷನ್ಸ್ ಮೂಲಕ ಮತ್ತೇರಿಸಿಕೊಳ್ಳುತ್ತಿದ್ದ ವಿಷಯ ಗೊತ್ತಾಯಿತು. ಅವರೇ ಲೋಕೇಶ್ ಅಂಗಡಿ ಹೆಸರನ್ನು ಬಾಯ್ಬಿಟ್ಟಿದ್ದರು.’

‘ಅಂಗಡಿ ಬಳಿ ಕಾದು ನಿಂತು, ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗೆ ವೈಟ್‌ನರ್ ಮಾರುತ್ತಿದ್ದ ವೇಳೆಯಲ್ಲೇ ಲೋಕೇಶ್‌ನನ್ನು ಬಂಧಿಸಲಾಯಿತು. ವೈಟ್‌ನರ್ ಹಾಗೂ ಸೊಲ್ಯುಷನ್ಸ್ ಪ್ಯಾಕ್ ಸಹ ಜಪ್ತಿ ಮಾಡಲಾಗಿದೆ’ ಎಂದು ತಿಳಿಸಿವೆ.

‘ಕೆಲ ಅಪ್ರಾಪ್ತ ವಯಸ್ಸಿನವರು ಹಾಗೂ ಯುವಕರು, ಗಾಂಜಾ ರೀತಿಯಲ್ಲೇ ಮತ್ತು ತರಿಸುವ ವೈಟ್‌ನರ್ ಬಳಸುತ್ತಿದ್ದಾರೆ. ಅಂಥವರು ಲೋಕೇಶ್ ಬಳಿ ವೈಟ್‌ನರ್ ಖರೀದಿಸುತ್ತಿದ್ದರು. ₹ 60ರಿಂದ ₹90ಗೆ ಆರೋಪಿ ವೈಟ್‌ನರ್ ಹಾಗೂ ಸೊಲ್ಯುಷನ್ಸ್ ಮಾರುತ್ತಿದ್ದ’ ಎಂದು ಮೂಲಗಳು ಹೇಳಿವೆ.

ಪ್ರವೀಣ್ ಗೋಡ್ಖಿಂಡಿ ಸೇರಿ ಮೂವರಿಗೆ ಗೌರವ ಡಾಕ್ಟರೇಟ್

ತುಮಕೂರು: ಖ್ಯಾತ ಕೊಳಲು ವಾದಕ ಪ್ರವೀಣ್ ಗೋಡ್ಖಿಂಡಿ, ಬೆಂಗಳೂರಿನ ಯದುಗಿರಿ ಯತಿರಾಜ ಮಠದ ಯತಿರಾಜ ಜೀಯರ್ ಸ್ವಾಮೀಜಿ ಹಾಗೂ ಕೃಷಿ ವಿಜ್ಞಾನಿ ಛತ್ತೀಸ್‌ಗಡದ ರಾಮ್ ಶಂಕರ್ ಕುರೀಲ್ ಅವರನ್ನು ತುಮಕೂರು ವಿಶ್ವವಿದ್ಯಾನಿಲಯವು 2021ನೇ ಸಾಲಿನ ಗೌರವ ಡಾಕ್ಟರೇಟ್‌ಗೆ ಆಯ್ಕೆ ಮಾಡಿದೆ.

ಮಂಗಳವಾರ ನಡೆಯುವ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಗುತ್ತದೆ.

ವಿದ್ಯಾರ್ಥಿಗೆ ದೈಹಿಕ ಶಿಕ್ಷೆ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಗಡಿ ರಸ್ತೆಯಲ್ಲಿರುವ ಖಾಸಗಿ ಅನುದಾನರಹಿತ ಶಾಲೆಯಲ್ಲಿ ವಿದ್ಯಾರ್ಥಿಗೆ ದೈಹಿಕ ಶಿಕ್ಷೆ ನೀಡಿದ ಆರೋಪ ಕೇಳಿಬಂದಿದೆ.

ನೋಟ್‌ಬುಕ್ ತೆಗೆದುಕೊಂಡು ಬಂದಿಲ್ಲವೆಂಬ ಕಾರಣಕ್ಕೆ ಗಣಿತ ಶಿಕ್ಷಕಿ ಆರನೇ ತಗರತಿಯಲ್ಲಿ ಕಲಿಯುತ್ತಿದ್ದ 12 ವರ್ಷದ ಬಾಲಕನಿಗೆ ಹೊಡೆದಿದ್ದಾರೆ ಎಂದು ಪೋಷಕರು ಆರೋಪಿಸಿದ್ದಾರೆ. ಬಾಲಕನನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಕಿವಿ ಮತ್ತು ಕಣ್ಣಿನ ಭಾಗಕ್ಕೆ ಗಾಯವಾಗಿರುವ ಬಗ್ಗೆ ವೈದ್ಯರು ಖಚಿತ ಪಡಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಬಾಲಕನ ತಂದೆ, ‘ನಾನು ಮನೆಗೆ ಬಂದಾಗ ಮಗನ ಕೆನ್ನೆಯ ಭಾಗದಲ್ಲಿ ಕೈ ಬೆರಳಿನಿಂದ ಹೊಡೆದ ಗುರುತುಗಳು ಕಾಣಿಸಿದ್ದವು. ತಕ್ಷಣ ಶಾಲೆಯ ಪ್ರಾಂಶುಪಾಲರಿಗೆ ಕರೆ ಮಾಡಿ ವಿಷಯ ತಿಳಿಸಿದೆ. ಅವರೂ ಆಸ್ಪತ್ರೆಗೆ ಬಂದರು. ಈ ಬಗ್ಗೆ ವೈದ್ಯಕೀಯ– ಕಾನೂನು ಪ್ರಕರಣ ದಾಖಲಿಸುವುದಾಗಿ ತಿಳಿಸಿದಾಗ ಪ್ರಾಂಶುಪಾಲರು ನಮ್ಮನ್ನು ನಿಂದಿಸಿದರು. ಬಳಿಕ ಮಗನನ್ನು ವಾಣಿ ವಿಲಾಸ ಆಸ್ಪತ್ರೆಗೆ ಕರೆದುಕೊಂಡು ಹೋದೆವು’ ಎಂದರು.

ಶಿಕ್ಷಣ ಇಲಾಖೆಯ ಸ್ಥಳೀಯ ಅಧಿಕಾರಿ ಶಾಲೆಗೆ ಭೇಟಿ ನೀಡಿ ಪರಿಶೀಲಿಸಿದರು. ಈ ಬಗ್ಗೆ ಶಾಲೆಗೆ ನೋಟಿಸ್ ನೀಡಲಾಗುವುದು ಎಂದೂ ಅಧಿಕಾರಿ ತಿಳಿಸಿದರು.

‘ಇದು ದೈಹಿಕ ಶಿಕ್ಷೆಯಲ್ಲ. ಆಕಸ್ಮಿಕವಾಗಿ ಸಂಭವಿಸಿದೆ. ಈ ವಿದ್ಯಾರ್ಥಿ ಪ್ರಿ ಪ್ರೈಮರಿಯಿಂದ ನಮ್ಮ ಶಾಲೆಯಲ್ಲಿದ್ದು, ಶಿಕ್ಷಕಿ ಕೂಡ ನಾಲ್ಕು ವರ್ಷದಿಂದ ಶಾಲೆಯಲ್ಲಿ ಇದ್ದಾರೆ. ಬಾಲಕನ ಚಿಕಿತ್ಸೆಗೆ ಮತ್ತು ಪ್ರಕರಣದ ವಿಚಾರಣೆಗೆ ನಾವು ಸಂಪೂರ್ಣ ಸಹಕಾರ ನೀಡುತ್ತೇವೆ’ ಎಂದು ಶಾಲೆಯ ಪ್ರಾಂಶುಪಾಲ ರಾಜೇಶ್ ತಿಳಿಸಿದರು.

ನವೋದ್ಯಮ: ಅತ್ಯುತ್ತಮ ಸಾಧಕ ಪ್ರಶಸ್ತಿ

ಬೆಂಗಳೂರು: ನವೋದ್ಯಮಗಳ ನೆಚ್ಚಿನ ತಾಣವಾಗಿರುವ ಕರ್ನಾಟಕವು ಕೈಗಾರಿಕಾ ಮತ್ತು ಆಂತರಿಕ ವಹಿವಾಟು ಉತ್ತೇಜನಾ ಇಲಾಖೆ (ಡಿಪಿಐಐಟಿ)ಯ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಸ್ಟಾರ್ಟ್ ಅಪ್ ರ್‍ಯಾಂಕಿಂಗ್–2021 ರಲ್ಲಿ ಅತ್ಯುತ್ತಮ ಸಾಧಕ ಪುರಸ್ಕಾರಕ್ಕೆ ಪಾತ್ರವಾಗಿದೆ.

ಎಲೆಕ್ಟ್ರಾನಿಕ್ಸ್, ಐಟಿ–ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಇ.ವಿ.ರಮಣರೆಡ್ಡಿ ಹಾಗೂ ನಿರ್ದೇಶಕಿ ಮೀನಾ ನಾಗರಾಜ್ ಅವರು ರಾಜ್ಯದ ಸ್ಟಾರ್ಟ್ ಅಪ್ ಚಾಂಪಿಯನ್ಸ್ ಪ್ರಶಸ್ತಿಗೆ ಪಾತ್ರವಾಗಿದ್ದಾರೆ. ದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಈ ಪ್ರಶಸ್ತಿಯನ್ನು ಸ್ವೀಕರಿಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿರುವ ಐಟಿ, ಬಿಟಿ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು, ಬೆಂಗಳೂರು ನಗರವನ್ನು ನವೋದ್ಯಮಗಳ ನೆಚ್ಚಿನ ತಾಣವಾಗಿ ಮುಂದುವರಿಯಲು ಸರ್ಕಾರ ಎಲ್ಲ ಪ್ರಯತ್ನಗಳನ್ನು ಮಾಡಲಿದೆ ಎಂದು ಹೇಳಿದರು.

ಚಿತ್ರಾವಳಿ



ಕನಕಪುರ ರಸ್ತೆಯ ಕೆ.ಎಸ್‌.ತಾಂತ್ರಿಕ ಸಂಸ್ಥೆಯ ಕಂಪ್ಯೂಟರ್ ಸೈನ್ಸ್ ಹಾಗೂ ಎಂಜಿನಿಯರಿಂಗ್ ವಿಭಾಗದಿಂದ ಆಯೋಜಿಸಿದ್ದ ಹ್ಯಾಕಥಾನ್ ‘ಸೆಂಟಿನಲ್ ಹ್ಯಾಕ್’ನಲ್ಲಿ ಥಾಲೆಸ್ಟ್ ಸಂಸ್ಥೆಯ ಸಿ.ಇ.ಒ ಪ್ರದೀಪ್ ವಿ. ದೇಸಾಯಿ, ರಾಜಗೋಪಾಲ್ ನಾಯ್ಡು, ಲೀಲಾ ಶಂಕರ್ ರಾವ್ ಮೊದಲಾದವರು ಪಾಲ್ಗೊಂಡಿದ್ದರು



ಬೆಂಗಳೂರು ವಿಶ್ವವಿದ್ಯಾಲಯ ಪ್ರಸಾರಾಂಗದ ನೂತನ ಪುಸ್ತಕ ಪ್ರದರ್ಶನ ಮತ್ತು ಮಾರಾಟ ಮಳಿಗೆಗಳನ್ನು ಕುಲಪತಿ ಪ್ರೊ. ಸಿಂಥಿಯ ಮೆನೆಜಸ್ ಮತ್ತು ಕುಲಸಚಿವ ಪ್ರೊ. ಎಂ. ಕೊಟ್ರೇಶ್ ಉದ್ಘಾಟಿಸಿದರು. ಮೌಲ್ಯಮಾಪನ ಕುಲಸಚಿವ ಪ್ರೊ.ಜೆ.ಟಿ. ದೇವರಾಜು, ಪ್ರಸಾರಾಂಗ ನಿರ್ದೇಶಕ ಪ್ರೊ.ಸಿ.ಬಿ. ಹೊನ್ನುಸಿದ್ಧಾರ್ಥ ಇದ್ದರು.



ಹೆಬ್ಬಾಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಗಂಗಾನಗರ ವಾರ್ಡ್ 5ನೇ ಮುಖ್ಯ ರಸ್ತೆಯನ್ನು ಮಾದರಿ ರಸ್ತೆಯನ್ನಾಗಿ ಅಭಿವೃದ್ಧಿಗೊಳಿಸುವ ಕಾಮಗಾರಿಗೆ ಶಾಸಕ ಬೈರತಿ ಸುರೇಶ್ ಸೋಮವಾರ ಭೂಮಿಪೂಜೆ ನೆರವೇರಿಸಿದರು. ಶಾಸಕರ ಅನುದಾನದಡಿ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುತ್ತದೆ. ಸ್ಥಳೀಯ ನಾಗರಿಕರು ಹಾಗೂ ಕಾಂಗ್ರೆಸ್ ಮುಖಂಡರು ಚಿತ್ರದಲ್ಲಿದ್ದಾರೆ.

ಕೆಎಫ್‌ಸಿಎಸ್‌ಸಿ ಲೇಬರ್ಸ್ ಯೂನಿಯನ್‌ನಿಂದ ಪ್ರತಿಭಟನೆ ಎಚ್ಚರಿಕೆ

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಗ್ರಾಣಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಲೋಡಿಂಗ್ ಮತ್ತು ಅನ್‌ಲೋಡಿಂಗ್ ಕಾರ್ಮಿಕರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಕರ್ನಾಟಕ ಫುಡ್ ಆ್ಯಂಡ್ ಸಪ್ಲೈ ಕಾರ್ಪೊರೇಷನ್ (ಕೆಎಫ್‌ಸಿಎಸ್‌ಸಿ) ಲೋಡಿಂಗ್ ಆ್ಯಂಡ್ ಅನ್‌ಲೋಡಿಂಗ್ ಲೇಬರ್ಸ್ ಯೂನಿಯನ್ ಆಗ್ರಹಿಸಿದೆ.

ರಾಜ್ಯದ ಉಗ್ರಾಣಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ ಇಎಸ್‌ಐ., ಪಿ.ಎಫ್ ಕಾರ್ಮಿಕ ಕಾಯ್ದೆಗಳನ್ನು ಅನುಷ್ಠಾನಗೊಳಿಸಿಲು ಹಲವು ಬಾರಿ ಮನವಿ ಸಲ್ಲಿಸಲಾಗಿದೆ. ಆದರೆ ಇದುವರೆಗೂ ಇಲಾಖೆ ಆಯುಕ್ತರಾಗಲಿ ಸಚಿವರಾಗಲಿ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಸಂಘಟನೆ ಅಧ್ಯಕ್ಷ ಜಿ.ಆರ್. ಶಿವಶಂಕರ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ಪದಾರ್ಥಗಳ ಬೆಲೆ ಏರಿಕೆಯಿಂದ ಜೀವನ ನಿರ್ವಹಿಸಲು ಕಷ್ಟವಾಗಿದೆ. ಒಂದು ಕ್ವಿಂಟಲ್ ತೂಕದ ಮೂಟೆಗಳನ್ನು ಅನ್‌ಲೋಡ್ ಮಾಡಲು 2018ರಲ್ಲಿ ನಿಗದಿಪಡಿಸಿರುವ ₹16 ಕೂಲಿಯನ್ನು ₹25ಕ್ಕೆ ಹೆಚ್ಚಿಸಬೇಕು. ಭಾರತ ಆಹಾರ ನಿಗಮದಿಂದ ಬರುವ ಅನ್‌ಲೋಡಿಂಗ್ ದರವನ್ನು ₹8ರಿಂದ ₹13ಕ್ಕೆ ಹೆಚ್ಚಿಸಬೇಕು. ಕಾರ್ಮಿಕ ಕಾಯ್ದೆಯ ಪ್ರಕಾರ ಕೆಲಸದ ಸಮಯ, ರಜೆ ಮತ್ತು ನಿವೃತ್ತ ಕಾರ್ಮಿಕರಿಗೆ ಗ್ರಾಚ್ಯುಟಿ ಸೌಲಭ್ಯನ್ನು ಒದಗಿಸಬೇಕು. ಕಾರ್ಮಿಕರ ಹೆಚ್ಚುವರಿ ಕೆಲಸಕ್ಕೆ ಹೆಚ್ಚುವರಿ ವೇತನ ನೀಡಬೇಕು ಎಂದು ಸಂಘಟನೆ ಪ್ರಧಾನ ಕಾರ್ಯದರ್ಶಿ ಅಹಮದ್ ಒತ್ತಾಯಿಸಿದರು.

ರಾಜ್ಯದ 191 ಕೆಎಫ್‌ಸಿಎಸ್‌ಸಿ ಉಗ್ರಾಣಗಳಲ್ಲಿ ಕೆಲಸ ಮಾಡುತ್ತಿರುವ 2,150 ಲೋಡಿಂಗ್ ಆ್ಯಂಡ್ ಅನ್‌ಲೋಡಿಂಗ್ ಕಾರ್ಮಿಕರಿಗೆ ಕನಿಷ್ಠ ಮೂಲಸೌಕರ್ಯ ಒದಗಿಸುತ್ತಿಲ್ಲ. 1970ರ ಕಾರ್ಮಿಕ ಕಾಯ್ದೆ ಉಲ್ಲಂಘನೆ ಮಾಡಿರುವ ಜಂಟಿ ನಿರ್ದೇಶಕರು, ಉಪನಿರ್ದೇಶಕರು, ಜಿಲ್ಲಾ ವ್ಯವಸ್ಥಾಪಕರು ಹಾಗೂ ಉಗ್ರಾಣ ವ್ಯವಸ್ಥಾಪಕರ ಮೇಲೆ ಶಿಸ್ತು ಕ್ರಮಗಳನ್ನು ಕೈಗೊಳ್ಳಬೇಕು. 15 ದಿನಗಳಲ್ಲಿ ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ರಾಜ್ಯದ ಎಲ್ಲಾ ಉಗ್ರಾಣಗಳ ಲೋಡಿಂಗ್ ಮತ್ತು ಅನ್‌ಲೋಡಿಂಗ್ ಕಾರ್ಮಿಕರು ಕೆಲಸ ಸ್ಥಗಿತಗೊಳಿಸಿ ಪ್ರತಿಭಟನೆ ಮಾಡಲಾಗುವುದು ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಕೋವಿಡ್: 749 ಪ್ರಕರಣ ದೃಢ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬೆಂಗಳೂರಿನಲ್ಲಿ 696 ಸೇರಿದಂತೆ ರಾಜ್ಯದಲ್ಲಿ 749 ಮಂದಿಗೆ ಸೋಮವಾರ ಕೋವಿಡ್ ಸೋಂಕು ದೃಢಪಟ್ಟಿದೆ.

ಒಂದು ದಿನದ ಅವಧಿಯಲ್ಲಿ 17,979 ಪರೀಕ್ಷೆಗಳನ್ನು ನಡೆಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 4.16ರಷ್ಟಿದೆ. ಕೋವಿಡ್ ಪೀಡಿತರಲ್ಲಿ ಮೈಸೂರಿನಲ್ಲಿ ಒಬ್ಬರು ಸಾವಿಗೀಡಾಗಿದ್ದಾರೆ.

ರಾಜ್ಯದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ ಏರಿಕೆಯಾಗಿದ್ದು, 6,474 ಮಂದಿ ಸೋಂಕಿತರಿದ್ದಾರೆ.

ದಕ್ಷಿಣ ಕನ್ನಡದಲ್ಲಿ 20, ಕೋಲಾರ, ಉಡುಪಿ, ಬೆಂಗಳೂರು ಗ್ರಾಮಾಂತರದಲ್ಲಿ ತಲಾ 4, ಬೀದರ್, ಕಲಬುರಗಿ, ಮೈಸೂರು, ಬಳ್ಳಾರಿಯಲ್ಲಿ ತಲಾ 3, ಶಿವಮೊಗ್ಗದಲ್ಲಿ 2, ಬಾಗಲಕೋಟೆ, ದಾವಣಗೆರೆ, ಹಾಸನ, ಹಾವೇರಿ, ಮಂಡ್ಯ, ರಾಯಚೂರು ಮತ್ತು ಬೆಳಗಾವಿಯಲ್ಲಿ ತಲಾ 1 ಪ್ರಕರಣಗಳು ದೃಢಪಟ್ಟಿವೆ.

ಬೆಂಗಳೂರಿನಲ್ಲಿ 6,075 ಪ್ರಕರಣಗಳಿವೆ. ರಾಜ್ಯದಲ್ಲಿ ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 39.73 ಲಕ್ಷಕ್ಕೆ ಏರಿಕೆಯಾಗಿದೆ. 39.26 ಲಕ್ಷಕ್ಕೂ ಹೆಚ್ಚು ಮಂದಿ ಚೇತರಿಸಿಕೊಂಡಿದ್ದಾರೆ.

ಕೋವಿಡ್‌ಗೆ ಈವರೆಗೆ ಮೃತಪಟ್ಟವರ ಒಟ್ಟು ಸಂಖ್ಯೆ 40,078ಕ್ಕೆ ಏರಿಕೆಯಾಗಿದೆ. ಮರಣ ಪ್ರಮಾಣ ದರ ಶೇ 0.13ರಷ್ಟಿದೆ.

ಸಂಕ್ಷಿಪ್ತ ಸುದ್ದಿ

ನಾಳೆ ವಿಶ್ವ ಪ್ರಾಣಿಜನ್ಯ ರೋಗ ತಡೆ ದಿನಾಚರಣೆ

ಬೆಂಗಳೂರು: ಕರುಣ ಪ್ರಾಣಿ ಕಲ್ಯಾಣ ಸಂಘದ ವತಿಯಿಂದ ಜುಲೈ 6ರಂದು ವಿಶ್ವ ಪ್ರಾಣಿಜನ್ಯ ರೋಗ ತಡೆ ದಿನ ಆಚರಿಸಲಾತ್ತದೆ.

ವಿಶ್ವ ಪ್ರಾಣಿ ಜನ್ಯರೋಗ ದಿನಾಚರಣೆಯ ಪ್ರಯುಕ್ತ ‘ಹುಚ್ಚನಾಯಿ ರೋಗ ನಿರೋಧಕ ಉಚಿತ ಲಸಿಕೆ ಕಾರ್ಯಕ್ರಮ’ವನ್ನು ಕರುಣ ಪ್ರಾಣಿ ಆಶ್ರಯ ಧಾಮ, ಪಶು ವೈದ್ಯಕೀಯ ಕಾಲೇಜು ಆವರಣ, ಹೆಬ್ಬಾಳದಲ್ಲಿ ಹಮ್ಮಿಕೊಳ್ಳಲಾಗಿದೆ. ಎಲ್ಲಾ ಶ್ವಾನ ಮಾಲೀಕರು ತಮ್ಮ ನಾಯಿಗಳಗೆ ಈ ಲಸಿಕೆ ಹಾಕಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ವಿದ್ಯಾ ಪೋಷಕರ ಸಂಘದ ವತಿಯಿಂದ 2022ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

2022ನೇ ಸಾಲಿನ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ 90ರಷ್ಟು ಅಂಕ ಗಳಿಸಿದ ಆರ್ಥಿಕವಾಗಿ ದುರ್ಬಲವಾಗಿರುವ ಒಕ್ಕಲಿಗ ಸಮುದಾಯದ ವಿದ್ಯಾರ್ಥಿಗಳು ಜುಲೈ 16ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ 9844430432 ಮತ್ತು 9845048696ಗೆ ಸಂಪರ್ಕಿಸಬಹುದು.

ಉಚಿತ ವೈದ್ಯಕೀಯ ತಪಾಸಣಾ ಶಿಬಿರ ನಾಳೆ

ಬೆಂಗಳೂರು: ಡಾ.ಶ್ಯಾಮ್ ಪ್ರಸಾದ್ ಮುಖರ್ಜಿ ಅವರ ಜನ್ಮದಿನದ ಅಂಗವಾಗಿ ರಾಜ್ಯ ಬಿಜೆಪಿ ವೈದ್ಯಕೀಯ ಪ್ರಕೋಷ್ಠ ಜುಲೈ 6ರಂದು ಉಚಿತ ವೈದ್ಯಕೀಯ ತಪಾಸಣಾ ಶಿಬಿರ ಹಮ್ಮಿಕೊಂಡಿದೆ.

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಅಂದು ಬೆಳಿಗ್ಗೆ 9ರಿಂದ ಮಧ್ಯಾಹ್ನ 2ರ ವರೆಗೆ ನಡೆಯುವ ಶಿಬಿರದಲ್ಲಿ ಸಾಮಾನ್ಯ ತಪಾಸಣೆ, ಕಣ್ಣಿನ ಪರೀಕ್ಷೆ, ದಂತ ಚಿಕಿತ್ಸಾ ತಪಾಸಣೆ, ರಕ್ತದಾನ ಶಿಬಿರ, ಸಕ್ಕರೆ ಕಾಯಿಲೆ, ರಕ್ತದೊತ್ತಡ ಪರೀಕ್ಷೆ, ಇಸಿಜಿ ಹಾಗೂ ಉಚಿತ ಔಷಧ ವಿತರಣೆ ಇರುತ್ತದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆರೋಗ್ಯ ಸೌಲಭ್ಯಗಳ ಕುರಿತು ಮಾಹಿತಿ, ಪ್ರಾತ್ಯಕ್ಷಿಕೆಯನ್ನೂ ಆಯೋಜಿಸಲಾಗಿದೆ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

ದೇಶದಲ್ಲೇ ಮೊದಲು: ಹಾವು ಕಡಿತದಿಂದ ಸಾವು ತಪ್ಪಿಸಲು ನೆರವು

‘ಪ್ರತಿವಿಷ’ ಸಂಶೋಧನಾ ಕೇಂದ್ರಕ್ಕೆ ಶಂಕುಸ್ಥಾಪನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಾವು ಮತ್ತಿತರ ಜಂತುಗಳ ವಿಷ ನಿಷ್ಕ್ರಿಯಗೊಳಿಸುವ ಔಷಧ ಉತ್ಪಾದಿಸಲು ನೆರವಾಗುವ ‘ಪ್ರತಿವಿಷ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರ’ದ ಕಟ್ಟಡ ನಿರ್ಮಾಣಕ್ಕೆ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಸೋಮವಾರ ‘ಬೆಂಗಳೂರು ಹೆಲಿಕ್ಸ್ ಬಯೋಟೆಕ್ ಪಾರ್ಕ್’ನ ಐಬಿಎಬಿ ಸಂಸ್ಥೆ ಆವರಣದಲ್ಲಿ ಶಂಕುಸ್ಥಾಪನೆ ನೆರವೇರಿಸಿದರು.

‘ಒಟ್ಟು ₹7 ಕೋಟಿ ವೆಚ್ಚದಲ್ಲಿ ನಿರ್ಮಿಸುತ್ತಿರುವ ಈ ಕೇಂದ್ರವು ಐದು ವರ್ಷಗಳಲ್ಲಿ ಅಸ್ತಿತ್ವಕ್ಕೆ ಬರಲಿದೆ. ದೇಶದಲ್ಲಿ ಪ್ರಮುಖವಾಗಿ ಹಾವಿನ ಕಡಿತದಿಂದ ಸಂಭವಿಸುತ್ತಿರುವ ರೈತರ ಸಾವಿನ ಪ್ರಮಾಣವನ್ನು ತಗ್ಗಿಸಲು ಇದು ನೆರವಾಗಲಿದೆ’ ಎಂದು ಸಚಿವರು ತಿಳಿಸಿದರು.

‘ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಇಲಾಖೆಯ-ಕರ್ನಾಟಕ ನಾವೀನ್ಯತಾ ಮತ್ತು ತಂತ್ರಜ್ಞಾನ ಸಂಸ್ಥೆ (ಕಿಟ್ಸ್), ಐಬಿಎಬಿ (ಇನ್‌ಸ್ಟಿಟ್ಯೂಟ್ ಆಫ್ ಬಯೋ ಇನ್‌ಫರ್ಮ್ಯಾಟಿಕ್ಸ್ ಆ್ಯಂಡ್ ಅಪ್ಲೈಡ್ ಬಯೋಟೆಕ್ನಾಲಜಿ) ಮತ್ತು ಭಾರತೀಯ ವಿಜ್ಞಾನ ಸಂಸ್ಥೆಯ ಸಹಭಾಗಿತ್ವದಡಿ ಈ ನೂತನ ಸಂಶೋಧನಾ ಕೇಂದ್ರವು ಅಸ್ತಿತ್ವಕ್ಕೆ ಬರುತ್ತಿದೆ. ಇಂತಹ ಒಂದು ಕೇಂದ್ರವು ಭಾರತದಲ್ಲೇ ಮೊದಲನೆಯದಾಗಿದೆ’ ಎಂದು ವಿವರಿಸಿದರು.

‘16 ಸಾವಿರ ಚದರಡಿ ವಿಸ್ತೀರ್ಣದಲ್ಲಿ ಈ ಕೇಂದ್ರವು ಕಾರ್ಯಾರಂಭ ಮಾಡಲಿದೆ. ಇಲ್ಲಿನ ಸರ್ಪಾಗಾರದಲ್ಲಿ 23 ಪ್ರಭೇದಗಳಿಗೆ ಸೇರಿದ 500ಕ್ಕೂ ಹೆಚ್ಚು ಬಗೆಯ ವಿಷಯುಕ್ತ ಜಂತುಗಳನ್ನು ಅಧ್ಯಯನದ ಸಲುವಾಗಿ ಇಡಲಾಗುವುದು. ಜತೆಗೆ, ಭಾರತೀಯ ಉಪಖಂಡದಲ್ಲಿರುವ ವಿಷಪೂರಿತ ಚೇಳುಗಳು ಮತ್ತು ಜೇಡದ ಹುಳುಗಳು ಕೂಡ ಇರಲಿವೆ. ಪ್ರತಿವಿಷ ಚಿಕಿತ್ಸೆಯಲ್ಲಿ ಸಂಶೋಧನೆ ನಡೆಸುವ ಆಸಕ್ತಿ ಇರುವ ನವೋದ್ಯಮಗಳಿಗೆ ಉತ್ತೇಜನ ನೀಡಲಾಗುವುದು’ ಎಂದರು.

‘ದೇಶದಲ್ಲಿ ಪ್ರತಿ ವರ್ಷ ಸರಾಸರಿ 58 ಸಾವಿರ ಸಾವುಗಳು ಹಾವುಗಳ ಕಡಿತದಿಂದ ಸಂಭವಿಸುತ್ತಿದ್ದು, 1.37 ಲಕ್ಷದಷ್ಟು ಮಂದಿ ಅಂಗವೈಕಲ್ಯಕ್ಕೆ ಒಳಗಾಗುತ್ತಿರುವುದು ಆತಂಕದ ಸಂಗತಿ. ಈ ಕೇಂದ್ರವು ಅತ್ಯಾಧುನಿಕ ವೈಜ್ಞಾನಿಕ ತಂತ್ರಜ್ಞಾನಗಳ ಮೂಲಕ ಪ್ರತಿವಿಷ ಥೆರಪಿಗಳನ್ನು ಅಭಿವೃದ್ಧಿಪಡಿಸಲಿದೆ’ ಎಂದು ವಿವರಿಸಿದರು.

ಕೇಂದ್ರದ ಉದ್ದೇಶದ ಕುರಿತು ಐಐಎಸ್ಸಿಯ ಡಾ.ಕಾರ್ತಿಕ್ ಸುಣಗಾರ್ ಮಾತನಾಡಿ, ‘ಪರಿಸರದಲ್ಲಿ ಹಾವಿನಂತಹ ಸರೀಸೃಪಗಳಿಗೂ ಪ್ರಮುಖ ಸ್ಥಾನವಿದೆ. ಆದರೆ, ಅವುಗಳ ಕಡಿತದಿಂದ ಉಂಟಾಗುವ ಸಾವು ನೋವುಗಳನ್ನು ಕಡಿಮೆ ಮಾಡುವ ಜೀವರಕ್ಷಕ ಪ್ರತಿವಿಷಗಳು ಅತ್ಯಗತ್ಯ. ಈ ನಿಟ್ಟಿನಲ್ಲಿ ಈಗ ಇರುವ ಕೊರತೆಯನ್ನು ಹೋಗಲಾಡಿಸುವುದು ನೂತನ ಕೇಂದ್ರದ ಗುರಿಯಾಗಿದೆ’ ಎಂದು ಅವರು ಹೇಳಿದರು.



ಬೆಂಗಳೂರಿನ ಐಬಿಎಬಿ ಸಂಸ್ಥೆ ಆವರಣದಲ್ಲಿ ಪ್ರತಿವಿಷ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಕ್ಕೆ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಸಿ.ಎನ್‌ ಅಶ್ವತ್ಥನಾರಾಯಣ ಸೋಮವಾರ ಶಂಕುಸ್ಥಾಪನೆ ನೆರವೇರಿಸಿದರು. ಐಐಎಸ್ಸಿಯ ಡಾ.ಕಾರ್ತಿಕ್ ಸುಣಗಾರ್, ಪ್ರೊ.ಎಚ್‌.ಎಸ್‌.ಸುಬ್ರಹ್ಮಣ್ಯ ಇದ್ದರು.

ಏನೇನು ಇರಲಿದೆ?

- ಸರ್ಪಾಗಾರ
- ಸಂಶೋಧನಾ ಪ್ರಯೋಗಾಲಯ
- ವಿಷ ಸಂಗ್ರಹಣಾ ವ್ಯವಸ್ಥೆ
- ಇನ್‌ಕ್ಯೂಬೇಷನ್ ಸೌಲಭ್ಯ
- ಡಿಜಿಟಲ್ ಗ್ರಂಥಾಲಯ

ದೇಶಿ ನಾಯಿಗಳ ರಕ್ಷಣೆಗೆ ₹4–5 ಕೋಟಿ: ರಕ್ಷಿತ್ ಶೆಟ್ಟಿ


ರಕ್ಷಿತ್ ಶೆಟ್ಟಿ

ಬೆಂಗಳೂರು: ನಟ ರಕ್ಷಿತ್‌ಶೆಟ್ಟಿ ನಟನೆಯ '777 ಚಾರ್ಲಿ' ಬಿಡುಗಡೆಯಾಗಿ 25 ದಿನ ಪೂರೈಸಿದೆ. ಇದೇ ಸಂದರ್ಭದಲ್ಲಿ ದೇಶಿ ತಳಿ ನಾಯಿಗಳ ದತ್ತು, ರಕ್ಷಣೆ, ಪೋಷಣೆಗೆ ಚಿತ್ರದ ಲಾಭಾಂಶದ ಶೇ 5ರಷ್ಟು ಹಣವನ್ನು (₹4–5 ಕೋಟಿ) ನೀಡುವುದಾಗಿ ರಕ್ಷಿತ್ ಘೋಷಿಸಿದ್ದಾರೆ.

ಸೋಮವಾರ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಅವರು, 'ಸಿನಿಮಾ ಒಟ್ಟಾರೆ₹150 ಕೋಟಿ ವ್ಯವಹಾರ ಮಾಡಿದೆ. ಇದರಲ್ಲಿ ₹90 ಕೋಟಿಯಿಂದ ₹100 ಕೋಟಿಯವರೆಗೆ ನಿರ್ಮಾಪಕರ ಕೈ ಸೇರಲಿದೆ. ಬಂದಿರುವ ಲಾಭದಲ್ಲಿ ಶೇ 5ರಷ್ಟನ್ನು(₹4–5 ಕೋಟಿ) ಚಾರ್ಲಿ ಹೆಸರಲ್ಲಿ ದೇಶದಾದ್ಯಂತ ಇರುವ ದೇಶೀಯ ತಳಿಯ ನಾಯಿಗಳ ದತ್ತು ಮತ್ತು ರಕ್ಷಣಾ ಕೇಂದ್ರ ಹಾಗೂ ಸರ್ಕಾರೇತರ ಸಂಸ್ಥೆಗಳಿಗೆ ನೀಡಲಿದ್ದೇವೆ. ಈ ಹಣವನ್ನು ನೇರವಾಗಿ ಹಂಚುವ ಉದ್ದೇಶವಿಟ್ಟುಕೊಂಡಿದ್ದೇವೆ. ಹೀಗಾಗದೇ ಇದ್ದಲ್ಲಿ ಚಾರ್ಲಿ ಹೆಸರಲ್ಲಿ ಒಂದು ಖಾತೆ ತೆರೆದು ಅದರಲ್ಲಿ ಈ ಹಣವನ್ನಿಟ್ಟು, ಅದರಿಂದ ಬರುವ ಬಡ್ಡಿಯನ್ನು ಕೇಂದ್ರಗಳಿಗೆ ಪ್ರತಿ ತಿಂಗಳು ಸಹಾಯದ ರೂಪದಲ್ಲಿ ನೀಡುವ ನಿರ್ಧಾರ ಮಾಡಿದ್ದೇವೆ' ಎಂದು ಅವರು ಹೇಳಿದರು.

ಇದೇ 10ರಿಂದ ಪ್ರವೇಶ ಪ್ರಕ್ರಿಯೆ ಶುರು: ಸಚಿವ ಅಶ್ವತ್ಥನಾರಾಯಣ

ಪದವಿ ಕೋರ್ಸ್‌ಗೆ ಆನ್‌ಲೈನ್‌ನಲ್ಲೇ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿನ ಸರ್ಕಾರಿ, ಅನುದಾನಿತ ಪದವಿ ಕಾಲೇಜುಗಳಲ್ಲಿನ ಕೋರ್ಸ್‌ಗಳ ಪ್ರವೇಶಕ್ಕಾಗಿ ಜುಲೈ 10 ರಿಂದ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಲಿದ್ದು, ವಿದ್ಯಾರ್ಥಿಗಳು ಆನ್‌ಲೈನ್ ಮೂಲಕವೇ ಅರ್ಜಿ ಸಲ್ಲಿಸಬೇಕು ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ವಿದ್ಯಾರ್ಥಿಯು ಅಪೇಕ್ಷೆಪಡುವ ಪ್ರತಿಯೊಂದು ಕಾಲೇಜಿಗೆ ಪ್ರತ್ಯೇಕ ಅರ್ಜಿ ಸಲ್ಲಿಸಬೇಕಾಗಿಲ್ಲ. ಒಂದೇ ಲಾಗಿನ್ ಮೂಲಕ ಒಂದಕ್ಕಿಂತ ಹೆಚ್ಚು ಕಾಲೇಜುಗಳಿಗೆ ಅರ್ಜಿ ಸಲ್ಲಿಸಲು ಅವಕಾಶವಿದೆ. ಸದ್ಯವೇ ಕಾಲೇಜುಗಳ ವಾರ್ಷಿಕ ವೇಳಾಪಟ್ಟಿಯನ್ನು ಬಿಡುಗಡೆ ಮಾಡಲಾಗುವುದು ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮುಖ್ಯಾಂಶಗಳು

- ಈ ವರ್ಷದಿಂದ ಆನ್‌ಲೈನ್ ಮೂಲಕವೇ ಅರ್ಜಿ ಸಲ್ಲಿಸಬೇಕು
- ಒಂದೇ ಲಾಗಿನ್ ಮೂಲಕ ಒಂದಕ್ಕಿಂತ ಹೆಚ್ಚು ಕಾಲೇಜುಗಳಿಗೆ ಅರ್ಜಿ
- ವೆಬ್‌ಸೈಟ್‌ನಲ್ಲಿ ವಿದ್ಯಾರ್ಥಿಯ ಸಂಪೂರ್ಣ ಮಾಹಿತಿ ಲಭ್ಯ

430 ಸರ್ಕಾರಿ ಪದವಿ ಕಾಲೇಜುಗಳು

375 ಖಾಸಗಿ ಅನುದಾನಿತ ಪದವಿ ಕಾಲೇಜುಗಳು

ಇದಕ್ಕೆ 'ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ' (ಯುಯುಸಿಎಂಎಸ್) ಎಂದು ಕರೆಯಲಾಗುತ್ತದೆ. ಇಲಾಖೆಯ ವೆಬ್‌ಸೈಟ್‌ನಲ್ಲಿ ಎಲ್ಲ ಕಾಲೇಜುಗಳು ಮತ್ತು ಕೋರ್ಸ್‌ಗಳಿಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿ ಲಭ್ಯವಿರಲಿದೆ. ಬಹುತೇಕ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳ ಸಂಪೂರ್ಣ ಮಾಹಿತಿಯನ್ನು ಅಪ್‌ಲೋಡ್ ಮಾಡಿವೆ. ಮೂರು ವಿಶ್ವವಿದ್ಯಾಲಯಗಳು ಮಂಗಳವಾರ ಮಾಹಿತಿ ಅಪ್‌ಲೋಡ್ ಮಾಡುವ ಪ್ರಕ್ರಿಯೆ ಪೂರ್ಣಗೊಳಿಸಲಿವೆ ಎಂದು ತಿಳಿಸಿದರು.

ಕಾಲೇಜು ಸೇರಬಯಸುವ ವಿದ್ಯಾರ್ಥಿ ತನ್ನ ಪಿಯುಸಿ ನೋಂದಣಿ ಸಂಖ್ಯೆಯನ್ನು ದಾಖಲಿಸಿದರೆ, ಆತನ ಹೆಸರು, ಪೋಷಕರ ಹೆಸರು, ಆಧಾರ್, ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ, ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ ಪ್ರಮುಖವಾದವು.https://uucms.karnataka.gov.in ಮೂಲಕ ಅರ್ಜಿ ಸಲ್ಲಿಸಬೇಕು.

2,100 ಹುದ್ದೆಗಳಿಗೆ ನೇಮಕ

ಬೆಂಗಳೂರು: ವಿವಿಧ ವಿಶ್ವವಿದ್ಯಾಲಯಗಳು ಮತ್ತು ಪದವಿ ಕಾಲೇಜುಗಳಲ್ಲಿ ಖಾಲಿ ಇರುವ 2,100 ಬೋಧಕ ಮತ್ತು ಬೋಧಕೇತರ ಹುದ್ದೆಗಳಿಗೆ ನೇಮಕ ಮಾಡಲು ತೀರ್ಮಾನಿಸಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಈ ಸಂಬಂಧ ಮುಖ್ಯಮಂತ್ರಿ ಸೂಚನೆ ನೀಡಿದ್ದಾರೆ ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಮೂಲಕ ಲಿಖಿತ ಪರೀಕ್ಷೆ ನಡೆಸಿ, ಅರ್ಹರ ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸಲಾಗುವುದು. ಯುಜಿಸಿಯ ನಿಯಮಾವಳಿ ಪ್ರಕಾರವೇ ಅಭ್ಯರ್ಥಿಗಳ ಸಂದರ್ಶನ ನಡೆಯಲಿದೆ. 1:3 ಅಥವಾ 1:5 ಅನುಪಾತದಲ್ಲಿ ಆಯ್ಕೆ ಮಾಡಲಾಗುವುದು. ಇದು ಹೊಸ ವ್ಯವಸ್ಥೆ ಆಗಿದ್ದು ನೇಮಕಾತಿಯಲ್ಲಿ ಪಾರದರ್ಶಕತೆ ತರುವ ಉದ್ದೇಶದಿಂದ ಈ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದರು.

ರಾಜ್ಯದ 440 ಸರ್ಕಾರಿ ಪದವಿ ಕಾಲೇಜು, 100 ಸರ್ಕಾರಿ ಪಾಲಿಟೆಕ್ನಿಕ್ ಮತ್ತು 14 ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಸಂಗ್ರಹವಾಗುವ ಶುಲ್ಕವನ್ನು ಇನ್ನು ಮುಂದೆ ಆಯಾ ಕಾಲೇಜುಗಳ ಖಾತೆಗಳಲ್ಲೇ ಉಳಿಸಿಕೊಳ್ಳಲು ಅವಕಾಶ ನೀಡಲಾಗಿದೆ. ವರ್ಷಕ್ಕೆ ಕನಿಷ್ಠ ₹50 ಕೋಟಿ ಹಣ ಉಳಿಯಲಿದೆ ಎಂದರು.

ಪೌರಕಾರ್ಮಿಕರ ಮುಷ್ಕರ ಅಂತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆಲಸ ಕಾಯಂಗೊಳಿಸಬೇಕು' ಎಂದು ಒತ್ತಾಯಿಸಿ ಪೌರಕಾರ್ಮಿಕರು ರಾಜ್ಯದಾದ್ಯಂತ ನಡೆಸುತ್ತಿದ್ದ ಮುಷ್ಕರ ಸೋಮವಾರ ಅಂತ್ಯವಾಗಿದೆ.


ರಾಜ್ಯದ ಜಿಲ್ಲೆಗಳ ಜಿಲ್ಲಾಧಿಕಾರಿ ಕಚೇರಿ ಹಾಗೂ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಜುಲೈ 1ರಿಂದ ಪೌರಕಾರ್ಮಿಕರು ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದ್ದರು.

ಪೌರಕಾರ್ಮಿಕರ ಸಂಘಟನೆಗಳ ಜಂಟಿ ಹೋರಾಟ ಸಮಿತಿ, ರಾಜ್ಯ ನಗರ ಪಾಲಿಕೆ- ಪುರಸಭೆ- ನಗರಸಭೆ ಪೌರಕಾರ್ಮಿಕರ ಮಹಾ ಸಂಘ ಹಾಗೂ ಬಿಬಿಎಂಪಿ ಪೌರ ಕಾರ್ಮಿಕರ ಸಂಘ ಸಹಯೋಗದಲ್ಲಿ ಮುಷ್ಕರ ನಡೆಯುತ್ತಿತ್ತು.

ರಾಜ್ಯ ಸರ್ಕಾರ ಲಿಖಿತ ಭರವಸೆ ನೀಡುವವರೆಗೂ ಮುಷ್ಕರ ಕೈಬಿಡುವುದಿಲ್ಲವೆಂದು ಪೌರಕಾರ್ಮಿಕರು ಪಟ್ಟು ಹಿಡಿದಿದ್ದರು. ಸೋಮವಾರ ಮುಖ್ಯಮಂತ್ರಿ ಅವರಿಂದ ಲಿಖಿತ ಭರವಸೆ ಸಿಕ್ಕಿದ್ದರಿಂದ, ಮುಷ್ಕರವನ್ನು ಕೈಬಿಡಲಾಗಿದೆ.

'ಎಲ್ಲ ಪೌರಕಾರ್ಮಿಕರನ್ನು ಮೂರು ತಿಂಗಳ ಒಳಗಾಗಿ ಕಾಯಂಗೊಳಿಸು ವುದಾಗಿ ಮುಖ್ಯಮಂತ್ರಿಯವರು ಭರವಸೆ ನೀಡಿದ್ದಾರೆ. 60 ವಯಸ್ಸಿನ ನಂತರ ನಿವೃತ್ತಿಯಾದವರಿಗೆ ಇಡುಗಂಟು ನೀಡುವುದಾಗಿಯೂ ಹೇಳಿದ್ದಾರೆ. ಮಕ್ಕಳ ಖಾಸಗಿ ಶಾಲೆ ಶುಲ್ಕ ಭರಿಸುವ, ವಸತಿ ವ್ಯವಸ್ಥೆ ಒದಗಿಸುವ ಹಾಗೂ ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವ ಸಂಬಂಧ ಸಮಿತಿ ರಚಿಸಿ ತೀರ್ಮಾನ ಕೈಗೊಳ್ಳುವ ಭರವಸೆ ನೀಡಿದ್ದಾರೆ. ಹೀಗಾಗಿ, ಪ್ರತಿಭಟನೆ ಹಿಂಪಡೆಯಲಾಗಿದೆ' ಎಂದು ಮುಖಂಡರು ತಿಳಿಸಿದ್ದಾರೆ.

ಕ್ಷೇಮ ಕುಶಲ



‘ಏನಾದರೂ ಮಾಡುತಿರು ತಮ್ಮ...’

ಡಾ. ಕಿರಣ್ ವಿ. ಎಸ್.

‘ಕೂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು’ ಎನ್ನುವ ಗಾದೆಯಿದೆ.

‘ಹಾಗಿದ್ದರೆ ಇನ್ನು ಮುಂದೆ ನಿಂತೋ, ಮಲಗಿಯೋ ಉಣುತ್ತೇನೆ’ – ಎನ್ನುವ ಕಥಾನಾಯಕನೂ ಬೀಚಿಯವರ ಕಾದಂಬರಿಯಲ್ಲಿ ಇದ್ದಾನೆ! ಅದು ಸ್ವಂತ ಸಂಪಾದನೆಯಿಲ್ಲದೆ, ಹಿರಿಯರು ಮಾಡಿಟ್ಟ ಆಸ್ತಿಯನ್ನು ಕರಗಿಸುವವರ ಕುರಿತಾದ ನಾಣ್ನುಡಿ. ಆದರೆ ಉದ್ಯೋಗ ಮಾಡುವಾಗ ಬಹಳ ಕಾಲ ಒಂದೇ ಸಮನೆ ಕೂತಿದ್ದರೆ? ‘ಅಂಥವರಿಗೆ ಉಳಿಯುವುದು ಸಣ್ಣ ಕುಡಿಕೆಯಷ್ಟು ಆಯುಷ್ಯ ಮಾತ್ರ’ ಎನ್ನುತ್ತಾರೆ ವಿಜ್ಞಾನಿಗಳು. ಒಟ್ಟಿನಲ್ಲಿ ಉಣ್ಣುವುದೋ ಅಥವಾ ಕೆಲಸ ಮಾಡುವುದೋ, ಕೂತು ಮಾಡಬಾರದು ಎಂದಾಯಿತು. ಏನಿದು ಕೂತು ಕೆಲಸ ಮಾಡುವವರ ಕಥೆ?

ಅಮೆರಿಕದ ‘ಮೆಯೊ ಕ್ಲಿನಿಕ್’ ನಿರ್ದೇಶಕರಾದ ಜೇಮ್ಸ್ ಲೆವಿನ್ ಅವರು ಕೆಲವು ವರ್ಷಗಳ ಹಿಂದೆ ಸಂದರ್ಶನವೊಂದರಲ್ಲಿ, ಬಹಳ ಕಾಲ ಸುಮ್ಮನೆ ಕುಳಿತಿರುವವರ ಕುರಿತಾಗಿ ಮಾತನಾಡುತ್ತಾ, ‘ಧೂಮಪಾನ ಮಾಡುವವರಿಗೆ ಆರೋಗ್ಯಸಮಸ್ಯೆಗಳು ಯಾವ ರೀತಿ ಆಗುತ್ತವೋ, ಅದಕ್ಕಿಂತ ಹೆಚ್ಚಿನ ಆರೋಗ್ಯ ಸಮಸ್ಯೆಗಳು ಚಟುವಟಿಕೆ ಇಲ್ಲದೆ ಸುಮ್ಮನೆ ಕುಳಿತಿರುವವರಲ್ಲಿ ಆಗುತ್ತದೆ’ ಎನ್ನುವ ಸಾಮ್ಯ ಕೊಟ್ಟಿದ್ದರು. ಇದು ವಿಶ್ವದಾದ್ಯಂತ ‘ಕುಳಿತಿರುವುದು ಧೂಮಪಾನಕ್ಕೆ ಸಮ’ ಎನ್ನುವ ಅರ್ಥದಲ್ಲಿ ಪ್ರಸಿದ್ಧವಾಯಿತು. ಧೂಮಪಾನದ ಸಾಮ್ಯ ಕೇವಲ ಅಪಾಯದ ಮಟ್ಟವನ್ನು ವಿವರಿಸಲು ಮಾತ್ರ. ಬೇರೆ ಯಾವುದೇ ಚಟಗಳಿಲ್ಲದೆ ಕೇವಲ ಧೂಮಪಾನ ಮಾತ್ರ ಮಾಡುವವರಿಗೂ ಬಹಳಷ್ಟು ಆರೋಗ್ಯ ಸಮಸ್ಯೆಗಳು ಉಂಟಾಗುತ್ತವೆ. ಅಂತೆಯೇ, ಬೇರೆ ಯಾವುದೇ ದುರಭ್ಯಾಸಗಳು ಇಲ್ಲದವರೂ ದಿನದ ಬಹುಕಾಲ ಚಟುವಟಿಕೆಯಿಲ್ಲದೆ ಕೂರುವುದು ಹಲವಾರು ಅನಾರೋಗ್ಯಗಳಿಗೆ ದಾರಿಯಾಗುತ್ತದೆ ಎಂದು ಅರ್ಥ.

ಚಟುವಟಿಕೆಯಿಲ್ಲದೆ ಕುಳಿತುಕೊಂಡಿರುವುದು ನಮ್ಮ ಕಾಲಘಟ್ಟದ ಅತಿರೇಕಗಳಲ್ಲಿ ಒಂದು. ಈಗಂತೂ ಬಯಸಿದ ವಸ್ತುಗಳು ಮನೆಬಾಗಿಲಿಗೆ ತಲುಪುತ್ತವೆ. ಅದನ್ನೂ ಕೂತ ಕಡೆಯಿಂದ ಕದಲದೆ ಫೋನಿನಲ್ಲೊ ಗಣಕಯಂತ್ರದಲ್ಲೊ, ಸಂದೇಶವನ್ನು ಕಳಿಸಿ ತರಿಸಿಕೊಳ್ಳಬಹುದು. ನೋಡಲು ನೂರಾರು ಕಾರ್ಯಕ್ರಮಗಳ, ಸಿನಿಮಾಗಳ ಆಯ್ಕೆಗಳಿರುವ ದೂರದರ್ಶನವನ್ನು ಕೂತ ಸೋಫಾದಿಂದ ಎದ್ದೇಳದೇ ರಿಮೋಟ್ ಮೂಲಕ ನಿರ್ವಹಿಸಬಹುದು. ಕೋವಿಡ್-19 ಎನ್ನುವ ಜಾಗತಿಕ ಕಾಯಿಲೆ ‘ಮನೆಯಿಂದಲೇ ಕಚೇರಿಯ ಕೆಲಸ ಮಾಡುವ’ ಸೌಲಭ್ಯವನ್ನು ಕಲ್ಪಿಸಿತು. ಇದರ ಲಾಭಗಳನ್ನು ಗ್ರಹಿಸಿದ ಸಂಸ್ಥೆಗಳು ಆ ಸೌಲಭ್ಯವನ್ನು ಮುಂದುವರೆಸಿದವು. ಮುಂಜಾನೆ ಬೇಗನೆ ಎದ್ದು, ಸಿದ್ಧರಾಗಿ, ಆಫೀಸಿನ ವಾಹನ ಹಿಡಿದು ನಿರ್ದಿಷ್ಟ ಕಾಲಕ್ಕೆ ಕಚೇರಿ ತಲುಪುತ್ತಿದ್ದ ಪೀಳಿಗೆಯೊಂದು, ನಿಧಾನವಾಗಿ ಎದ್ದು, ಯಾವುದೇ ತಯಾರಿ ಇಲ್ಲದೆ, ನೇರವಾಗಿ ಮನೆಯ ಮೂಲೆಯೊಂದರಿಂದ ಕಚೇರಿಯ ಕೆಲಸವನ್ನು ಮಾಡುವ ಅವಕಾಶ ದೇಹದ ಚಟುವಟಿಕೆಯನ್ನು ಇನ್ನಷ್ಟು ಕಡಿಮೆ ಮಾಡಿದೆ. ಹೀಗೆ, ನಮ್ಮ ಜೀವನಶೈಲಿ ನಿಧಾನವಾಗಿ ಸೋಮಾರಿತನವನ್ನು ಪ್ರೋತ್ಸಾಹಿಸುತ್ತಿದೆ. ಇದರಿಂದ ದೀರ್ಘಕಾಲಿಕವಾಗಿ ಶರೀರದ ನಿರ್ವಹಣೆಯ ಮೇಲೆ ಸಾಕಷ್ಟು ಕೆಟ್ಟ ಪ್ರಭಾವ ಆಗುತ್ತದೆ.

ಶರೀರದ ಸೌಖ್ಯದ ಮೇಲೆ ನಿಯಮಿತ ವ್ಯಾಯಾಮದ ಒಳ್ಳೆಯ ಪರಿಣಾಮಗಳನ್ನು ತಜ್ಞರು ಸಾವಿರಾರು ಸಂಶೋಧನೆಗಳ ಮೂಲಕ ಸಾಬೀತು ಪಡಿಸಿದ್ದಾರೆ. ಅಂತೆಯೇ, ಸುಮ್ಮನೆ ಕುಳಿತಿರುವ ದೇಹದ ಮೇಲೆ ಆಗಬಹುದಾದ ಕೆಟ್ಟ ಪರಿಣಾಮಗಳ ಬಗ್ಗೆಯೂ ಅಧ್ಯಯನಗಳಿವೆ. ಮೂವತ್ತು ನಿಮಿಷಗಳ ಕಾಲ ಚಟುವಟಿಕೆ ಇಲ್ಲದೆ ಕುಳಿತಿದ್ದರೆ ದೇಹದ ಚಯಾಪಚಯಗಳು ಶೇ. 90ರಷ್ಟು ಕಡಿಮೆಯಾಗುತ್ತವೆ. ಚಲನೆಯ ಕಾರಣದಿಂದ ಬಳಕೆಯಾಗಬೇಕಾದ ಕೊಬ್ಬು ಕರಗದೆ ಶರೀರದೊಳಗೆ ಜಮೆಯಾಗುತ್ತದೆ. ಮಾಂಸಖಂಡಗಳ ರಕ್ತಸಂಚಾರ ಇಳಿದು, ಬಿಗುವು ಕಾಣುತ್ತದೆ. ಶರೀರದ ಕೆಳಭಾಗಗಳಲ್ಲಿ ಸಂಗ್ರಹವಾದ ರಕ್ತ ಸರಾಗವಾಗಿ ಹರಿಯದೆ ರಕ್ತನಾಳಗಳು ಹಿಗ್ಗುತ್ತವೆ. ಇವುಗಳೊಳಗೆ ಜಮೆಯಾದ ರಕ್ತ ಅಲ್ಲಿಯೇ ಹೆಪ್ಪುಗಟ್ಟಬಹುದು. ಈ ಪ್ರಕ್ರಿಯೆ ಪ್ರತಿದಿನವೂ ಮುಂದುವರೆದರೆ ಮಧುಮೇಹ, ಬೊಜ್ಜು, ಆತಂಕ, ಬೆನ್ನುನೋವು, ಹೃದ್ರೋಗ, ಪಾರ್ಶ್ವವಾಯು, ಶ್ವಾಸಕೋಶಗಳ ಸಮಸ್ಯೆ, ಅಧಿಕ ರಕ್ತದೊತ್ತಡದ ಸಾಧ್ಯತೆಗಳು ಗಣನೀಯವಾಗಿ ಏರುತ್ತವೆ. ಇವೆಲ್ಲದರ ಮೂಲಕ ವೃದ್ಧಾಪ್ಯಕ್ಕೆ ಮುನ್ನವೇ ಮರಣದ ಸಾಧ್ಯತೆ ಹೆಚ್ಚುತ್ತದೆ.

> ಸಮಸ್ಯೆ ಇರುವುದು, ಆಯಾಸವಾದಾಗ ವಿಶ್ರಾಂತಿಗೆ ಕೂರುವುದಲ್ಲ; ಹಾಗೆ ಕೂತ ಮನುಷ್ಯ ಬಹಳ ಕಾಲ ಅಲ್ಲಿಂದ ಏಳದಿರುವುದು. ಮಾತ್ರವಲ್ಲ, ವಿಶ್ರಾಂತಿಗಾಗಿ ಕೂರುವಾಗ ಸರಿಯಾದ ಭಂಗಿಯನ್ನು ಅನುಸರಿಸುವುದು ಅಗತ್ಯ. ಕ್ರಿಯಾಶೀಲತೆ ನಮ್ಮ ಆರೋಗ್ಯವನ್ನು ಕಾಪಾಡುತ್ತದೆ



ಹಾಗೆಂದು ಕೂರದೆ ಇರಲಾದೀತೆ? ಇಲ್ಲಿನ ಸಮಸ್ಯೆ ಆಯಾಸವಾದಾಗ ವಿಶ್ರಾಂತಿಗೆ ಕೂರುವುದಲ್ಲ; ಹಾಗೆ ಕೂತ ಮನುಷ್ಯ ಬಹಳ ಕಾಲ ಅಲ್ಲಿಂದ ಏಳದಿರುವುದು. ಮನೋರಂಜನೆಗೋ ಕೆಲಸಕ್ಕೋ ಓದುವ ಹವ್ಯಾಸದಿಂದಲ್ಲ, ಮತ್ಯಾವುದೋ ಕಾರಣಕ್ಕೆ ಗಂಟೆಗಟ್ಟಲೇ ಒಂದೇ ಸ್ಥಾನದಲ್ಲಿ ಕೂರುವುದು ಆರೋಗ್ಯಕರವಲ್ಲ. ಹೀಗೆ ಕೂರುವಾಗ ನಮಗೆ ಅರಿವಿಲ್ಲದೆಯೇ ಶರೀರ ಸೊಟ್ಟದಾದ ಕೆಟ್ಟ ಭಂಗಿಗೆ ಬಂದಿರುತ್ತದೆ. ಇದು ಮೂಳೆಗಳ ಮೇಲೆ ಅನಗತ್ಯ ಒತ್ತಡಕ್ಕೆ ಕಾರಣವಾಗಿ, ಕೀಲುಗಳು ಘಾಸಿಯಾಗುತ್ತವೆ. ರಕ್ತನಾಳಗಳ ಮೇಲೆ ಅಸಮವಾದ ಒತ್ತಡ ಬಿದ್ದು ರಕ್ತಸಂಚಾರ ಏರುಪೇರಾಗುತ್ತದೆ. ಫಲಿತಾಂಶವಾಗಿ ಮಾಂಸಖಂಡಗಳು ಬಿಗಿದುಕೊಳ್ಳುತ್ತವೆ. ಭಂಗಿಯನ್ನು ಬದಲಿಸುವಾಗ ಈ ಸೆಟವು ನೋವುಂಟುಮಾಡುತ್ತದೆ. ಪರಿಣಾಮ, ಇರುವ ಭಂಗಿಯಲ್ಲೆ ಮತ್ತಷ್ಟು ಕಾಲ ಇರುವಂತೆ ನಮ್ಮ ಸೋಮಾರಿತನ ಉತ್ತೇಜಿಸುತ್ತದೆ. ಹೀಗಾಗಿ, ವಿಶ್ರಾಂತಿಗಾಗಿ ಕೂರುವಾಗ ಸರಿಯಾದ ಭಂಗಿಯನ್ನು ಅನುಸರಿಸುವುದು ಅಗತ್ಯ.

ಕಚೇರಿ ಕೆಲಸವನ್ನು ಕುಳಿತು ಮಾಡುವುದು ಬಹುತೇಕರಿಗೆ ಅವಶ್ಯ. ಇಲ್ಲಿ ಭಿನ್ನತೆಯನ್ನು ಸಾಧಿಸಲಾಗದು. ಇಂತಹ ಸಂದರ್ಭಗಳಲ್ಲಿ ಕನಿಷ್ಠ ಅರ್ಧ ಗಂಟೆಗೊಮ್ಮೆ ಎದ್ದು ಮೈಮುರಿದು, ಮಾಂಸಖಂಡಗಳನ್ನು ಹಿಗ್ಗಿಸಬೇಕು. ತಲೆಯನ್ನು ಒಂದೆರಡು ಬಾರಿ ನಿಧಾನವಾಗಿ ಏರಿಳಿಸಬೇಕು. ಬೆನ್ನನ್ನು ನಿಧಾನವಾಗಿ ಬಾಗಿಸಿ ಪಾದಗಳನ್ನು ಸೋಕಬೇಕು. ಸಾಧ್ಯವಾದರೆ ಸ್ವಲ್ಪ ದೂರ ನಡೆದು ಬರಬೇಕು. ಈ ಕ್ರಿಯೆಗಳ ಮೂಲಕ ಮಾಂಸಖಂಡಗಳು ಸಡಿಲಗೊಂಡು, ರಕ್ತಸಂಚಾರ ಸರಾಗವಾಗುತ್ತದೆ. ಯಾವುದೇ ಕಾರಣಕ್ಕೆ ಬಹಳ ಕಾಲ ಕೂರುವ ಅಗತ್ಯವುಳ್ಳವರು ಇದನ್ನು ಮಾಡುವುದು ಸೂಕ್ತ. ಇದೇ ಅಲ್ಲದೆ, ದಿನನಿತ್ಯದಲ್ಲಿ ಶರೀರದ ಚಲನೆಗೆ ಪ್ರೋತ್ಸಾಹ ನೀಡುವ ಕೆಲಸಗಳನ್ನು ಮಾಡುವುದು ಒಳಿತು. ಬೈಸಿಕಲ್ ಬಳಕೆ; ಕಚೇರಿಯ ವಾಹನ ನಿಲ್ದಾಣದಲ್ಲಿ ಸಾಧ್ಯವಾದಷ್ಟೂ ದೂರದಲ್ಲಿ ವಾಹನ ನಿಲ್ಲಿಸಿ, ಅಲ್ಲಿಂದ ನಡೆಯುವುದು; ಲಿಫ್ಟ್ ಬದಲಿಗೆ ಮೆಟ್ಟಿಲುಗಳನ್ನು ಬಳಸುವುದು; ಸಹೋದ್ಯೋಗಿಗಳ ಜೊತೆಯಲ್ಲಿ ಫೋನಿನ ಬದಲಾಗಿ ಅವರ ತಾಣಕ್ಕೆ ಹೋಗಿ ನೇರವಾಗಿ ಮಾತನಾಡುವುದು; ಕಚೇರಿಯಿಂದ ಸ್ವಲ್ಪ ದೂರವಿರುವೆಡೆ ಮಧ್ಯಾಹ್ನದ ಊಟಕ್ಕೆ ಹೋಗುವುದು; ಎಲ್ಲೆಲ್ಲಿ ನಡೆಯುವ ಅವಕಾಶವಿದೆಯೋ ಅಲ್ಲೆಲ್ಲಾ ನಡೆದೇ ಹೋಗುವುದು – ಇವುಗಳನ್ನು ಪಾಲಿಸಬಹುದು. ಇದರ ಜೊತೆಗೆ ಈಜು, ಯೋಗಾಸನ, ನೃತ್ಯ, ಕಸರತ್ತು ಮೊದಲಾದ ಆರೋಗ್ಯಕರ ಭೌತಿಕ ಚಟುವಟಿಕೆಗಳನ್ನು ನಿಯಮಿತವಾಗಿ ಮಾಡುವುದು ಸೂಕ್ತ.

ಚಟುವಟಿಕೆಯಿಲ್ಲದೆ ಕೂರುವುದು ತಾತ್ಕಾಲಿಕವಾಗಿ ಮುದ ನೀಡುತ್ತದೆ. ಆದರೆ ದೀರ್ಘಕಾಲಿಕವಾಗಿ ಘಾಸಿ ಮಾಡುತ್ತದೆ. ಹೀಗಾಗಿ, ಬಹಳ ಕಾಲ ಒಂದೇ ಸಮನೆ ಕುಳಿತುಕೊಳ್ಳುವುದು ನಮ್ಮ ಜೀವನದ ಭಾಗವಾಗಿಲ್ಲದಿರುವುದೇ ಲೇಸು. ಈ ರೀತಿಯ ಸಂದರ್ಭಗಳನ್ನು ಪ್ರಜ್ಞಾಪೂರ್ವಕವಾಗಿ ಗುರುತಿಸಿ, ಅದನ್ನು ಕಡಿಮೆ ಮಾಡಿಕೊಳ್ಳಬೇಕು. ಆರೋಗ್ಯವೆಂಬುದು ಅನಗತ್ಯ ಆರಾಮದಲ್ಲಿರುವುದಿಲ್ಲ ಎಂಬುದು ನಾವು ಅರಿಯಬೇಕಾದ ಅಂಶ. ❖

ದೇಹಕ್ಕೆ ಕೇಡು

ಸುಮ್ಮನೆ ಕುಳಿತಿದ್ದರೆ ಏನು ಸಮಸ್ಯೆ? ‘ಜಡವಾಗಿ ಬಿದ್ದುಕೊಂಡಿರುವಾಗಲೇ ಮನುಷ್ಯ ಸುರಕ್ಷಿತ; ಆಗ ಆತ ಯಾರಿಗೂ ಕೇಡು ಮಾಡಲಾರ’ ಎನ್ನುವ ಚಮತ್ಕಾರದ ಮಾತುಗಳಿವೆ. ಸಮಸ್ಯೆ ಇತರರಿಗೆ ಕೇಡು ಮಾಡುವುದಲ್ಲ; ನಮ್ಮ ದೇಹಕ್ಕೇ ಅಪಾಯ ತಂದುಕೊಳ್ಳುವುದು. ನಮ್ಮ ದೇಹ ನಿರಂತರವಾಗಿ ಕೆಲಸ ಮಾಡುತ್ತಿರುವ ಹಲವಾರು ಅಂಗಗಳ ಘಟಕ. ಇದು ಸರಾಗವಾಗಿ ಕಾರ್ಯ ನಿರ್ವಹಿಸಲು ಅಹರ್ನಿಶಿಯೂ ರಕ್ತಪರಿಚಲನೆ ಆಗಬೇಕು. ಹೃದಯದಿಂದ ಒತ್ತಲ್ಪಡುವ ರಕ್ತವು ದೇಹದ ಎಲ್ಲ ಮೂಲೆಗಳಿಗೂ ತಲುಪಲು ಮಾಂಸಖಂಡಗಳ ಸಹಕಾರ ಬೇಕು. ಇದು ಸಾಧ್ಯವಾಗುವುದು ಶರೀರದ ಚಲನೆಯಿಂದ. ಇದಕ್ಕಾಗಿಯೇ ನಮ್ಮ ಶರೀರಕ್ಕೆ ಕ್ಲುಪ್ತ ವ್ಯಾಯಾಮ ಅಗತ್ಯ ಎಂದು ವೈದ್ಯರು ತಾಕೀತು ಮಾಡುತ್ತಾರೆ.

ಊಟದಷ್ಟೇ ಉಪವಾಸವೂ ಮುಖ್ಯ



ಡಾ. ವಿಜಯಲಕ್ಷ್ಮಿ ಪಿ.

ಊಟ ಎಂದರೆ ನಾವು ಬಾಯಿಯ ಮುಖಾಂತರ ಸೇವಿಸುವ ಆಹಾರ ಎಂಬುದು ಎಲ್ಲರಿಗೂ ತಿಳಿದಿದೆ. ಬಾಯಿಯ ಮುಖಾಂತರ ಯಾವುದೇ ಆಹಾರವನ್ನು ಸೇವಿಸದಿರುವುದು ‘ಉಪವಾಸ’. ದೇಹಪೋಷಣೆ ಮೂರು ರೀತಿಯಲ್ಲಿ ಆಗುತ್ತದೆ: ಶಾರೀರಿಕವಾಗಿ, ಮಾನಸಿಕವಾಗಿ ಮತ್ತು ಮಾತಿನ ಮೂಲಕ ಸೇವಿಸುವ ಆಹಾರಗಳಿಂದ. ಇವುಗಳಲ್ಲಿ ಯಾವುದೊಂದು ಸರಿ ಇಲ್ಲದಿದ್ದರೂ ಆರೋಗ್ಯ ವ್ಯತ್ಯಾಸವಾಗಬಹುದು. ಹೀಗಾಗಿ ಉಪವಾಸ ಎಂದರೆ ಆಹಾರನಿಷೇಧ ಮಾತ್ರವಲ್ಲ, ಮಾನಸಿಕವಾಗಿ, ವಾಚಿಕವಾಗಿ, ಐಂದ್ರಿಕವಾಗಿ ಇರುವ ನಮ್ಮ ಪ್ರವೃತ್ತಿಗಳೂ ಉಪವಾಸದಲ್ಲಿಯೇ ಸೇರುತ್ತವೆ. ಆಹಾರನಿಷ್ಠೆ ಮಾತ್ರವಲ್ಲದೆ, ವ್ಯಾಯಾಮ ಮಾಡುವುದು, ಹೆಚ್ಚು ಮಾತನಾಡದಿರುವುದು, ಇಂದ್ರಿಯ ವ್ಯಾಪಾರಗಳಾದ ಮಾಧ್ಯಮಗಳ ಅತಿ ಬಳಕೆಯಿಂದ ದೂರವಿರುವುದೂ ಉಪವಾಸವೇ.

ಕೆಲವರ ಅಭಿಪ್ರಾಯದ ಪ್ರಕಾರ ಒಂದು ವಾರ ಅಥವಾ 15 ದಿವಸ ಯಾವುದೇ ರೀತಿಯ ಆಹಾರ ಸೇವಿಸಿದರೂ, ಒಂದು ದಿನ ನಿರ್ಜಲ ಉಪವಾಸ ಮಾಡಿದರೆ ನಾವು ತಿಂದ ಆಹಾರವೆಲ್ಲವೂ ಜೀರ್ಣವಾಗಿ ಆರೋಗ್ಯ ಲಭಿಸುತ್ತದೆ ಎಂದು. ವಾಸ್ತವಿಕವಾಗಿ ಅಜೀರ್ಣವಾಗುವಷ್ಟು ತಿನ್ನುವುದೇ ಅನಾರೋಗ್ಯಕರ. ಇಂದಲ್ಲ ನಾಳೆ ಅಪಥ್ಯದ ಪರಿಣಾಮವನ್ನು ಅನುಭವಿಸಲೇ ಬೇಕು. ಆದರೆ ಉಪವಾಸ ಅಥವಾ ನಿರಾಹಾರ ಅಥವಾ ಅಲ್ಪಾಹಾರಸೇವನೆಯಿಂದ ರೋಗವನ್ನು ಮುಂದೂಡಬಹುದು. ಆಯುರ್ವೇದ ವಿಜ್ಞಾನದ ಪ್ರಕಾರ ನಾಲ್ಕು ರೀತಿಯ ವ್ಯಕ್ತಿಗಳಿರುತ್ತಾರೆ:

1. ಯಾವುದೇ ಆಹಾರ ಸೇವಿಸಿದರೂ ಜೀರ್ಣವಾಗುವವರು.
2. ಯಾವುದೇ ಆಹಾರವಾದರೂ ಸುಲಭವಾಗಿ ಜೀರ್ಣವಾಗದವರು.
3. ಆರೋಗ್ಯಕರ ಅಥವಾ ದೇಹಕ್ಕೆ ಒಗ್ಗುವ ಆಹಾರ ಸಂಪೂರ್ಣವಾಗಿ ಜೀರ್ಣವಾಗುತ್ತದೆ. ದೇಹಕ್ಕೆ ಒಗ್ಗದ ಆಹಾರ ಅಜೀರ್ಣವಾಗುವವರು.
4. ನಿಶ್ಚಿತವಾಗಿ ಇಂತಹದೇ ಆಹಾರ ದೇಹಕ್ಕೆ ಒಗ್ಗುತ್ತದೆ ಎಂದು ಹೇಳಲಾಗದವರು. ಇವರಿಗೆ ಆರೋಗ್ಯಕರ ಆಹಾರವೂ ಅಜೀರ್ಣವಾಗಬಹುದು. ಕೆಲವೊಮ್ಮೆ ಉಳಿದವರಿಗೆ ಅಜೀರ್ಣವಾಗುವ ಆಹಾರವೂ ಇವರಿಗೆ ಜೀರ್ಣವಾಗಬಹುದು.

ಇವರಲ್ಲಿ ಮೊದಲು ಮತ್ತು ನಾಲ್ಕನೆಯ ವಿಭಾಗದ ಜನರು ಉಪವಾಸ ಮಾಡುವುದರಿಂದ ಅನಾರೋಗ್ಯ ಉತ್ಪತ್ತಿ ಆಗುತ್ತದೆ. ಆದರೆ ಎರಡನೆಯ ವಿಭಾಗದವರು ಉಪವಾಸ ಮಾಡುವುದರಿಂದ ಸ್ವಲ್ಪ ಮಟ್ಟಿಗಾದರೂ ಜೀರ್ಣಶಕ್ತಿ ಹೆಚ್ಚಿ ಜೀರ್ಣಕ್ರಿಯೆಯು ಸುಗಮವಾಗುತ್ತದೆ. ಮೂರನೆಯ ವಿಭಾಗದವರು ಪರಿಸ್ಥಿತಿಗೆ ಅನುಗುಣವಾಗಿ ಅಲ್ಪಾಹಾರದ ಸೇವನೆಯಿಂದ ಆರೋಗ್ಯ ಕಾಪಾಡಿಕೊಳ್ಳಬಹುದು. ಎಂದರೆ ಉಪವಾಸ ಎನ್ನುವುದು ಎಲ್ಲರಿಗೂ ಒಂದೇ ರೀತಿಯ ಫಲವನ್ನು ನೀಡುವುದಿಲ್ಲ.



‘ಲಂಘನಂ ಪರಮೌಷಧಂ’ ಎನ್ನುವುದು ಎಲ್ಲರೂ ಕೇಳಿರುವ ವಾಡಿಕೆಯ ಮಾತು. ಯಾವುದೇ ರೀತಿಯ ಅನಾರೋಗ್ಯಕ್ಕಾದರೂ ಉಪವಾಸ ಮಾಡುವುದರಿಂದ ಆರೋಗ್ಯ ಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆ. ಲಂಘನ ಎನ್ನುವುದನ್ನು ಶಾಸ್ತ್ರಗಳು ಅನೇಕ ಪ್ರಕಾರವಾಗಿ ಹೇಳಿವೆ; ಅದರಲ್ಲಿ ಒಂದು ವಿಭಾಗ ನಿರಾಹಾರ. ವಾಸ್ತವಿಕವಾಗಿ ‘ಲಂಘನ’ ಎಂದರೆ ದೇಹವನ್ನು ಹಗುರಗೊಳಿಸುವುದು ಎಂದರ್ಥ. ದೇಹವನ್ನು ಹಗುರವಾಗಿಸಲು ಮಾಡುವ ಎಲ್ಲಾ ಪ್ರಕ್ರಿಯೆಗಳೂ ಲಂಘನಗಳೇ.

ಯುಕ್ತಿಯುಕ್ತವಾಗಿ ಮಾಡುವ ವ್ಯಾಯಾಮ, ಬಿಸಿಲು–ಗಾಳಿಯ ಸೇವನೆಯೂ ಲಂಘನವೇ. ಇವೂ ಜೀರ್ಣಶಕ್ತಿಯನ್ನು ಹೆಚ್ಚಿಸಿ ಆಹಾರ ಸುಲಭವಾಗಿ ಜೀರ್ಣವಾಗುವಂತೆ ಮಾಡುತ್ತದೆ. ಆದರೆ ದೇಹವನ್ನು ಹಗುರವಾಗಿಸುವ ನೆಪದಲ್ಲಿ ಮಾಡುವ ಅತಿಯಾದ ವ್ಯಾಯಾಮವೂ ವಾತವ್ಯಾಧಿಯನ್ನು ಉತ್ಪತ್ತಿ ಮಾಡಬಹುದು. ಎಳೆಯ ಬಿಸಿಲಿನಲ್ಲಿ ಉದ್ಯಾನವನದಲ್ಲಿ ನಡೆಯುವುದು ವಿಟಮಿನ್‌ಗಳ ಉತ್ಪಾದನೆಯನ್ನು ಹೆಚ್ಚಿಸಿ, ಆಹಾರಜೀರ್ಣವಾಗಲೂ ಕಾರಣವಾಗುತ್ತದೆ.

ಅತಿಯಾದ ದ್ರವಾಹಾರದ ಸೇವನೆಯೇ ಉಪವಾಸವೆಂದು ತಿಳಿದು, ಆಹಾರವನ್ನು ಸೇವಿಸದೆ ಕೆಲವರು ಹಸಿವಾದಾಗಲೆಲ್ಲಾ ನೀರನ್ನು ಸೇವಿಸುತ್ತಾರೆ. ಕೆಲವರು ಅತಿ ಹೆಚ್ಚು ನೀರು ಕುಡಿಯುವುದು ಆರೋಗ್ಯಕ್ಕೆ ಒಳ್ಳೆಯದು ಎಂದು ದಿನಕ್ಕೆ 5-6 ಲೀ. ನೀರು ಕುಡಿಯುತ್ತಾರೆ. ಆದರೆ, ಹೀಗೆ ಮಾಡುವುದು ಜೀರ್ಣಶಕ್ತಿಯನ್ನು ಕುಂಠಿತಗೊಳಿಸುತ್ತದೆ. ಅನಗತ್ಯವಾಗಿ ನೀರು, ತಂಪುಪಾನೀಯಗಳು, ಇತರೆ ದ್ರವಪದಾರ್ಥಗಳನ್ನು ಮಾತ್ರ ಸೇವಿಸುವುದು ಅಥವಾ ಉಪವಾಸವೆಂದು ಹಣ್ಣು–ಹಾಲನ್ನು ಮಿಶ್ರಮಾಡಿ ಮಿಲ್ಕ್ ಶೇಕ್, ಹಾಲು ಬೆರೆಸಿ ತಯಾರಿಸಿದ ಹಣ್ಣುಗಳ ರಸಾಯನ – ಇವುಗಳನ್ನು ಸೇವಿಸುವುದು ಅನಾರೋಗ್ಯವನ್ನೇ ತಂದೀತು. ಬಾಯಾರಿಕೆ ಅಥವಾ ಸುಸ್ತು ಇಲ್ಲದಿರುವಾಗ ದ್ರವಾಹಾರವನ್ನು ಸೇವಿಸದಿರುವುದೂ ಲಂಘನವೇ.

ಕೆಲವು ಮೂತ್ರಸಂಬಂಧಿ ಕಾಯಿಲೆಗಳಲ್ಲಿ ದ್ರವಾಹಾರವನ್ನು ನಿಷೇಧಿಸುತ್ತಾರೆ. ಇದು ಆ ವ್ಯಕ್ತಿಗೆ ಸಂಬಂಧಪಟ್ಟು ಲಂಘನವೇ ಆಗಿದೆ. ಉಪವಾಸ ಮಾಡುವವರು ಸಾಮಾನ್ಯವಾಗಿ ಎರಡು ವಿಧದ ಜನರಾಗಿರುತ್ತಾರೆ. ಒಂದು, ಯಾವುದೋ ದೇವತಾಕಾರ್ಯ, ಹರಕೆ, ಪುಣ್ಯಪ್ರಾಪ್ತಿಗಾಗಿ ಉಪವಾಸ ಮಾಡುವವರು. ಎರಡನೆಯದು, ಸಣ್ಣಗಾಗಬೇಕೆಂದೋ ಅಥವಾ ಆರೋಗ್ಯವಾಗಿರಬೇಕೆಂದೋ ಉಪವಾಸ ಮಾಡುವವರು.

ಮೊದಲ ವರ್ಗದ ಜನರು ವಾರಕ್ಕೊಮ್ಮೆ, ಹದಿನೈದು ದಿನಕ್ಕೊಮ್ಮೆ, ಅಥವಾ ತಿಂಗಳಿಗೆ ಒಂದು ದಿನ ಊಟಮಾಡುವುದಿಲ್ಲ ಎಂಬ ಸಂಕಲ್ಪ ಮಾಡುತ್ತಾರೆ. ಇವರಿಗೆ ಅನ್ನ ತಿಂದರೆ ಮಾತ್ರ ಆಹಾರ, ಮಿಕ್ಕೆಲ್ಲಾ ಪದಾರ್ಥಗಳ ಸೇವನೆ ಉಪವಾಸವೇ! ಇನ್ನು ಕೆಲವರು ಬೆಳಗ್ಗೆ ಮತ್ತು ರಾತ್ರಿ ಪುಷ್ಕಳ ‘ಊಟದಷ್ಟೇ ಉಪಹಾರ’ ಮಾಡುತ್ತಾರೆ, ಆದರೆ ಮಧ್ಯಾಹ್ನ ಮಾತ್ರ ಆಹಾರವನ್ನು ಸೇವಿಸುವುದಿಲ್ಲ. ಇವು ಉಪವಾಸವೇ ಅಲ್ಲ. ದ್ರವಾಹಾರವೆಂದು ಕೂಲ್ಡ್ರಿಂಕ್ಸ್‌ಗಳನ್ನೋ ಅತಿ ತಂಪಾದ ನೀರನ್ನೋ ಅಥವಾ ಅತಿ ತಂಪಾದ ಪಾನಕವನ್ನೋ ಮಿಲ್ಕ್‌ಶೇಕನ್ನೋ ಸೇವಿಸಬಾರದು. ಕೇವಲ ಹಣ್ಣಿನ ರಸವನ್ನೋ ಅಥವಾ ಕುದಿಸಿ ತಣಿಸಿದ ನೀರನ್ನೋ ಹಾಲನ್ನೋ ಸೇವಿಸಬಹುದು. ಹಣ್ಣುಗಳ ಸೇವನೆಯೂ ಹಿತಕರವೇ. ಆದರೆ ಹಣ್ಣು ಮತ್ತು ಹಾಲನ್ನು ಒಟ್ಟಿಗೆ ಬೆರೆಸಿ ಸೇವಿಸುವುದು ಅಹಿತಕರ; ಮಧುಮೇಹ, ಕ್ಯಾನ್ಸರ್ ಮುಂತಾದ ಮಹಾವ್ಯಾಧಿಗಳಿಗೆ ಕಾರಣವಾಗಬಹುದು.

ಸಾಮಾನ್ಯವಾಗಿ ಅಲ್ಪಾಹಾರ ಸೇವನೆ ಆರೋಗ್ಯಕರವೆಂದು ಭಾವಿಸುತ್ತಾರೆ. ಆದರೆ ದೈಹಿಕ ಶ್ರಮ ಉಳ್ಳವರು, ಸರಿಯಾಗಿ ವ್ಯಾಯಾಮ ಮಾಡುವವರು, ಅತಿ ಬಿಸಿಲಿನಲ್ಲಿ ಓಡಾಡುವವರು, ಉಪವಾಸ ಅಥವಾ ಅಲ್ಪಾಹರ ಸೇವನೆ ಮಾಡಬಾರದು. ಅವರವರ ಜೀರ್ಣಶಕ್ತಿಗೆ ಅನುಗುಣವಾಗಿ ಪ್ರಾದೇಶಿಕ ಆಹಾರವನ್ನು, ತಮಗೆ ಅಭ್ಯಾಸವಿರುವ ಆಹಾರಗಳನ್ನು ಆರೋಗ್ಯಕರವಾದ ರೀತಿಯಲ್ಲಿ, ಸಕಾಲಕ್ಕೆ, ಸರಿಯಾದ ವಾತಾವರಣದಲ್ಲಿ ಸೇವಿಸುವುದು ಉಪವಾಸದಷ್ಟೇ ಉಪಕಾರಿ. ಆದರೆ ಶಾರೀರಿಕ ಶ್ರಮವಿಲ್ಲದೆ. ಕುಳಿತು ಕೆಲಸ ಮಾಡುವವರಿಗೆ ಅಲ್ಪಾಹಾರ ಹಿತಕರ. ವಿಪರೀತ ಮಾತನಾಡುವ ವೃತ್ತಿಯವರು ಎಂದರೆ, ಶಿಕ್ಷಕರು, ವಕೀಲರು, ವೈದ್ಯರು – ಈ ವೃತ್ತಿಯವರು ನಿರ್ಜಲ ಉಪವಾಸ ಮಾಡುವುದು ಹಾನಿಕರ. ಯಾರೇ ಆದರೂ ಹಿತವಾಗಿ, ಮಿತವಾಗಿ, ಋತುವಿಗನುಗುಣವಾಗಿ ಆಹಾರವನ್ನು ಸೇವಿಸುವುದು ಉಪವಾಸವನ್ನು ಮಾಡಿದಂತೆಯೇ. ಹೀಗೆ ಯಾರಿಗೆ ಯಾವ ರೀತಿಯ ಲಂಘನವು ಹಿತಕರವೋ ಅದನ್ನು ಆರಿಸಿಕೊಳ್ಳುವುದು ಒಳಿತು; ಕೇವಲ ಊಟ ಬಿಡುವುದಲ್ಲ. ❖



ಎಲ್ಲೆಡೆ ಹರಡಲಿ ನಗು!



ಡಾ. ಕೆ.ಎಸ್. ಚೈತ್ರಾ

‘ವ್ಯಕ್ತಿ ತೊಡಬಹುದಾದ ಅತ್ಯುತ್ತಮ ಆಭರಣವೆಂದರೆ ನಗು’.

ನಿಜವೇ, ನಗುವಿನಿಂದ ಮುಖಕ್ಕೆ ಮಾತ್ರವಲ್ಲ, ವ್ಯಕ್ತಿತ್ವಕ್ಕೇ ಶೋಭೆ. ಆದರೆ ನಗು, ಬರೀ ಸೌಂದರ್ಯವನ್ನು ಹೆಚ್ಚಿಸುವ, ಆತ್ಮವಿಶ್ವಾಸವನ್ನು ಸೂಸುವ ಆಭರಣವಷ್ಟೇ ಅಲ್ಲ; ಆರೋಗ್ಯವನ್ನು ವೃದ್ಧಿಸುವ ಟಾನಿಕ್ ಕೂಡ.

ಒತ್ತಡ ಕಡಿಮೆ: ಮನಸ್ಸಿಗೆ ಖುಷಿಯಾದಾಗ ಅದನ್ನು ಅಭಿವ್ಯಕ್ತಿಗೊಳಿಸುವ ಆಂಗಿಕಭಾಷೆಯೇ ನಗು. ಆದರೆ ಮನಸ್ಸು ಕುಗ್ಗಿದಾಗ/ ಬೇಸರದಲ್ಲಿದ್ದಾಗಲೂ ನಗು ಸಹಾಯಕ. ಆ ಸಂದರ್ಭದಲ್ಲಿ ಸಹಜವಾಗಿ ನಗು ಬಾರದಿದ್ದರೂ ಪ್ರಯತ್ನಪಟ್ಟು ನಕ್ಕರೂ ಸಾಕು. ಏಕೆಂದರೆ ಸುಮ್ಮನೇ ನಕ್ಕಂತೆ ತುಟಿಗಳನ್ನು ಮೇಲಕ್ಕೆ ಎಳೆದಾಗ ಮಿದುಳಿಗೆ ‘ನಗುವಿನ’ ಸಂದೇಶ ರವಾನೆಯಾಗುತ್ತದೆ. ಕೂಡಲೇ ಮನಸ್ಸಿಗೆ ಹಿತ ಕೊಡುವ ಡೋಪಮಿನ್, ಸೆರಟೋನಿನ್ ಹಾರ್ಮೋನ್‌ಗಳು ಬಿಡುಗಡೆಯಾಗುತ್ತವೆ. ಇದರಿಂದ ಒತ್ತಡದ ಮಟ್ಟ ಕಡಿಮೆಯಾಗಿ ಮನಸ್ಸು ತನ್ನಿಂತಾನೇ ಉಲ್ಲಸಿತವಾಗುತ್ತದೆ.

ಸ್ನೇಹವೃದ್ಧಿ: ಜಗತ್ತಿನ ಯಾವುದೇ ಮೂಲೆಗೆ ಹೋದರೂ, ಯಾವುದೇ ಭಾಷೆ ಮಾತನಾಡುವ/ ಭಾಷೆಯೇ ಬರದ ವ್ಯಕ್ತಿಯಾದರೂ ನಗುವನ್ನು ಅರ್ಥಮಾಡಿಕೊಳ್ಳುತ್ತಾರೆ. ಸಂತೋಷ-ಸ್ನೇಹವನ್ನು ಸೂಚಿಸುವ ಭಾವವಿದು. ಅಪರಿಚಿತರೊಂದಿಗೆ ಒಡನಾಡಲು ಪುಟ್ಟ ನಗು ಬೀರುವ ಪರಿಣಾಮ ದೊಡ್ಡದು. ಅಪರಿಚಿತರ ಮನವನ್ನು ಮುಟ್ಟಲು ಕೀಲಿಕೈ ನಗು! ನಗುವನ್ನು ಕೇವಲ ಮುಖ ನೋಡಿಯೇ ಗ್ರಹಿಸಬೇಕೆಂದಿಲ್ಲ. ಅಧ್ಯಯನಗಳ ಪ್ರಕಾರ ಫೋನಿನಲ್ಲಿ ಮಾತನಾಡುವಾಗಲೂ ನಗುವನ್ನು ಕೇಳಲು ಸಾಧ್ಯ. ಮಾತ್ರವಲ್ಲ ನಿಮ್ಮ ನಗು ಕೃತಕವಾದದ್ದೇ ಎಂಬುದನ್ನೂ ಗುರುತಿಸಬಹುದು. ನಗುತ್ತಾ ಪ್ರೀತಿಯಿಂದ ಆಡುವ ಮಾತುಗಳು ಇನ್ನೊಬ್ಬರ ದಿನವನ್ನೂ ಸುಂದರವಾಗಿಸುತ್ತವೆ, ಸ್ನೇಹವನ್ನು ವೃದ್ಧಿಸುತ್ತವೆ.

ಹೆಲ್ತಿ ಹಾರ್ಟ್: ನಕ್ಕಾಗ ದೇಹದಿಂದ ಬಿಡುಗಡೆಯಾಗುವ ಕಾರ್ಟಿಸಾಲ್ ಮತ್ತು ಎಂಡಾರ್ಫಿನ್‌ಗಳು ರಕ್ತದೊತ್ತಡವನ್ನು ಕಡಿಮೆ ಮಾಡುತ್ತವೆ. ಹೃದಯದ ಬಡಿತವನ್ನು ಕಡಿಮೆ ಮಾಡುತ್ತವೆ. ರಕ್ತನಾಳಗಳಲ್ಲಿ ರಕ್ತಸಂಚಾರವನ್ನು ಸುಗಮವಾಗಿ ನಡೆಯುತ್ತದೆ. ಆದ್ದರಿಂದ ಹೃದಯದ ಆರೋಗ್ಯಕ್ಕೆ ಖರ್ಚಿಲ್ಲದೇ ಶ್ರಮವಿಲ್ಲದೇ ದಿನವೂ ಮಾಡಬಹುದಾದ ಸುಲಭ ವ್ಯಾಯಾಮವಿದು.

ಹರಡುವ ನಗು: ರೋಗಗಳ ವಿಷಯಕ್ಕೆ ಬಂದಾಗ ‘ರೋಗಗಳು ಹರಡುತ್ತವೆ’ ಎಂದು ಹೆದರುವ ಹಾಗೆ ನಗುವೂ ಎಲ್ಲೆಡೆ ಹರಡುತ್ತದೆ; ಆದರೆ, ನಗು ಎಂಬುದು ಖುಷಿಯ ಸಾಂಕ್ರಾಮಿಕ! ಕಾರಣವೇನೆಂದರೆ ಮನುಷ್ಯರಲ್ಲಿ ಅನುಕರಣಾ ಪ್ರವೃತ್ತಿ ಕಂಡುಬರುತ್ತದೆ. ಇದು ಇತರರ ಭಾವನೆಯನ್ನು ಅರ್ಥೈಸಿಕೊಳ್ಳಲು, ಅವರೊಂದಿಗೆ ನಾವಿದ್ದೇವೆ ಎಂಬುದನ್ನು ತೋರಿಸಲು ಅಗತ್ಯ. ಮಿದುಳಿನಲ್ಲಿರುವ ಮಿರರ್ ನ್ಯೂರಾನ್ಸ್ (ಕನ್ನಡಿ ನರಕೋಶಗಳು) ಈ ಪ್ರಚೋದನೆಗೆ ಒಳಗಾಗಿ ಇತರರ ಮುಖಭಾವನೆಯನ್ನು ಅನುಕರಿಸುತ್ತವೆ. ಖುಷಿಗೆ ಪ್ರತಿಕ್ರಿಯಿಸುವ ಆತ್ಮೀಯತೆಯ ಸಂಕೇತ: ನಗು.

ಹುಟ್ಟುವಾಗಲೇ ನಗು: ಹುಟ್ಟಿದ ಮಗು ಆಗಾಗ್ಗೆ ನಗುವುದು ತನ್ನಿಂತಾನೇ ನಡೆಯುವ ಕ್ರಿಯೆ. ಸಾಮಾಜಿಕ ನಗು ಎರಡು ತಿಂಗಳ ನಂತರ ಕಾಣಬಹುದು ಎಂದು ನಂಬಲಾಗಿತ್ತು. ಆದರೆ ಇತ್ತೀಚಿನ ಅಧ್ಯಯನಗಳ ಪ್ರಕಾರ ಆನಂದದ ಸಹಜ ಅಭಿವ್ಯಕ್ತಿ ಎನ್ನಲಾಗುತ್ತಿದೆ. ಸುವಾಸನೆ, ಪ್ರೀತಿಪಾತ್ರರ ಸ್ಪರ್ಶ – ಇವೆಲ್ಲವೂ ಮಗುವಿನ ನಗುವಿಗೆ ಕಾರಣ ಎಂದು ಊಹಿಸಲಾಗಿದ್ದು ನಗುವುದು ಮನುಷ್ಯರಲ್ಲಿ ಹುಟ್ಟಿನೊಂದಿಗೇ ಬಂದದ್ದು ಎನ್ನಲಾಗಿದೆ!

ನೋವಿನ ತೀವ್ರತೆ ಕಡಿಮೆ: ನಕ್ಕಾಗ ದೇಹದಲ್ಲಿ ಒಳ್ಳೆಯ ಹಾರ್ಮೋನ್‌ಗಳು ಮತ್ತು ನೈಸರ್ಗಿಕ ನೋವುನಿವಾರಕಗಳು ಬಿಡುಗಡೆಯಾಗುತ್ತವೆ. ಮನಸ್ಸನ್ನು ಉಲ್ಲಸಿತ ಗೊಳಿಸುವುದರ ಜೊತೆ ಅವು ದೈಹಿಕ ಒತ್ತಡವನ್ನೂ ನೋವನ್ನೂ ಕಡಿಮೆ ಮಾಡುತ್ತವೆ. ನಗು, ನೋವಿಗೆ ಉತ್ತಮ ಔಷಧ! ರೋಗಿಗಳು ಚುಚ್ಚುಮದ್ದನ್ನು ಪಡೆಯುವಾಗ ನಗುತ್ತಿದ್ದಲ್ಲಿ (ಪ್ರಯತ್ನಪೂರ್ವಕವಾಗಿ) ನೋವಿನ ಪ್ರಮಾಣದಲ್ಲಿ ಶೇ. ನಲವತ್ತರಷ್ಟು ಇಳಿಕೆ ಕಂಡುಬಂದಿದ್ದರ ದಾಖಲೆಯಿದೆ.

ತಾರುಣ್ಯದ ಕಳೆ: ಮುಖದಲ್ಲಿ ನಗುವಿದ್ದರೆ ಆಕರ್ಷಕ ಎನಿಸುವುದಂತೂ ಸರಿ. ಅದರೊಂದಿಗೆ ತಾರುಣ್ಯಪೂರ್ಣ ತ್ವಚೆಯೂ ಸಾಧ್ಯ. ನಗುವಾಗ ಬಳಸುವ ಸ್ನಾಯುಗಳು ಮುಖದ ಚರ್ಮವನ್ನು ಮೇಲಕ್ಕೆ ಎಳೆಯುತ್ತವೆ. ತ್ವಚೆ ಕಾಂತಿಯುತವಾಗಿ ಹೊಳೆಯಲು, ಸುಕ್ಕು ನಿವಾರಿಸಲು ಫೇಸ್ ಲಿಫ್ಟ್ ಮಾಡಿಸುವ ಬದಲು ಆಗಾಗ್ಗೆ ನಕ್ಕರೆ ಸೌಂದರ್ಯವರ್ಧನೆ ಮತ್ತು ಚಿಕಿತ್ಸೆ – ಎರಡೂ ಏಕಕಾಲದಲ್ಲಿ ನಡೆಯುತ್ತದೆ! ಮಹಿಳೆಯರು ಮೇಕಪ್ ಧರಿಸುವುದಕ್ಕಿಂತಲೂ, ‘ನಗುವನ್ನು ಧರಿಸಿದಾಗ’ ಹೆಚ್ಚು ಆಕರ್ಷಕ ಎಂಬುದು ಶೇ. ಅರವತ್ತೊಂಬತ್ತು ಜನರ ಅಭಿಪ್ರಾಯ.

ಮೊದಲ ಭೇಟಿಯಲ್ಲಿ ಜನರು ಅತಿ ಹೆಚ್ಚು ಗಮನಿಸುವ ಮತ್ತು ನೆನಪಿನಲ್ಲಿ ಇಟ್ಟುಕೊಳ್ಳುವ ಅಂಶ ನಗು. ❖

ಮಾಸ್ಕ್ ಧರಿಸಿದಾಗ?

ನಗುವಿನಿಂದ ಇಷ್ಟೆಲ್ಲಾ ಲಾಭಗಳಿವೆ ನಿಜ. ಆದರೆ ಕೋವಿಡ್ ಸಂದರ್ಭದಲ್ಲಿ ಮುಖಕ್ಕೆ ಮಾಸ್ಕ್ ಹಾಕಬೇಕಾದ ಅನಿವಾರ್ಯತೆ ಎದುರಾಗಿತ್ತಲ್ಲ, ಆಗ ನಗು ಗೊತ್ತಾಗುವುದಾದರೂ ಹೇಗೆ ಎಂಬ ಪ್ರಶ್ನೆ ಮೂಡುವುದು ಸಹಜ. ವಿಜ್ಞಾನಿಗಳ ಪ್ರಕಾರ ನಗುವನ್ನು ಗುರುತಿಸಲು ಬಾಯಿ-ಹಲ್ಲುಗಳು ಮಾನದಂಡಗಳಾದರೂ ಕೆನ್ನೆ–ಕಣ್ಣುಗಳ ಅಂಚಿನಲ್ಲಿ ಮೂಡುವ ನಗುವಿನ ರೇಖೆ ಮತ್ತು ಕಿರಿದಾಗುವ ಕಣ್ಣುಗಳಿಂದ ನಗುವನ್ನು ಕಂಡುಹಿಡಿಯಲು ಸಾಧ್ಯ. ಹಾಗಾಗಿ ಮಾಸ್ಕ್ ಧರಿಸಿದಾಗ ನಗುವಾಗ ದೃಷ್ಟಿಯೂ ಮುಖ್ಯವಾಗುತ್ತದೆ. ಮಾತ್ರವಲ್ಲ, ಧ್ವನಿಯಲ್ಲೂ ನಗು ಮತ್ತು ಖುಷಿಯ ಭಾವವನ್ನು ಗ್ರಹಿಸಲು ಸಾಧ್ಯ. ದೇಹದ ಇತರ ಅಂಗಗಳಾದ ಹುಬ್ಬು, ಕೈ ಇವುಗಳನ್ನು ಬಳಸಿಯೂ ‘ನಗುತ್ತಿದ್ದೇವೆ’ ಎಂಬುದನ್ನು ಸೂಚಿಸಬಹುದು. ಪರಸ್ಪರ ಸ್ಪರ್ಶ ಆರೋಗ್ಯದ ದೃಷ್ಟಿಯಿಂದ ನಿಷಿದ್ಧವಾದ ಸಂದರ್ಭದಲ್ಲಿ ವೈದ್ಯರು ರೋಗಿಗಳಿಗೆ ಧೈರ್ಯ ತುಂಬಿದ್ದು ವೈದ್ಯರ ಮಾಸ್ಕ್ ಒಳಗಿನ ನಗು ಮತ್ತು ಅದನ್ನು ಬಿಂಬಿಸಿದ ಕಣ್ಣುಗಳು! ಒಟ್ಟಿನಲ್ಲಿ ಮಾಸ್ಕ್ ಹಾಕಿದರೂ ನಗುವುದು ಮುಖ್ಯ.

ನಿಮಗೆ ಗೊತ್ತಿರಲಿ

- ಮಕ್ಕಳು ದಿನಕ್ಕೆ ಮುನ್ನೂರರಿಂದ ಐನೂರು ಬಾರಿ ನಕ್ಕರೆ ವಯಸ್ಕರು ಕೇವಲ ಹದಿನೇಳರಿಂದ ಇಪ್ಪತ್ತು ಬಾರಿ ನಗುತ್ತಾರೆ.
- ಭಾವನಾಜೀವಿಗಳಾದ ಮಹಿಳೆಯರು ಪುರುಷರಿಗಿಂತ ಹೆಚ್ಚು ಬಾರಿ ನಗುತ್ತಾರೆ.
- ಮಾನವರಿಗೆ ನಗು ಸಹಜವಾಗಿ ಸಿದ್ಧಿಸಿದೆ; ಆದರೆ ಮಂಗ ಮತ್ತು ಚಿಂಪಾಂಜಿಗಳೂ ಕಚಗುಳಿ ಇಟ್ಟಾಗ ನಗಬಲ್ಲವು!
- ನಗುವಿನಲ್ಲಿ ಹತ್ತೊಂಬತ್ತು ವಿಧಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ ಆರು ಮಾತ್ರ ಸಂತಸದ ನಗುಗಳು.
- ನಗಲು ಉಪಯೋಗಿಸುವ ಮುಖದ ಸ್ನಾಯುಗಳ ಸಂಖ್ಯೆ ಮುಖ ಗಂಟಿಕ್ಕಲು ಬಳಸುವ ಸ್ನಾಯುಗಳ ಸಂಖ್ಯೆಗಿಂತ ಕಡಿಮೆ; ಅಂದರೆ ನಗಲು ವ್ಯಯವಾಗುವ ಶಕ್ತಿ ಕಡಿಮೆ!

ಲಂಚ: ಐಎಎಸ್ ಅಧಿಕಾರಿ ಮಂಜುನಾಥ್ ಬಂಧನ

ಒಂದನೇ ಪುಟದಿಂದ

‘ನನ್ನ ಜಮೀನಿಗೆ ಸಂಬಂಧಿಸಿದ ಪ್ರಕರಣದ ಆದೇಶವನ್ನು ಪ್ರಕಟಿಸುವಂತೆ ಮನವಿ ಮಾಡಲು ಜಿಲ್ಲಾಧಿಕಾರಿಯವರನ್ನು ಭೇಟಿ ಮಾಡಿದ್ದೆ. ಅವರ ಸೂಚನೆಯಂತೆ ಮಹೇಶ್ ಅವರನ್ನು ಭೇಟಿಮಾಡಿದೆ. ಅವರು ಲಂಚಕ್ಕೆ ಬೇಡಿಕೆ ಇಟ್ಟಿದ್ದರು’ ಎಂದು ಅಜಂ ಪಾಷಾ ದೂರಿನಲ್ಲಿ ಉಲ್ಲೇಖಿಸಿದ್ದರು. ಜಿಲ್ಲಾಧಿಕಾರಿ ಹಾಗೂ ಮಹೇಶ್ ಜತೆಗಿನ ಸಂಭಾಷಣೆಯ ವಿವರವನ್ನು ಮೊಬೈಲ್‌ನಲ್ಲಿ ರೆಕಾರ್ಡಿಂಗ್ ಮಾಡಿಕೊಂಡಿದ್ದ ದೂರುದಾರರು, ಆ ವಿವರಗಳನ್ನೂ ದೂರಿನೊಂದಿಗೆ ತನಿಖಾ ಸಂಸ್ಥೆಗೆ ನೀಡಿದ್ದರು.

ಲಂಚದ ಹಣವನ್ನು ಮಹೇಶ್ ಮತ್ತು ಚೇತನ್ ಕುಮಾರ್ ಪಡೆದಿದ್ದರೂ, ದೂರುದಾರರಿಗೆ ಸಂಬಂಧಿಸಿದ ಕಡತ ನೇರವಾಗಿ ಜಿಲ್ಲಾಧಿಕಾರಿ ಬಳಿ ಇರುವುದು ತನಿಖೆ ವೇಳೆ ಪತ್ತೆಯಾಗಿತ್ತು.

ಪ್ರಕರಣದ ವಿಚಾರಣೆ ಪೂರ್ಣಗೊಳಿಸಿ ಮೂರು ತಿಂಗಳಾದರೂ ಆದೇಶ ಪ್ರಕಟಿಸದೇ ಇರುವುದು ಕಂಡುಬಂದಿತ್ತು. ಎಸಿಬಿ ಅಧಿಕಾರಿಗಳು, ಜೂನ್ 22 ಮತ್ತು 30ರಂದು ಇಡೀ ದಿನ ಐಎಎಸ್ ಅಧಿಕಾರಿಯ ವಿಚಾರಣೆ ನಡೆಸಿದ್ದರು.

ಈ ಪ್ರಕರಣದ ಆರೋಪಿಗಳಾದ ಮಹೇಶ್ ಜಾಮೀನು ಅರ್ಜಿ ವಿಚಾರಣೆ ವೇಳೆ ಹೈಕೋರ್ಟ್ ಏಕಸದಸ್ಯ ಪೀಠ, ಎಸಿಬಿ ಕಾರ್ಯವೈಖರಿ ಕುರಿತು ಸೋಮವಾರ ತೀವ್ರ ಆಕ್ಷೇಪ ವ್ಯಕ್ತಪಡಿಸಿತು. ತಕ್ಷಣ ಕಾರ್ಯಪ್ರವೃತ್ತರಾದ ತನಿಖಾ ಸಂಸ್ಥೆಯ ಅಧಿಕಾರಿಗಳು ಮಂಜುನಾಥ್ ಪತ್ತೆಗೆ ಮುಂದಾದರು. ಅಧಿಕಾರಿಯು ಯಶವಂತಪುರದ ಮನೆಯಲ್ಲಿರುವ ಕುರಿತು ಮಾಹಿತಿ ಪಡೆದ ಎಸಿಬಿ ಎಸ್‌ಪಿ, ತಾವೇ ಅಲ್ಲಿಗೆ ತೆರಳಿ ಮಂಜುನಾಥ್ ಅವರನ್ನು ವಶಕ್ಕೆ ಪಡೆದು ತಮ್ಮದೇ ಕಾರಿನಲ್ಲಿ ಕರೆತಂದರು ಎಂದು ಮೂಲಗಳು ತಿಳಿಸಿವೆ.

ಮೊಬೈಲ್ ‘ಫ್ಲೈಟ್ ಮೋಡ್’ನಲ್ಲಿ

‘ಮಂಜುನಾಥ್ ಅವರನ್ನು ವಿಚಾರಣೆಗಾಗಿ ಕರೆಸಿ, ನಂತರ ವಶಕ್ಕೆ ಪಡೆಯಲು ಎಸಿಬಿ ಅಧಿಕಾರಿಗಳು ತೀರ್ಮಾನಿಸಿದ್ದರು. ವಿಚಾರಣೆಗೆ ಬರುವಂತೆ ಸೂಚಿಸಲು ಐಎಎಸ್ ಅಧಿಕಾರಿಗೆ ಮೊಬೈಲ್ ಮೂಲಕ ಮಾಹಿತಿ ನೀಡಲು ತನಿಖಾ ತಂಡ ಯತ್ನಿಸಿತು. ಆದರೆ, ಅವರು ಮೊಬೈಲ್ ಅನ್ನು ‘ಫ್ಲೈಟ್ ಮೋಡ್’ನಲ್ಲಿ ಇರಿಸಿದ್ದರಿಂದ ಸಂಪರ್ಕಕ್ಕೆ ಲಭ್ಯರಾಗಲಿಲ್ಲ. ಬಳಿಕ ಮಂಜುನಾಥ್ ಮನೆಯಲ್ಲೇ ಇರುವ ಮಾಹಿತಿ ಸಂಗ್ರಹಿಸಿದ ಎಸ್‌ಪಿ, ಅಲ್ಲಿಗೇ ತೆರಳಿ ಬಂಧಿಸಿದರು’ ಎಂದು ಮೂಲಗಳು ಹೇಳಿವೆ.

ಎಸಿಬಿ ಎಸ್‌ಪಿಪಿ ರಾಜೀನಾಮೆ

ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯದಲ್ಲಿ ಎಸಿಬಿ ಪರವಾಗಿ ವಾದ ಮಂಡಿಸುತ್ತಿದ್ದ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಮನಮೋಹನ್ ತಮ್ಮ ಹುದ್ದೆಗೆ ಸೋಮವಾರ ರಾಜೀನಾಮೆ ಸಲ್ಲಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮುಖ್ಯಮಂತ್ರಿ ವಜಾಗೆ ರಾಹುಲ್‌ಗಾಂಧಿ ಆಗ್ರಹ

ನವದೆಹಲಿ: ಬಿಜೆಪಿಯ ಭ್ರಷ್ಟಾಚಾರ ಮತ್ತು ‘ಹುದ್ದೆಗಳ ಮಾರಾಟ’ ಕರ್ನಾಟಕದಲ್ಲಿ ಸಾವಿರಾರು ಯುವಜನರ ಕನಸನ್ನು ನುಚ್ಚುನೂರಾಗಿಸಿದೆ. ಅಕ್ರಮದ ನ್ಯಾಯಯುತ ತನಿಖೆಗಾಗಿ ಈ ಹಿಂದೆ ಗೃಹ ಸಚಿವರಾಗಿದ್ದ, ಈಗಿನ ಮುಖ್ಯಮಂತ್ರಿ ಅವರನ್ನು ವಜಾಗೊಳಿಸಬೇಕು ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಒತ್ತಾಯಿಸಿದ್ದಾರೆ.

ಈ ಕುರಿತ ಟ್ವೀಟ್‌ನಲ್ಲಿ ಅವರು, ‘ತಿನ್ನುವುದಿಲ್ಲ, ತಿನ್ನಲು ಬಿಡುವುದಿಲ್ಲ’ ಎಂದು ಹೇಳಿದ್ದ ಪ್ರಧಾನಿ ಏಕೆ ಯಾವುದೇ ಕ್ರಮ ಕೈಗೊಂಡಿಲ್ಲ? ಸದ್ಯ, ಬಿಜೆಪಿ ಸರ್ಕಾರವು ‘ಎಲ್ಲವನ್ನೂ ತಿನ್ನುತ್ತೇವೆ, ಎಲ್ಲರಿಗೂ ತಿನ್ನಿಸುತ್ತೇವೆ’ ಎಂಬ ಸ್ಥಿತಿಯಲ್ಲಿದೆಯೇ ಎಂದು ವ್ಯಂಗ್ಯವಾಗಿ ಪ್ರಶ್ನಿಸಿದ್ದಾರೆ.

ಪಿಎಸ್‌ಐ ನೇಮಕಾತಿ ಅಕ್ರಮ; ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹ

ಆರಗ ರಾಜೀನಾಮೆ ನೀಡಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಿಎಸ್‌ಐ ನೇಮಕಾತಿಯಲ್ಲಿ ಅಕ್ರಮ ನಡೆದಿಲ್ಲ ಎಂದು ವಿಧಾನ ಮಂಡಲದ ದಾರಿ ತಪ್ಪಿಸಿದ ಗೃಹ ಸಚಿವ ಆರಗ ಜ್ಞಾನೇಂದ್ರ ತಕ್ಷಣ ರಾಜೀನಾಮೆ ನೀಡಬೇಕು. ಈ ಪ್ರಕರಣವನ್ನು ಮುಚ್ಚಿ ಹಾಕಲು ಯಾರೆಲ್ಲಾ ರಾಜಕಾರಣಿಗಳು ಒತ್ತಡ ಹೇರಿದ್ದರೂ ಅವರೆಲ್ಲರ ಹೆಸರನ್ನು ಆತ್ಮಸಾಕ್ಷಿಯಿಂದ ಬಹಿರಂಗಪಡಿಸಬೇಕು’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ಈ ಹಗರಣದ ಕುರಿತು ನಾನು ಮತ್ತು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಜೊತೆಯಾಗಿ ಮಂಗಳವಾರ (ಜುಲೈ5) ಮಾಧ್ಯಮಗೋಷ್ಠಿ ನಡೆಸಿ ಮಾತನಾಡುತ್ತೇವೆ’ ಎಂದರು.

‘ಪಿಎಸ್‌ಐ ನೇಮಕಾತಿಯಲ್ಲಿ ಯಾವುದೇ ಹಗರಣ ನಡೆದಿಲ್ಲ. ಎಲ್ಲವೂ ಪಾರದರ್ಶಕವಾಗಿದೆ ಎಂದು ಗೃಹ ಸಚಿವರು ಹೇಳಿದ್ದರು. ಆದರೆ, ಇದೀಗ ಈ ಹಗರಣದಲ್ಲಿ ಐಪಿಎಸ್ ಅಧಿಕಾರಿ ಅಮ್ರಿತ್ ಪೌಲ್ ಬಂಧನವಾಗಿದ್ದು, ಅಕ್ರಮ ನಡೆದಿರುವುದನ್ನು ಗೃಹ ಸಚಿವರೇ ಒಪ್ಪಿಕೊಂಡಿದ್ದಾರೆ’ ಎಂದರು.

‘ಅಕ್ರಮದಲ್ಲಿ ಭಾಗಿಯಾಗಿರುವ ಆರೋಪಿ ಮಾಗಡಿಯ ಅಭ್ಯರ್ಥಿಯನ್ನು ವಿಚಾರಣೆ ಮಾಡದಂತೆ ಯಾರು ಬೆಂಬಲವಾಗಿ ನಿಂತರು, ಆ ಅಭ್ಯರ್ಥಿಯನ್ನು ಬಿಟ್ಟು ಕಳುಹಿಸಿದ್ದು ಯಾಕೆ? ನಂತರ 20 ದಿನ ವ್ಯಾಪಾರ ವಹಿವಾಟು ನಡೆಸಲು ಅವಕಾಶ ನೀಡಿ ಮತ್ತೆ ಆತನನ್ನು ವಿಚಾರಣೆಗೆ ಕರೆತಂದದ್ದು, ಅದರಲ್ಲಿ ಯಾರೆಲ್ಲಾ ಭಾಗಿಯಾಗಿದ್ದಾರೆ ಎಂಬುದು ಬಹಿರಂಗವಾಗಬೇಕು’ ಎಂದೂ ಆಗ್ರಹಿಸಿದರು.

‘ಈ ಹಗರಣ ಮುಚ್ಚಿ ಹಾಕಲು ಸರ್ಕಾರ ದೊಡ್ಡ ಪ್ರಯತ್ನ ನಡೆಸಿತು. ಗೃಹ ಸಚಿವರು ಹಾಗೂ ದೊಡ್ಡ ಅಧಿಕಾರಿಗಳ ಭಾಗಿಯ ಬಗ್ಗೆ ನಾವು ಆರೋಪ ಮಾಡಿದೆವು. ಅಕ್ರಮವಾಗಿ ಹಣ್ಣು ತಿಂದವರನ್ನು ಮಾತ್ರ ಹಿಡಿದ್ದಾರೆ. ಅಕ್ರಮವಾಗಿ ಹಣ್ಣು ಮಾರಿದವರನ್ನು ಹಿಡಿಯಲಿಲ್ಲ. ಈ ಪ್ರಕರಣದಿಂದ ಇಡೀ ಪೊಲೀಸ್ ಇಲಾಖೆಗೆ ಕೆಟ್ಟ ಹೆಸರು ಬರುವ ಕೆಲಸವನ್ನು ಸರ್ಕಾರ ಮಾಡಿದೆ’ ಎಂದರು.

‘ಸರ್ಕಾರಕ್ಕೆ ಮುಜುಗರವಿಲ್ಲ’

ಬೆಂಗಳೂರು: ಪಿಎಸ್‌ಐ ನೇಮಕಾತಿ ಪರೀಕ್ಷೆಗೆ ಸಂಬಂಧಿಸಿದ ಪ್ರಕರಣದಲ್ಲಿ ಎಡಿಜಿಪಿ ಅಮ್ರಿತ್ ಪೌಲ್ ಅವರನ್ನು ಬಂಧಿಸಿರುವುದರಿಂದ ರಾಜ್ಯ ಸರ್ಕಾರಕ್ಕೆ ಮುಜುಗರವಾಗುವ ಪ್ರಶ್ನೆಯೇ ಇಲ್ಲ’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ‘ನೇಮಕಾತಿ ವಿಭಾಗದ ಮುಖ್ಯಸ್ಥರಾಗಿದ್ದ ಪೌಲ್, ಇಡೀ ಕಟ್ಟಡದ ವಿದ್ಯುತ್ ದೀಪ ಆರಿಸಿ, ಒಎಂಆರ್ ಪ್ರತಿ ತಿದ್ದಿಸಿರುವುದು ಪತ್ತೆಯಾಗಿದೆ. 18 ಗಂಟೆಗಳ ವಿಚಾರಣೆ ನಡೆಸಿದ ಬಳಿಕ ಅವರನ್ನು ಬಂಧಿಸಲಾಗಿದೆ. ನಮ್ಮ ಸರ್ಕಾರ ಯಾವುದೇ ಆರೋಪಿಯನ್ನೂ ರಕ್ಷಿಸುವುದಿಲ್ಲ ಎಂಬುದಕ್ಕೆ ‘ಇದು ಸಾಕ್ಷಿ’ ಎಂದರು.

‘ನಾನು ವಿಧಾನಮಂಡಲದಲ್ಲಿ ಈ ಕುರಿತು ಉತ್ತರ ನೀಡಿದಾಗ, ಪ್ರಕರಣದ ತನಿಖೆ ನಡೆದಿರಲಿಲ್ಲ. ನಾನು ಸುಳ್ಳು ಹೇಳಿಲ್ಲ. ಪ್ರಕರಣದ ಮಾಹಿತಿ ದೊರಕುತ್ತಿದ್ದಂತೆ ತನಿಖೆಗೆ ಆದೇಶಿಸಿದ್ದೆವು. ಅಕ್ರಮದಲ್ಲಿ ಭಾಗಿಯಾದ ಎಲ್ಲರನ್ನೂ ಬಂಧಿಸಲಾಗುತ್ತಿದೆ. ದುಡ್ಡು ಕೊಟ್ಟು ನೌಕರಿ ಪಡೆಯಲು ಯತ್ನಿಸಿದರೆ ಜೈಲಿಗೆ ಹೋಗಬೇಕಾಗುತ್ತದೆ ಎಂಬ ಸಂದೇಶ ರವಾನಿಸಿದ್ದೇವೆ’ ಎಂದರು.

‘ಪ್ರಕರಣದ ನೈತಿಕ ಹೊಣೆ ಹೊತ್ತು ಗೃಹ ಸಚಿವರು ರಾಜೀನಾಮೆ ನೀಡಬೇಕು’ ಎಂಬ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹ ಕುರಿತು ಪ್ರತಿಕ್ರಿಯಿಸಿದ ಅವರು, ‘ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ ನೇಮಕಾತಿಯಲ್ಲಿ ಅಕ್ರಮ ನಡೆದಿತ್ತು. ಆಗ ಯಾರನ್ನು ಬಂಧಿಸಿದ್ದರು’ ಎಂದು ಕೇಳಿದರು.

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಿದೆ. ಇದಕ್ಕಾಗಿ ದಾನಿಗಳು ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept. fmc@printersmysore.co.inಗೆ ಮೇಲ್ ಕಳುಹಿಸಿ.

ಆನ್‌ಲೈನ್/ಚೆಕ್ ಮೂಲಕವೂ ಹಣ ವರ್ಗಾಯಿಸಬಹುದು. ₹1 ಸಾವಿರಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು 'Deccan Herald-Prajavani Relief Trust', Canara Bank, Cantonment Branch, A/c no. 0404101200385, IFSC code: CNRB0000404, MICR Code: 560015009 ಇಲ್ಲಿಗೆ ಕಳುಹಿಸಬೇಕು.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ.

ಸೂಚನೆ: ದಾನಿಗಳು ಲಕೋಟೆ ಮೇಲೆ **ಶೈಕ್ಷಣಿಕ ನೆರವಿಗೆ ಕೊಡುಗೆ** ಎಂದು ನಮೂದಿಸಬೇಕು. https://bit.ly/3xFpoz4

ವಿಳಾಸ: ಮ್ಯಾನೇಜರ್, ಡೆಕ್ಕನ್‌ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ.75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು–560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2022 ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಜತೆಗೆ ವಿಳಾಸ, ಮೊಬೈಲ್ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು. ಲಕೋಟೆಯ ಮೇಲೆ **‘ಶೈಕ್ಷಣಿಕ ನೆರವಿಗೆ ಅರ್ಜಿ’** ಎಂದು ಬರೆಯಬೇಕು.

ವಿದ್ಯಾರ್ಥಿಗಳ ಅಭಿಪ್ರಾಯ

ಅಗತ್ಯವಿದ್ದಾಗ ನೆರವಿಗೆ ಬಂತು



‘ಪ್ರಜಾವಾಣಿ’ ನೀಡುತ್ತಿರುವ ವಿದ್ಯಾರ್ಥಿ ವೇತನ ಆರ್ಥಿಕವಾಗಿ ಸ್ಥಿತಿವಂತರಲ್ಲದ ಕುಟುಂಬಗಳ ವಿದ್ಯಾರ್ಥಿಗಳಿಗೆ ನೆರವಾಗುತ್ತಿದೆ. ನನಗೆ ಲಭಿಸಿದ ವಿದ್ಯಾರ್ಥಿ ವೇತನದಲ್ಲಿ ಪಠ್ಯಪುಸ್ತಕಗಳನ್ನು ಖರೀದಿಸಿದೆ. ಅಗತ್ಯ ಕಾಲದಲ್ಲಿ ಈ ವೇತನ ನೆರವಿಗೆ ಬಂದಿದೆ.

ದೀಪಕ ರವೀಂದ್ರ ಭಟ್, ಹುಳಗೋಳ

ಎಂಜಿನಿಯರಿಂಗ್ ಓದುವಾಗ ಬಳಸುವೆ



ವಿದ್ಯಾರ್ಥಿ ವೇತನಕ್ಕೆ ಹಲವೆಡೆ ಅರ್ಜಿ ಸಲ್ಲಿಸಿದ್ದೆ. ಆದರೆ, ಯಾವ ಸಂಘ– ಸಂಸ್ಥೆಗಳಿಂದಲೂ ಸಹಾಯ ಸಿಕ್ಕಿರಲಿಲ್ಲ. ಅಂತಹ ಸಂದರ್ಭದಲ್ಲಿ ‘ಪ್ರಜಾವಾಣಿ’ ವಿದ್ಯಾರ್ಥಿ ವೇತನ ಲಭಿಸಿತು. ಈ ಹಣವನ್ನು ಬ್ಯಾಂಕ್ ಖಾತೆಯಲ್ಲಿಟ್ಟು ಪಿಯುಸಿ ಬಳಿಕ ಎಂಜಿನಿಯರಿಂಗ್ ಓದುವ ಆಸೆ ಇದ್ದು, ಆಗ ಇದನ್ನು ಬಳಕೆ ಮಾಡುತ್ತೇನೆ.

ರೂಪಾ ಮಂಜುನಾಥ ಗೌಡ, ಶಿರಸಿ

‘ವರ್ಗಾವಣೆ ಬೆದರಿಕೆ ಬಂದಿದೆ’

ಒಂದನೇ ಪುಟದಿಂದ

ಬೆಳಗಿನ ಕಲಾಪದಲ್ಲಿ ತಾವು ಹೇಳಿದಂತೆ ಎಲ್ಲವನ್ನೂ ಮಧ್ಯಾಹ್ನದ ಕಲಾಪದಲ್ಲಿ ಆದೇಶದಲ್ಲಿ ಬರೆಯಿಸಲು ಮುಂದಾಗುತ್ತಿದ್ದಂತೆಯೇ ಮಧ್ಯ ಪ್ರವೇಶಿಸಿದ ನಾವದಗಿ, ‘ತಾವು ಎಲ್ಲವನ್ನೂ ಆದೇಶದಲ್ಲಿ ಕಾಣಿಸುವ ಅವಶ್ಯಕತೆ ಇಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ಲುಪ್ತವಾಗಿ ನಿರ್ದೇಶನ ನೀಡಿದರೆ ಸಾಕು’ ಎಂದು ಮನವಿ ಮಾಡಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಮೂರ್ತಿಗಳು, ಜಿಲ್ಲಾಧಿಕಾರಿ ಮಂಜುನಾಥ್ ಅವರ ಸೇವಾ ದಾಖಲೆಯನ್ನು ಹಾಜರುಪಡಿಸುವಂತೆ ನಿರ್ದೇಶಿಸಿ ವಿಚಾರಣೆಯನ್ನು ಇದೇ 7ಕ್ಕೆ ಮುಂದೂಡಿದರು.

ಆನೇಕಲ್ ತಾಲ್ಲೂಕಿನ ಕೂಡ್ಲು ಗ್ರಾಮದ 38 ಗುಂಟೆ ಜಮೀನು ಒಡೆತನಕ್ಕೆ ಸಂಬಂಧಿಸಿದ ವ್ಯಾಜ್ಯದಲ್ಲಿ ಅನುಕೂಲಕರ ಆದೇಶ ನೀಡಲು ಬೇಗೂರು ನಿವಾಸಿ ಅಜಂ ಪಾಷಾ ಎಂಬುವರಿಂದ ₹ 5 ಲಕ್ಷ ಲಂಚ ಪಡೆಯಲಾಗಿದೆ ಎಂಬ ಪ್ರಕರಣದಲ್ಲಿ ಅರ್ಜಿದಾರ ಮಹೇಶ್ ಆರೋಪಿಯಾಗಿದ್ದಾರೆ. ಎಸಿಬಿ ಪರ ಪಿ.ಎನ್. ಮನಮೋಹನ್ ಮತ್ತು ಅರ್ಜಿದಾರ ಮಹೇಶ್ ಪರ ಹಿರಿಯ ವಕೀಲ ಎ.ಎಸ್. ಪೊನ್ನಣ್ಣ ಹಾಜರಾಗಿದ್ದರು.

‘ಅಪ್ರಾಮಾಣಿಕರು ಜಡ್ಜ್‌ಗಳಾಗಲು ನಾಲಾಯಕ್’

‘ನ್ಯಾಯಾಂಗದ ಸಮಗ್ರತೆ ಮತ್ತು ಪ್ರಾಮಾಣಿಕತೆ ಕಾಪಾಡಬೇಕು. ಇಲ್ಲವಾದರೆ ಅಂತಹವರು ಜಡ್ಜ್‌ಗಳಾಗಲು ನಾಲಾಯಕ್. ನಾನು ನಿವೃತ್ತಿ ಆದ ಮೇಲೆ, ನ್ಯಾಯಾಂಗ ಸೈನಿಕರನ್ನು ತಯಾರು ಮಾಡುತ್ತೇನೆ. ಕಳೆದ 20 ವರ್ಷಗಳಿಂದ ಅಕಾಡೆಮಿಯಲ್ಲಿ ಪಾಠ ಮಾಡುತ್ತಿದ್ದು, ಖಾಸಗಿ ಅಕಾಡೆಮಿ ಶುರು ಮಾಡುತ್ತೇನೆ. ಗ್ರಾಮೀಣದ ವಕೀಲರನ್ನು ನ್ಯಾಯಾಧೀಶರಾಗಲು ತಯಾರು ಮಾಡುತ್ತೇನೆ’ ಎಂದು ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಹೇಳಿದರು.

ಸರ್ಚ್ ವಾರೆಂಟ್ ತೋರಿಸಿ ವಸೂಲಿ: ಹಳೆಯ ಪ್ರಕರಣವೊಂದನ್ನು ಪ್ರಸ್ತಾಪಿಸಿದ ಸಂದೇಶ್, ‘ಐಎಎಸ್ ಅಧಿಕಾರಿ ಮನೆ ಮೇಲಿನ ದಾಳಿಯಲ್ಲಿ ನಾಲ್ಕೂವರೆ ಕೋಟಿ ಹಣ ಸಿಗುತ್ತೆ. 5 ಕೆಜಿ ಚಿನ್ನ ಸಿಗುತ್ತದೆ. ಕೇಸಿನಲ್ಲಿ ಬಿ ರಿಪೋರ್ಟ್ ಹಾಕಿದಾಗ, ಬಿ ರಿಪೋರ್ಟ್ ಹಾಕಿದ್ದೇಕೆ ಎಂದು ಪ್ರಶ್ನಿಸಿದ ನ್ಯಾಯಾಧೀಶರು ವರ್ಗಾವಣೆಯಾಗುತ್ತಾರೆ. ಮತ್ತೊಬ್ಬ ನ್ಯಾಯಾಧೀಶರು ಬಂದ ಮೇಲೆ ಬಿ ರಿಪೋರ್ಟ್ ಅಂಗೀಕೃತವಾಗುತ್ತದೆ. ಇಂತಹ ಘಟನೆಗಳು ನೋವು ತರಿಸುತ್ತವೆ. ರೆಡ್ ಹ್ಯಾಂಡ್ ಆಗಿ ಲಂಚ ಸಮೇತ ಸಿಕ್ಕಿಬಿದ್ದಿದ್ದರೂ ಬಿ ರಿಪೋರ್ಟ್ ಹೇಗೆ ಹಾಕ್ತಾರೆ. ಸರ್ಚ್ ವಾರೆಂಟ್ ತೆಗೆದುಕೊಂಡರೂ ಸರ್ಚ್ ಮಾಡುವುದಿಲ್ಲ. ಸರ್ಚ್ ವಾರೆಂಟ್ ತೋರಿಸಿಯೇ ವಸೂಲಿ ಮಾಡುತ್ತಾರೆ’ ಎಂದರು.

ಬೇಲಿಯೇ ಎದ್ದು ಹೊಲ ಮೇಯುತ್ತಿದೆ: ‘ರಾಜ್ಯದಲ್ಲಿ ಏನು ನಡೆಯುತ್ತಿದೆ. ಅಡ್ವೊಕೇಟ್ ಜನರಲ್ ಅವರೇ, ಜಿಲ್ಲಾಧಿಕಾರಿ ಕಚೇರಿಯಲ್ಲಿ ದುಡ್ಡು ಕಲೆಕ್ಷನ್ ಮಾಡಲು ಖಾಸಗಿ ವ್ಯಕ್ತಿಯನ್ನು ನೇಮಿಸಿಕೊಳ್ಳಲಾಗುತ್ತದೆ, ಖಾಸಗಿ ಪಿಎ ಡಿಸಿ ಹತ್ರ ಎಲ್ಲ ಮಾಡಿಸಿಕೊಡುತ್ತೇನೆ ಎಂದರೆ ಅದರರ್ಥ ಏನು, ಇವೆಲ್ಲಾ ಸಂಭಾಷಣೆ ಫೋನ್‌ನಲ್ಲಿ ರೆಕಾರ್ಡ್ ಆಗಿವೆ. ಡಿಸಿ ಒಪ್ಪಿಗೆ ಇಲ್ಲದೆಯೇ ಆತ ₹ 5 ಲಕ್ಷ ಲಂಚ ಪಡೆಯಲು ಸಾಧ್ಯವೇ. ಬೇಲಿಯೇ ಎದ್ದು ಹೊಲ ಮೇಯುತ್ತಿದೆಯಲ್ಲವೇ’ ಎಂದು ಸಂದೇಶ್ ಪ್ರಶ್ನಿಸಿದರು.

400 ಪಿಎಸ್‌ಐ ಹುದ್ದೆ ವ್ಯಾಪಾರ: ‘ಇದೇ ವೇಳೆ ಪಿಎಸ್‌ಐ ಪ್ರಕರಣದ ವಿಚಾರಣೆಯನ್ನೂ ನಡೆಸುತ್ತಿರುವ ಸಂದೇಶ್, ‘545 ಪೋಸ್ಟ್‌ಗಳಲ್ಲಿ 400 ಪೋಸ್ಟ್‌ಗಳ ವ್ಯಾಪಾರ ಮಾಡಲಾಗಿದೆ. ಇವರೆಲ್ಲಾ ನೇಮಕವಾದ ಮೇಲೆ ಜನರ ರಕ್ತ ಕುಡಿಯುತ್ತಾರೆ. ಇದನ್ನೆಲ್ಲಾ ತಡೆಯದೇ ಹೋದರೆ ಕಷ್ಟವಾಗುತ್ತದೆ. ರಾಜ್ಯಕ್ಕೆ ಅವಮಾನ ಆಗುತ್ತಿದ್ದರೂ ನೀವು ಐಎಎಸ್ ಅಧಿಕಾರಿಗಳನ್ನು ರಕ್ಷಣೆ ಮಾಡುತ್ತಿದ್ದೀರಿ’ ಎಂದರು.

ಬೀಗದ ಕೀ ಕೊಟ್ಟು ಸಿಕ್ಕಿಬಿದ್ದ ಪೌಲ್

ಒಂದನೇ ಪುಟದಿಂದ

ಪೌಲ್ ಅವರನ್ನು ಒಂದನೇ ಎಸಿಎಂಎಂ ನ್ಯಾಯಾಲಯಕ್ಕೆ ಹಾಜರುಪಡಿಸಿ, 10 ದಿನ ಕಸ್ಟಡಿಗೆ ಪಡೆದಿರುವ ಸಿಐಡಿ ಅಧಿಕಾರಿಗಳು ಅರಮನೆ ರಸ್ತೆಯಲ್ಲಿರುವ ಕಚೇರಿಯಲ್ಲಿ ವಿಚಾರಣೆ ಆರಂಭಿಸಿದ್ದಾರೆ. ಇದರ ನಡುವೆಯೇ ಡಿವೈಎಸ್ಪಿ ಶಾಂತಕುಮಾರ್ ಅವರನ್ನೂ ಕೋರಮಂಗಲ ಠಾಣೆ ಪ್ರಕರಣದಲ್ಲಿ ಪುನಃ ಸಿಐಡಿ ಅಧಿಕಾರಿಗಳು 7 ದಿನ ಕಸ್ಟಡಿಗೆ ಪಡೆದಿದ್ದು, ಅವರ ವಿಚಾರಣೆಯೂ ಆರಂಭವಾಗಿದೆ.

‘ಪೊಲೀಸ್ ನೇಮಕಾತಿ ವಿಭಾಗದ ಮುಖ್ಯಸ್ಥರಾಗಿದ್ದ ಅಮ್ರಿತ್ ಪೌಲ್, ತಮ್ಮ ಅಧೀನದ ನೌಕರರ ಜೊತೆ ಸೇರಿಕೊಂಡು ಅಕ್ರಮ ಎಸಗಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಈ ಬಗ್ಗೆ ಬಂಧಿತ ನೌಕರರು ಸಹ ಹೇಳಿಕೆ ನೀಡಿದ್ದು, ಅದನ್ನು ಮುಂದಿಟ್ಟುಕೊಂಡು ಎಡಿಜಿಪಿ ವಿಚಾರಣೆ ನಡೆಸಲಾಗುತ್ತಿದೆ’ ಎಂದು ಸಿಐಡಿ ಮೂಲಗಳು ಹೇಳಿವೆ.

‘2021ರ ಅಕ್ಟೋಬರ್ 3ರಂದು ರಾಜ್ಯದ 92 ಕೇಂದ್ರಗಳಲ್ಲಿ ಪರೀಕ್ಷೆ ನಡೆದಿತ್ತು. ಅಭ್ಯರ್ಥಿಗಳ ಒಎಂಆರ್ ಅಸಲು ಪ್ರತಿಗಳನ್ನು ಟ್ರಂಕ್‌ಗಳಲ್ಲಿ ಇರಿಸಿ, ಅದರ ಬೀಗಕ್ಕೆ ಸೀಲ್ ಮಾಡಿ ಬೆಂಗಳೂರಿನಲ್ಲಿರುವ ನೇಮಕಾತಿ ವಿಭಾಗದ ಕಚೇರಿಗೆ ಕಳುಹಿಸಲಾಗಿತ್ತು. ಅವೆಲ್ಲ ಟ್ರಂಕ್‌ಗಳನ್ನು ವಿಭಾಗದ ಭದ್ರತಾ ಕೊಠಡಿಯಲ್ಲಿ ಇರಿಸಲಾಗಿತ್ತು. ಕೊಠಡಿಗೆ ಹಾಕಿದ್ದ ಬೀಗಕ್ಕೆ ಎರಡು ಕೀಗಳಿದ್ದವು. ಒಂದು ಎಡಿಜಿಪಿ ಬಳಿ ಇದ್ದರೆ, ಮತ್ತೊಂದು ವಿಭಾಗದ ಸೂಪರಿಂಟೆಂಡೆಂಟ್ ಬಳಿ ಇತ್ತು’ ಎಂದು ಮೂಲಗಳು ತಿಳಿಸಿವೆ.

‘ಸೂಪರಿಂಟೆಂಡೆಂಟ್ ಬಳಿ ಇದ್ದ ಕೀ ಬಗ್ಗೆ ತನಿಖೆ ನಡೆಯುತ್ತಿದ್ದು, ಅವರು ಅಕ್ರಮದಲ್ಲಿ ಭಾಗಿಯಾದ ಬಗ್ಗೆ ಸದ್ಯಕ್ಕೆ ಪುರಾವೆಗಳು ಸಿಕ್ಕಿಲ್ಲ. ಆದರೆ, ಎಡಿಜಿಪಿ ತಮ್ಮ ಬಳಿಯ ಕೀ ಬಳಸಿ ಭದ್ರತಾ ಕೊಠಡಿ ಬೀಗ ತೆಗೆದು ನೌಕರರಿಂದಲೇ ಒಎಂಆರ್ ಪ್ರತಿ ತಿದ್ದಿಸಿರುವುದು ಮೇಲ್ನೋಟಕ್ಕೆ ಸಾಕ್ಷ್ಯ ಲಭಿಸಿದೆ’ ಎಂದೂ ಸಿಐಡಿ ಮೂಲಗಳು ಹೇಳಿವೆ.

‘ಭದ್ರತಾ ಕೊಠಡಿಯಲ್ಲಿದ್ದ ಟ್ರಂಕ್‌ಗಳ ಕೆಲ ಬೀಗದ ಕೀಗಳು ಡಿವೈಎಸ್ಪಿ ಶಾಂತಕುಮಾರ್ ಮನೆಯಲ್ಲಿ ಪತ್ತೆಯಾಗಿದ್ದವು. ಎಡಿಜಿಪಿ ಅವರೇ ಡಿವೈಎಸ್ಪಿ ಮೂಲಕ ಕೊಠಡಿ ಬೀಗ ತೆಗೆಸಿರುವುದಕ್ಕೆ ಪುರಾವೆಗಳು ಇವೆ’ ಎಂದೂ ತಿಳಿಸಿವೆ.

‘ತಮ್ಮ ಮೇಲಿನ ಆರೋಪ ಅಲ್ಲಗೆಳೆಯುತ್ತಿರುವ ಎಡಿಜಿಪಿ, ಪ್ರಕರಣದಲ್ಲಿ ತಮ್ಮ ತಪ್ಪು ಇಲ್ಲವೆಂದೇ ವಾದಿಸುತ್ತಿದ್ದಾರೆ. ಆದರೆ, ಸೂಕ್ತ ಪುರಾವೆಗಳನ್ನು ಮುಂದಿಟ್ಟಾಗ ಮೌನವಾಗುತ್ತಿದ್ದಾರೆ. ಹೀಗಾಗಿ, ಡಿವೈಎಸ್ಪಿ ಹಾಗೂ ಇತರೆ ನೌಕರರ ಸಮ್ಮುಖದಲ್ಲೇ ಎಡಿಜಿಪಿ ವಿಚಾರಣೆ ನಡೆಸಿದರೆ ನಿಜಾಂಶ ತಿಳಿಯಲಿದೆ’ ಎಂದೂ ತಿಳಿಸಿವೆ.

ಅಧಿಕಾರಸ್ಥರ ಒತ್ತಡ: ಸಿಬಿಐ ತನಿಖೆಗೆ ಆಗ್ರಹ

‘ಎಡಿಜಿಪಿ ಅಮ್ರಿತ್ ಪೌಲ್ ಅವರನ್ನು ಬಂಧಿಸದಂತೆ ಅಧಿಕಾರಸ್ಥ ಪ್ರಭಾವಿಯೊಬ್ಬರು ಸಿಐಡಿ ಅಧಿಕಾರಿಗಳ ಮೇಲೆ ನಿರಂತರವಾಗಿ ಒತ್ತಡ ಹೇರಿದ್ದರು’ ಎಂಬ ಆರೋಪ ಕೇಳಿಬಂದಿದ್ದು, ಪಿಎಸ್‌ಐ ಅಕ್ರಮದ ತನಿಖೆಯನ್ನು ಸಿಬಿಐಗೆ ವಹಿಸಿದರೆ ಪ್ರಭಾವಿಗಳು ಜೈಲು ಸೇರಲಿದ್ದಾರೆ’ ಎಂಬ ಚರ್ಚೆ ಪೊಲೀಸ್ ಇಲಾಖೆಯಲ್ಲಿ ನಡೆಯುತ್ತಿದೆ.

‘ಪಿಎಸ್‌ಐ ಅಕ್ರಮ ಬಯಲಾದ ದಿನದಿಂದಲೂ ಪ್ರಕರಣದಲ್ಲಿ ಎಡಿಜಿಪಿ ಪಾತ್ರವಿರುವ ಆರೋಪಗಳು ಕೇಳಿಬರುತ್ತಿದ್ದವು. ಅವರನ್ನು ಸಿಐಡಿ ವಿಚಾರಣೆಗೆ ಒಳಪಡಿಸಬೇಕಿದ್ದ ಸರ್ಕಾರ, ಏಪ್ರಿಲ್ 27ರಂದು ಆಂತರಿಕ ಭದ್ರತಾ ವಿಭಾಗಕ್ಕೆ ವರ್ಗಾಯಿಸಿತ್ತು. ಸರ್ಕಾರದ ಈ ನಡೆ ಹಲವು ಅನುಮಾನಕ್ಕೆ ಕಾರಣವಾಗಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಎಡಿಜಿಪಿ ಅವರನ್ನು ಬಂಧಿಸಲಾಗಿದ್ದರೂ ವಿಚಾರಣೆ ಬಳಿಕ ಅಧಿಕಾರಸ್ಥ ಪ್ರಭಾವಿಗಳು ಹಾಗೂ ದೊಡ್ಡವರನ್ನು ಬಂಧಿಸುವುದು ಸಿಐಡಿಯಿಂದ ಸಾಧ್ಯವಿಲ್ಲ. ಬಹುಕೋಟಿ ಅಕ್ರಮ ನಡೆದಿರುವ ಅನುಮಾನವೂ ಇರುವುದರಿಂದ, ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವುದು ಸೂಕ್ತ’ ಎಂದೂ ತಿಳಿಸಿವೆ.

‘1995ನೇ ಬ್ಯಾಚ್ ಅಧಿಕಾರಿ’

‘ಪಂಜಾಬ್‌ನ ಅಮ್ರಿತ್ ಪೌಲ್, ಎಂ.ಎಸ್ಸಿ ಪದವೀಧರ. 1995ನೇ ಐಪಿಎಸ್ ಬ್ಯಾಚ್ ಅಧಿಕಾರಿ. ಉಡುಪಿ ಎಸ್ಪಿ, ಪಶ್ಚಿಮ ವಿಭಾಗ ಹಾಗೂ ರಾಜ್ಯ ಆಡಳಿತ ವಿಭಾಗದ ಐಜಿಪಿ ಆಗಿಯೂ ಕೆಲಸ ಮಾಡಿದ್ದರು. 2020ರಲ್ಲಿ ಎಡಿಜಿಪಿ ಹುದ್ದೆಗೆ ಬಡ್ತಿ ಪಡೆದಿದ್ದ ಇವರು, ನೇಮಕಾತಿ ವಿಭಾಗಕ್ಕೆ ನಿಯೋಜನೆಗೊಂಡಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ. ‘ವಿಭಾಗದ ಅಧಿಕಾರ ವಹಿಸಿಕೊಳ್ಳುತ್ತಿದ್ದಂತೆ 545 ಪಿಎಸ್‌ಐ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಆರಂಭಿಸಿದ್ದರು. ಇದೇ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿದೆ’ ಎಂದೂ ತಿಳಿಸಿವೆ.





ದಕ್ಷಿಣ ಕನ್ನಡ ಜಿಲ್ಲೆ ಸೋಮೇಶ್ವರ ಪುರಸಭೆ ವ್ಯಾಪ್ತಿಯ ಉಚ್ಚಿಲ ಬಟ್ಟಪ್ಪಾಡಿಯಲ್ಲಿ ಸಮುದ್ರ ತೀರದಲ್ಲಿನ ರೆಸಾರ್ಟ್ ಆವರಣ ಸಮುದ್ರ ಪಾಲಾಗಿರುವುದು (ಎಡ ಚಿತ್ರ). ಜೊಯಿಡಾ ತಾಲ್ಲೂಕಿನ ಅನಮೋಡ ಸಮೀಪ ರಾಷ್ಟ್ರೀಯ ಹೆದ್ದಾರಿ ‘4 ಎ’ ಮೇಲೆ ಕುಸಿದ ಗುಡ್ಡದ ಮಣ್ಣನ್ನು ಜೆ.ಸಿ.ಬಿ ಯಂತ್ರದ ಮೂಲಕ ತೆರವು ಮಾಡುತ್ತಿರುವುದು

–ಪ್ರಜಾವಾಣಿ ಚಿತ್ರಗಳು

ಕರಾವಳಿ, ಮಲೆನಾಡಿನಲ್ಲಿ ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಮಡಿಕೇರಿ/ ಕಾರವಾರ/ ಮಂಗಳೂರು: ಕೊಡಗು, ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಭಾನುವಾರ ರಾತ್ರಿಯಿಂದ ಧಾರಾಕಾರ ಮಳೆ ಸುರಿದಿದೆ.

ಭಾಗಮಂಡಲ- ನಾಪೋಕ್ಲು ರಸ್ತೆ ಸಂಪರ್ಕ ಕಡಿತಗೊಂಡಿರುವುದರಿಂದ ಜನರಿಗೆ ಸಂಚಾರಕ್ಕಾಗಿ ಸೋಮವಾರ ಯಾಂತ್ರಿಕ ದೋಣಿಯ ವ್ಯವಸ್ಥೆ ಕಲ್ಪಿಸಲಾಗಿತ್ತು. ಭಾಗಮಂಡಲ ವ್ಯಾಪ್ತಿಯಲ್ಲಿ ಶಾಲಾ- ಕಾಲೇಜುಗಳಿಗೆ ಮಧ್ಯಾಹ್ನದ ವೇಳೆಗೆ ರಜೆ ಘೋಷಿಸಲಾಯಿತು.

ಕಾವೇರಿ ನದಿ ಅಪಾಯದಮಟ್ಟ ಮೀರಿ ಹರಿಯುತ್ತಿದೆ. ಪುಷ್ಪಗಿರಿ ವ್ಯಾಪ್ತಿಯಲ್ಲಿ ನಿರಂತರವಾಗಿ ಮಳೆ ಸುರಿಯುತ್ತಿರುವುದರಿಂದ ಹರದೂರು ಹೊಳೆಯೂ ಭೋರ್ಗರೆಯುತ್ತಿದೆ. ಜೋಡುಪಾಲದಿಂದ ಮಡಿಕೇರಿಯವರೆಗೆ ರಸ್ತೆಯಲ್ಲಿ ಅಲ್ಲಲ್ಲಿ ಬಿರುಕುಗಳು ಕಾಣಿಸಿಕೊಂಡಿವೆ.

ಮಡಿಕೇರಿ ಹೊರವಲಯದ ಚಾಮುಂಡೇಶ್ವರಿ ನಗರದಲ್ಲಿ ಸಣ್ಣ ಪ್ರಮಾಣದಲ್ಲಿ ಮಣ್ಣು ಕುಸಿದಿದೆ. ಜಹಂಗೀರ್ ಪೈಸಾರಿಯಲ್ಲಿ ಅಲ್ಪ ಪ್ರಮಾಣದಲ್ಲಿ ಮಣ್ಣು ಕುಸಿದಿದೆ. ಶನಿವಾರಸಂತೆ-ಚಂಗಡಳ್ಳಿ ರಸ್ತೆಯಲ್ಲಿ ಬೃಹತ್ ಗಾತ್ರದ ಮರಗಳು ಬಿದ್ದಿವೆ.

ಮಡಿಕೇರಿ–ಮಂಗಳೂರು ರಸ್ತೆಯಲ್ಲಿ ತಾಳತ್ತಮನೆ ಸಮೀಪ ಮಣ್ಣು ಕುಸಿದು ಕೆಲಕಾಲ ಸಂಚಾರಕ್ಕೆ ತಡೆಯಾಗಿತ್ತು. ಮಣ್ಣನ್ನು ತೆರವುಗೊಳಿಸಲಾಗಿದೆ.

ಜಿಲ್ಲೆಯಲ್ಲಿ ಒಂದೇ ದಿನ 128 ವಿದ್ಯುತ್ ಕಂಬಗಳು ಮುರಿದಿದ್ದರೆ, 5 ವಿದ್ಯುತ್ ಪರಿವರ್ತಕಗಳು ಹಾನಿಗೀಡಾಗಿವೆ.

ಇದರಿಂದ ಹಲವೆಡೆ ವಿದ್ಯುತ್ ವ್ಯತ್ಯಯ ಉಂಟಾಗಿದೆ. ಲಕ್ಷ್ಮಣತೀರ್ಥ ನದಿಯ ನೀರಿನ ಮಟ್ಟ ಏರಿಕೆಯಾಗಿದೆ. ಹಾರಂಗಿ ನದಿಯಿಂದ 12,700 ಕ್ಯುಸೆಕ್‌ನಷ್ಟು ನೀರನ್ನು ಹೊರಬಿಡಲಾಗುತ್ತಿದೆ. ಕಬಿನಿ ಜಲಾಶಯಕ್ಕೆ 12,475 ಕ್ಯುಸೆಕ್ ಒಳಹರಿವಿತ್ತು.

ಅನಮೋಡದಲ್ಲಿ ಗುಡ್ಡ ಕುಸಿತ: ವಾಹನ ಸಂಚಾರ ಸ್ಥಗಿತ: ಉತ್ತರ ಕನ್ನಡದ ಜೊಯಿಡಾ ತಾಲ್ಲೂಕಿನ ಅನಮೋಡದ ಸಮೀಪ ಗೋವಾ ಭಾಗದ ರಾಷ್ಟ್ರೀಯ ಹೆದ್ದಾರಿ ‘4 ಎ’ ಮೇಲೆ ಗುಡ್ಡ ಕುಸಿದಿದೆ.

ಜೊಯಿಡಾ ತಾಲ್ಲೂಕಿನ ರಾಮನಗರ ಮೂಲಕ ಗೋವಾ ರಾಜ್ಯಕ್ಕೆ ಬೆಳಗಾವಿ, ಬಾಗಲಕೋಟೆ, ವಿಜಯಪುರ, ಹುಬ್ಬಳ್ಳಿ–ಧಾರವಾಡದಿಂದ ಸಂಪರ್ಕ ಕಲ್ಪಿಸುವ ಪ್ರಮುಖ ಹೆದ್ದಾರಿ ಇದಾಗಿದೆ. ಸ್ಥಳಕ್ಕೆ ಗೋವಾದ ಅಗ್ನಿಶಾಮಕ ದಳದವರು, ಪೊಲೀಸರು ಭೇಟಿ ನೀಡಿದ್ದಾರೆ. ಜೆ.ಸಿ.ಬಿ ಮೂಲಕ ಮಣ್ಣನ್ನು ತೆರವುಗೊಳಿಸುವ ಕಾರ್ಯದಲ್ಲಿ ತೊಡಗಿದ್ದಾರೆ.

ಹೊನ್ನಾವರದ ಹಳದಿಪುರ ಬಗಾಣೆ ಕ್ರಾಸ್‌ನಲ್ಲಿ ಸೋಮವಾರ, ಗಂಗಾಧರ ರಾಮಕೃಷ್ಣ ಶೇಟ್ ಎಂಬುವವರ ಮನೆಯ ಮೇಲೆ ದೊಡ್ಡ ಆಲದ ಮರ ಬಿದ್ದಿದೆ. ಆ ಮನೆಯಲ್ಲಿ ಬಾಡಿಗೆಗೆ ವಾಸವಿದ್ದ ಏಳು ಮಂದಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಹಲವು ವಿದ್ಯುತ್ ಕಂಬಗಳು ಮುರಿದಿವೆ.

ಗಂಗಾವಳಿ ನದಿಯಲ್ಲಿ ನೀರಿನ ಹರಿವು ಅಧಿಕವಾಗಿದ್ದು ರಾಮನಗುಳಿ–ಡೊಂಗ್ರಿ ಸೇತುವೆಯ ಬಹುಕೋಟಿ ವೆಚ್ಚದ ಕಾಮಗಾರಿ ಪುನಃ ಸ್ಥಗಿತಗೊಂಡಿದೆ.

ಈ ಸೇತುವೆಯ ನಿರ್ಮಾಣ ಸ್ಥಳದ ಸಮೀಪ ಮೇಲ್ಭಾಗದಲ್ಲಿ ಮಣ್ಣು ಮತ್ತು ಸಿಮೆಂಟ್ ಪೈಪ್ ಜೋಡಿಸಿ ತಾತ್ಕಾಲಿಕವಾಗಿ ನಿರ್ಮಿಸಿದ್ದ ಸೇತುವೆ ಕೊಚ್ಚಿ ಹೋಗಿದೆ. 10ಕ್ಕೂ ಹೆಚ್ಚು ಹಳ್ಳಿಗಳ ಸಂಪರ್ಕ ಕಡಿತಗೊಂಡಿದೆ.

ಶಿರಸಿಯಲ್ಲಿ 10.5 ಸೆ.ಮೀಗಳಷ್ಟು ಮಳೆಯಾಗಿದ್ದು ಹೊನ್ನಾವರದಲ್ಲಿ 7.5 ಸೆ.ಮೀ ಹಾಗೂ ಭಟ್ಕಳದಲ್ಲಿ 6.5ಸೆ.ಮೀ.ಮಳೆಯಾಗಿದೆ.

ಕರಾವಳಿ, ಚಿಕ್ಕಮಗಳೂರಿನಲ್ಲಿ ಮತ್ತೆ ಮಳೆ ಅಬ್ಬರ

ಮಂಗಳೂರು: ಕರಾವಳಿ ಜಿಲ್ಲೆಗಳು ಮತ್ತು ಚಿಕ್ಕಮಗಳೂರಿನ ಹಲವೆಡೆ ಸೋಮವಾರ ಧಾರಾಕಾರ ಮಳೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿ ಭಾರಿ ಮಳೆ ಕಾರಣ ಶಾಲೆಗಳಿಗೆ ರಜೆ ಘೋಷಿಸಲಾಗಿತ್ತು.

ಜಿಲ್ಲೆಯಲ್ಲಿ ಮೂರು ಮನೆಗಳಿಗೆ ಹಾನಿ ಉಂಟಾಗಿದೆ. 12 ಮನೆಗಳು ಭಾಗಶಃ ಹಾನಿಗೊಳಗಾಗಿವೆ. ಮೆಸ್ಕಾಂ ವ್ಯಾಪ್ತಿಯಲ್ಲಿ 71 ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. ಒಂದು ವಿದ್ಯುತ್ ಪರಿವರ್ತಕ ಹಾನಿಗೊಳಗಾಗಿದೆ.

ಮಂಗಳೂರಿನಲ್ಲೂ ಬಿಟ್ಟು ಬಿಟ್ಟು ಮಳೆಯಾಗಿದೆ. ಅರಬ್ಬೀ ಸಮುದ್ರದಲ್ಲಿ ಕಾಣಿಸಿಕೊಂಡಿರುವ ಕಡಲ್ಕೊರೆತದ ಅಬ್ಬರ ಕಡಿಮೆ ಆಗಿಲ್ಲ.

ಸ್ನಾನಘಟ್ಟ ಜಲಾವೃತ: ಕುಮಾರಧಾರಾ ನದಿಯಲ್ಲಿ ನೀರಿನ ಮಟ್ಟ ಹೆಚ್ಚಾಗಿ, ಕುಕ್ಕೆ ಸುಬ್ರಹ್ಮಣ್ಯದ ಕುಮಾರಧಾರಾ ಸ್ನಾನಘಟ್ಟ ಸಂಪೂರ್ಣವಾಗಿ ಹಾಗೂ ಸಮೀಪದಲ್ಲಿರುವ ದೇವರಕಟ್ಟೆ ಭಾಗಶಃ ಮುಳುಗಡೆಯಾಗಿದೆ.

ಅಪಾಯ ಲೆಕ್ಕಿಸದೇ ಸೋಮವಾರ ಕೆಲವು ಭಕ್ತರು ಇಲ್ಲಿ ತೀರ್ಥಸ್ನಾನ ಮಾಡುತ್ತಿದ್ದರು. ಮುಂಜಾಗ್ರತಾ ಕ್ರಮವಾಗಿ ಇಲ್ಲಿ ದಿನದ 24 ಗಂಟೆಯೂ ಕಾರ್ಯ ನಿರ್ವಹಿಸುವಂತೆ ‘ರಕ್ಷಕ ದಳ’ವನ್ನು ನಿಯೋಜಿಸಲಾಗಿದೆ. ತೀರ್ಥಸ್ನಾನಕ್ಕೆ ನೆರವಾಗುವಂತೆ ನದಿ ತೀರದಲ್ಲಿ ಹಗ್ಗ ಅಳವಡಿಸಲಾಗಿದೆ.

ಉಡುಪಿ ಜಿಲ್ಲೆಯ ಹೆಬ್ರಿ ತಾಲ್ಲೂಕಿನ ವರಂಗ, ಸೀತಾನದಿ, ಬಚ್ಚಪ್ಪು, ಶಿವಪುರ, ಜರವತ್ತು ನದಿಗಳು ತುಂಬಿ ಹರಿಯುತ್ತಿದೆ.

ಹೆಬ್ರಿಯಲ್ಲಿ 24.3 ಸೆಂ.ಮೀ ಮಳೆ ಬಿದ್ದಿದೆ.

ಭಾರಿ ಮಳೆ ಮುನ್ಸೂಚನೆ: ಇದೇ 5, 6 ಹಾಗೂ 9ರಂದು ಕರಾವಳಿಯಾದ್ಯಂತ ಭಾರಿ ಮಳೆಯಾಗಲಿದೆ. ಕಡಲಿನಲ್ಲಿ ಅಲೆಗಳ ಅಬ್ಬರ ಹಾಗೂ ಗಾಳಿಯ ವೇಗ ಹೆಚ್ಚಿರಲಿದ್ದು, ಮೀನುಗಾರರು ಸಮುದ್ರಕ್ಕಿಳಿಯಬಾರದು ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	111.64	25,905	1,284
ಹಾರಂಗಿ	2,859	2,855.24	4,360	12,700
ಕಬಿನಿ	2,284	2,269.60	12,475	1,000
ಹೇಮಾವತಿ	2,922	2,909.49	5,934	250
ಲಿಂಗನಮಕ್ಕಿ	1,819	1,759.05	17,007	1398.33
ಸೂಪಾ (ಮೀ)	564	518.60	1,257	135
ಮಾಣಿ	595	571.88	4,866	-
ತುಂಗಭದ್ರಾ	1,633	1,614.90	11,370	298
ಮಲಪ್ರಭಾ	2,079.50	2,053.30	194	194
ಘಟಪ್ರಭಾ	2,175	2,091.00	2,380	5,848
ಭದ್ರಾ	186	155.7	13,405	130
ಆಲಮಟ್ಟಿ (ಮೀ)	519.60	513.22	2,082	451
ನಾರಾಯಣಪುರ (ಮೀ)	492.25	491.01	246.21	84.21

*ನೆಲಮಟ್ಟದಿಂದ

ಗ್ರಾಮಗಳಿಗೆ ಅಧಿಕಾರಿಗಳು ಭೇಟಿ, ಪರಿಶೀಲನೆ

ವಾಂತಿ ಭೇದಿಗೆ ಕಾಲುವೆಯ ಕಲುಷಿತ ನೀರು ಕಾರಣ

• ಬಸವರಾಜ ಭೋಗಾವತಿ

ಮಾನ್ವಿ (ರಾಯಚೂರು ಜಿಲ್ಲೆ): ‘ತಾಲ್ಲೂಕಿನ ಗೋರ್ಕಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಲ್ಕಂದಿನ್ನಿ ಹಾಗೂ ಜೂಕೂರು ಗ್ರಾಮಗಳಲ್ಲಿ 40ಕ್ಕೂ ಹೆಚ್ಚು ಜನರಿಗೆ ಕಾಣಿಸಿದ ವಾಂತಿ ಭೇದಿ ಮತ್ತು ಮಹಿಳೆಯೊಬ್ಬರ ಸಾವಿಗೆ ರಾಜೋಳ್ಳಿಬಂಡಾ ತಿರುವು ನಾಲಾ ಯೋಜನೆಯ (ಆರ್‌ಡಿಎಸ್) ಕಾಲುವೆಯ ಕಲುಷಿತ ನೀರೇ ಕಾರಣ’ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಆಂಧ್ರಪ್ರದೇಶ ಗಡಿಭಾಗದ ತುಂಗಭದ್ರಾ ನದಿಪಾತ್ರದಲ್ಲಿರುವ ಈ ಗ್ರಾಮಗಳಿಗೆ ಹೊಂದಿಕೊಂಡಿರುವ ಆರ್‌ಡಿಎಸ್ ಕಾಲುವೆಯ ನೀರನ್ನು ಗ್ರಾಮಗಳಿಗೆ ಪೂರೈಸಲಾಗುತ್ತದೆ. ಗ್ರಾಮಪಂಚಾಯಿತಿ ಪೈಪ್‌ಲೈನ್ ವ್ಯವಸ್ಥೆ ಮಾಡಿದೆ. ಆದರೆ, ನೀರು ಶುದ್ಧೀಕರಣ ವ್ಯವಸ್ಥೆ ಇಲ್ಲ. ವಲ್ಕಂದಿನ್ನಿ ಗ್ರಾಮದಲ್ಲಿ 15 ವರ್ಷಗಳ ಹಿಂದೆಯೇ ಎರಡು ಓವರ್ ಹೆಡ್‌ಟ್ಯಾಂಕ್ ನಿರ್ಮಿಸಲಾಗಿದ್ದರೂ ಈವರೆಗೆ ಬಳಕೆಯಾಗಿಲ್ಲ!

‘ತುಂಗ ಭದ್ರಾ ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಿದ್ದಾಗ, ಕಾಲುವೆಗೆ ನೀರು ಪೂರೈಸಲಾಗುತ್ತದೆ. ಆದರೆ, ಈಚೆಗೆ ಕಾಲುವೆಗೆ ನೀರು ಹರಿಯದ ಕಾರಣ ಕಲುಷಿತ ನೀರು ಸಂಗ್ರಹವಾಗಿತ್ತು. ಅದೇ ನೀರು ಪೂರೈಕೆಯಾಗಿದೆ. ನೀರು ಪೂರೈಸುವ ಮುನ್ನ ಅದರ ಶುದ್ಧತೆಯನ್ನು ಯಾರೂ ಸಹ ಪರಿಶೀಲಿಸಿಲ್ಲ’ ಎಂದು ಗ್ರಾಮ ಪಂಚಾಯಿತಿ ಸದಸ್ಯ ರಾಜಶೇಖರಸ್ವಾಮಿ ವಲ್ಕಂದಿನ್ನಿ ‘ಪ್ರಜಾವಾಣಿ’ಗೆ ತಿಳಿಸಿದರು. ‘ವಲ್ಕಂದಿನ್ನಿ ಮತ್ತು ಜೂಕೂರು ಗ್ರಾಮಗಳಲ್ಲಿನ ಶುದ್ಧ ಕುಡಿಯುವ ನೀರಿನ ಘಟಕಗಳಿಗೆ ವಿದ್ಯುತ್ ಪೂರೈಸಿ, ಸಮರ್ಪಕವಾಗಿ ನಿರ್ವಹಿಸಬೇಕು. ಶುದ್ಧವಾದ ನೀರನ್ನು ಕುಡಿಯುವಂತೆ ಜನರಲ್ಲಿ ಅರಿವು ಮೂಡಿಸಬೇಕು. ಆಗ ವಾಂತಿ–ಭೇದಿಯಂತಹ ಪ್ರಕರಣ ತಡೆಗಟ್ಟಬಹುದು’ ಎಂದು ಗ್ರಾಮ ಪಂಚಾಯಿತಿ ಸದಸ್ಯ ಕೆ.ಗುರುಸ್ವಾಮಿ ಕಂಬಳತ್ತಿ ಹೇಳಿದರು.



ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ವಲ್ಕಂದಿನ್ನಿ ಗ್ರಾಮಕ್ಕೆ ಕುಡಿಯುವ ನೀರು ಪೂರೈಸಲಾಗುವ ಆರ್‌ಡಿಎಸ್ ಕಾಲುವೆ

ಜನರು ಅಸ್ವಸ್ಥಗೊಂಡ ಬಗ್ಗೆ ಸಮಗ್ರ ಮಾಹಿತಿ ಪಡೆದು ಕ್ರಮ ಜರುಗಿಸಲಾಗುವುದು. ಕಾಲುವೆ ನೀರು ಪೂರೈಕೆ ನಿಲ್ಲಿಸಲಾಗಿದೆ. ಶುದ್ಧ ನೀರು ಕುಡಿಯಲು ಗ್ರಾಮಸ್ಥರಿಗೆ ತಿಳಿಸಲಾಗಿದೆ

ಚಂದ್ರಕಾಂತ ಎಲ್.ಡಿ.
ತಹಶೀಲ್ದಾರ್, ಮಾನ್ವಿ

‘ಕುದಿಸಿ ಆರಿಸಿದ ನೀರನ್ನೇ ಕುಡಿಯಿರಿ’

‘ಅಸ್ವಸ್ಥಗೊಂಡ 40 ಜನರಲ್ಲಿ ಕೆಲವರು ಚೇತರಿಸಿಕೊಂಡಿದ್ದಾರೆ. ವಲ್ಕಂದಿನ್ನಿ ಗ್ರಾಮದ 11 ಮತ್ತು ಜೂಕೂರು ಗ್ರಾಮದ 4 ಜನರಿಗೆ ರಾಯಚೂರಿನ ರಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರೆದಿದೆ. ಶುದ್ಧ ಕುಡಿಯುವ ನೀರಿನ ಘಟಕದ ನೀರು ಮತ್ತು ಕುದಿಸಿ ಆರಿಸಿದ ನೀರನ್ನೇ ಕುಡಿಯಲು ಹೇಳಲಾಗಿದೆ’ ಎಂದು ಮಾನ್ವಿ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಚಂದ್ರಶೇಖರಯ್ಯ ಹೇಳಿದರು.

‘ನಿರಂತರ ವಿದ್ಯುತ್ ಸಮಸ್ಯೆ’

‘ವಲ್ಕಂದಿನ್ನಿ ಮತ್ತು ಜೂಕೂರು ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳಿವೆ. ಆದರೆ, ವಿದ್ಯುತ್ ಸಮಸ್ಯೆ ಕಾರಣ ಅವುಗಳ ನಿರ್ವಹಣೆ ಸಮರ್ಪಕವಾಗಿ ಆಗುತ್ತಿಲ್ಲ. ಅಲ್ಲಿನ ನೀರು ಕುಡಿದರೆ ಕಾಲು ಬೇನೆ, ಕೀಲು ನೋವು ಮತ್ತಿತರ ಕಾಯಿಲೆ ಬರುತ್ತವೆ ಎಂಬ ನಂಬಿಕೆ ಗ್ರಾಮಸ್ಥರಲ್ಲಿದೆ. ಹೀಗಾಗಿ ಬಹುತೇಕ ಜನರು ಕಾಲುವೆಯಿಂದ ಪೂರೈಕೆಯಾಗುವ ನೀರನ್ನೇ ಕುಡಿಯುತ್ತಾರೆ’ ಎಂದು ಗ್ರಾಮಸ್ಥರು ತಿಳಿಸಿದರು.

‘ಪತ್ರ ಬರೆಸಿಕೊಂಡ ಅಧಿಕಾರಿಗಳು’

ರಾಯಚೂರು: ‘ಮಾನ್ವಿ ತಾಲ್ಲೂಕಿನ ಜೂಕೂರ ಗ್ರಾಮದಲ್ಲಿ ಕಲುಷಿತ ನೀರು ಕುಡಿದು ಅಸ್ವಸ್ಥಗೊಂಡು ಆಸ್ಪತ್ರೆಯಲ್ಲಿ ಭಾನುವಾರ ಮೃತಪಟ್ಟ ಲಕ್ಷ್ಮಿ ವೀರೇಶ (26) ಸಾವಿಗೆ ಕಲುಷಿತ ನೀರು ಕಾರಣವಲ್ಲ’ ಎಂದು ಸಂಬಂಧಿಕರಿಂದ ಅಧಿಕಾರಿಗಳು ಸೋಮವಾರ ಪತ್ರವೊಂದನ್ನು ಬರೆಸಿಕೊಂಡಿರುವ ಬಗ್ಗೆ ಆರೋಪ ಕೇಳಿ ಬಂದಿದೆ.



ಸುಭಾಷಿತ

ಧ್ಯಾನವು ಅನಂತ ಆನಂದಕ್ಕೆ ಇರುವ ಹೆಬ್ಬಾಗಿಲು.
-ಸ್ವಾಮಿ ವಿವೇಕಾನಂದ

ವಿದ್ಯುತ್ ದರ ಏರಿಕೆ ಕೈಬಿಡಿ ಸೋರಿಕೆ ತಡೆಗೆ ಆದ್ಯತೆ ನೀಡಿ

ಇಂಧನ, ಆಹಾರೋತ್ಪನ್ನಗಳ ಬೆಲೆ ಗಗನಮುಖಿಯಾಗಿ ಜೀವನ ದುಬಾರಿಯಾಗಿದೆ. ಇದರ ಬೆನ್ನಲ್ಲೇ, ರಾಜ್ಯದಲ್ಲಿ ವಿದ್ಯುತ್ ದರ ಒಂದೇ ವರ್ಷದ ಅವಧಿಯಲ್ಲಿ ಎರಡು ಬಾರಿ ಹೆಚ್ಚಳವಾಗಿ ಜನಸಾಮಾನ್ಯರ ಬವಣೆ ಹೆಚ್ಚಿಸಿದೆ. ಈರುಳ್ಳಿ ಬೆಲೆ ತುಸು ಏರಿದರೂ, ಪೆಟ್ರೋಲ್ ಬೆಲೆಯಲ್ಲಿ ಕೊಂಚ ಹೆಚ್ಚಳವಾದರೂ ವಿರೋಧ ಪಕ್ಷದಲ್ಲಿದ್ದಾಗ ಬೀದಿಗಿಳಿದು ಉಗ್ರ ಹೋರಾಟ ನಡೆಸುತ್ತಿದ್ದ ಬಿಜೆಪಿ ನಾಯಕರ ವರಸೆ ಈಗ ಬದಲಾಗಿದೆ. ಆಡಳಿತ ಪಕ್ಷವಾಗಿ ಬಿಜೆಪಿ ಬೆಲೆ ಏರಿಕೆಯನ್ನು ಒಂದು ಸಮಸ್ಯೆಯನ್ನಾಗಿ ಗಂಭೀರವಾಗಿ ಪರಿಗಣಿಸದಿರುವುದು ಎಂಬುದು ಅವರ ಮಾತುಗಳಿಂದಲೇ ವ್ಯಕ್ತವಾಗುತ್ತಿದೆ. ಕೋವಿಡ್ ತಂದಿಟ್ಟ ಆರ್ಥಿಕ ಸಂಕಷ್ಟಗಳು ಈಗಲೂ ನಿವಾರಣೆ ಆಗಿಲ್ಲ. ಹಣದುಬ್ಬರ ಜಾಸ್ತಿಯಾಗಿರುವ ಈ ದಿನಗಳಲ್ಲಿ ವೆಚ್ಚ ಹೊಂದಾಣಿಕೆಯ ನೆಪ ಮುಂದಿಟ್ಟು ದರ ಹೆಚ್ಚಿಸಲಾಗಿದೆ. 100 ಯೂನಿಟ್‌ಗೂ ಹೆಚ್ಚು ವಿದ್ಯುತ್ ಬಳಸುವವರು ಹೆಚ್ಚುವರಿಯಾಗಿ ₹ 19ರಿಂದ ₹ 31ರವರೆಗೆ ಪಾವತಿಸಬೇಕಾಗುತ್ತದೆ. ಏಪ್ರಿಲ್‌ನಲ್ಲಿ ಪ್ರತೀ ಯೂನಿಟ್‌ಗೆ 35 ಪೈಸೆ ಏರಿಸಲಾಗಿತ್ತು. ಈಗ ಪುನಃ ದರ ಏರಿಕೆಯ ಬಿಸಿ ತಟ್ಟಿದೆ. 'ವಿದ್ಯುತ್ ಸರಬರಾಜು ಕಂಪನಿಗಳು (ಎಸ್ಕಾಂಗಳು) ತಮ್ಮ ಮೇಲೆ ಬೀಳುತ್ತಿದ್ದ ಹೊರೆಯನ್ನು ಗ್ರಾಹಕರಿಗೆ ವರ್ಗಾಯಿಸಲು



ಅವಕಾಶ ಕೋರಿದ್ದವು. ಅದಕ್ಕೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ಅನುಮತಿ ನೀಡಿದೆ. ಈ ದರ ಏರಿಕೆಯ ವಿಚಾರದಲ್ಲಿ ಸರ್ಕಾರದ ಪಾತ್ರ ಏನೂ ಇಲ್ಲ' ಎಂದು ಇಂಧನ ಸಚಿವ ವಿ. ಸುನಿಲ್ ಕುಮಾರ್ ಸಮಜಾಯಿಷಿ ನೀಡಿದ್ದಾರೆ. ದರ ಏರಿಕೆಗೆ ಬೇಡಿಕೆ ಬಂದದ್ದು ಎಲ್ಲಿಂದ, ಒಪ್ಪಿಗೆ ನೀಡಿದ್ದು ಯಾರು ಎಂಬ ಪ್ರಶ್ನೆ, ಕಾರಣಗಳು ಏನೇ ಇರಲಿ, ಹೊರೆ ಬೀಳುವುದು ಜನರಿಗೆ; ವರಮಾನ ಕೊನೆಗೆ ಸೇರುವುದು ಸರ್ಕಾರದ ಭಾಗವೇ ಆಗಿರುವ ಸಂಸ್ಥೆಗಳ ಖಜಾನೆಗೆ. ಆದಕಾರಣ ತಾಂತ್ರಿಕ ಅಂಶಗಳನ್ನು ಮುಂದಿಟ್ಟು ಜವಾಬ್ದಾರಿಯಿಂದ ನುಣುಚಿಕೊಳ್ಳಲು ಆಗದು.

ಉತ್ಪಾದನಾ ವೆಚ್ಚದ ಮೇಲೆ ಹದ್ದಿನ ಕಣ್ಣಿಟ್ಟು ಅದನ್ನು ಕಡಿಮೆ ಮಾಡಬೇಕಾದ, ಸೋರಿಕೆಯನ್ನು ತಡೆಗಟ್ಟಲು ಆಡಳಿತಾಂಗವನ್ನು ಚುರುಕುಗೊಳಿಸಬೇಕಾದ ಸರ್ಕಾರದ ಅದಕ್ಷತೆಯ ಪರಿಣಾಮವೇ ಈ ದರ ಏರಿಕೆ. ಕಲ್ಲಿದ್ದಲು ದರ ಏರಿಕೆಯಿಂದಾಗಿ ವಿದ್ಯುತ್ ಉತ್ಪಾದನಾ ವೆಚ್ಚ ಹೆಚ್ಚಿತು; ಅದನ್ನು ಸರಿದೂಗಿಸಲು ಗ್ರಾಹಕರ ಮೇಲೆ ಹೊರೆಹಾಕುವ ಅನಿವಾರ್ಯ ಸೃಷ್ಟಿಯಾಗಿದೆ ಎಂಬ ಸಮಜಾಯಿಷಿಯನ್ನು ಕೆಇಆರ್‌ಸಿ ಕೊಟ್ಟಿದೆ. ಕಲ್ಲಿದ್ದಲು ಕೊರತೆ, ಕೊರತೆ ಕಾರಣಕ್ಕೆ ಕಲ್ಲಿದ್ದಲು ಬೆಲೆ ಏರಿಕೆಯಾಗುವ ಸಂಭವವನ್ನು ಅರಿತು ಮುನ್ನೆಚ್ಚರಿಕೆ ತೆಗೆದುಕೊಳ್ಳದೇ ಇದ್ದುದು ಸರ್ಕಾರ ಮತ್ತು ಕೆಪಿಸಿಎಲ್‌ನ ಲೋಪ. ಕೇಂದ್ರ ಮತ್ತು ರಾಜ್ಯದಲ್ಲಿ ಒಂದೇ ಪಕ್ಷದ ಸರ್ಕಾರ ಇದ್ದರೆ ಎಲ್ಲವೂ ಅನುಕೂಲ, ಡಬಲ್ ಎಂಜಿನ್ ಸರ್ಕಾರದಿಂದ ರಾಜ್ಯಕ್ಕೆ ಆಗುವ ಪ್ರಯೋಜನ ಹೆಚ್ಚು ಎಂದು ಬಿಜೆಪಿ ಪಕ್ಷದ ಮುಖಂಡರು 2018ರ ಚುನಾವಣೆ ವೇಳೆ ಪದೇ ಪದೇ ಹೇಳಿದ್ದರು. 2009ರಲ್ಲಿ ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಕರ್ನಾಟಕಕ್ಕೆ ನೀಡುತ್ತಿದ್ದ ಕಲ್ಲಿದ್ದಲು ನಿಕ್ಷೇಪವನ್ನು ಭ್ರಷ್ಟಾಚಾರದ ಹಿನ್ನೆಲೆಯಲ್ಲಿ ರದ್ದು ಮಾಡಲಾಗಿತ್ತು. ರಾಜ್ಯಕ್ಕೆ ಮೀಸಲಾದ ಕಲ್ಲಿದ್ದಲು ಗಣಿ ದಶಕ ಕಳೆದರೂ ಸಿಗಲಿಲ್ಲ. ಕಲ್ಲಿದ್ದಲು ಪೂರೈಕೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ತನ್ನ ಹೊಣೆಗಾರಿಕೆಯನ್ನು ಸಮರ್ಪಕವಾಗಿ ನಿಭಾಯಿಸಿದ್ದಿದ್ದರೆ ದರ ಏರಿಕೆಯ ಭಾರವನ್ನು ಜನರ ಮೇಲೆ ಹೇರುವ ಅವಶ್ಯಕತೆ ಇರುತ್ತಿರಲಿಲ್ಲ. ವಿದ್ಯುತ್ ದರ ಏರಿಸುವ ಸಂದರ್ಭದಲ್ಲಿ ವಿದ್ಯುತ್ ಸೋರಿಕೆಯಿಂದ ಆಗುತ್ತಿರುವ ನಷ್ಟದ ಬಗ್ಗೆ ಕೆಇಆರ್‌ಸಿ ಮಾತನಾಡುತ್ತಿಲ್ಲ; ಸರ್ಕಾರಕ್ಕೆ ಅಥವಾ ಎಸ್ಕಾಂಗಳಿಗೆ ಸಲಹೆಯನ್ನೂ ನೀಡುತ್ತಿಲ್ಲ. ಆದರೆ ಸೋರಿಕೆ ತಡೆಗಟ್ಟುವಿಕೆಗೆ ನೀಡಿರುವ ಸಲಹೆಗಳು ಅನುಷ್ಠಾನವಾಗದೆಯೇ ಉಳಿದಿವೆ. ಸೋರಿಕೆ ತಡೆಗಟ್ಟದಿದ್ದರೆ ಬೆಲೆ ಏರಿಕೆಗೆ ಅವಕಾಶವನ್ನೇ ಕೊಡುವುದಿಲ್ಲ ಎಂಬ ಎಚ್ಚರಿಕೆಯನ್ನು ಕೆಇಆರ್‌ಸಿ ನೀಡಿದಂತೆ ಕಾಣುವುದಿಲ್ಲ. ಎಸ್ಕಾಂಗಳಿಗೆ ₹11 ಸಾವಿರ ಕೋಟಿ ಬಾಕಿ ಇದೆ ಎಂದು ಸರ್ಕಾರ ಹೇಳಿದೆ. ಇದರಲ್ಲಿ ಬಹುಪಾಲು ಮೊತ್ತವನ್ನು ಗ್ರಾಮೀಣಾಭಿವೃದ್ಧಿ ಮತ್ತು ನಗರಾಭಿವೃದ್ಧಿ ಇಲಾಖೆ ವ್ಯಾಪ್ತಿಯ ಸ್ಥಳೀಯ ಸಂಸ್ಥೆಗಳು ಪಾವತಿಸಬೇಕಿದೆ. ಸ್ಥಳೀಯ ಸಂಸ್ಥೆಗಳ ಆರ್ಥಿಕ ಶಕ್ತಿಯನ್ನು ಬಲಪಡಿಸಿ, ನೀರಿನ ಕರವನ್ನು ಸರಿಯಾಗಿ ವಸೂಲು ಮಾಡಿದ್ದರೆ ಎಸ್ಕಾಂಗಳಿಗೆ ಬಿಲ್ ಬಾಕಿ ಉಳಿಸಿಕೊಳ್ಳುವ ಅಗತ್ಯ ಇರುತ್ತಿರಲಿಲ್ಲ. ದರ ಏರಿಕೆಯನ್ನು ಯಾವುದೋ ನೆಪದಡಿ ಸಮರ್ಥನೆ ಮಾಡಿಕೊಳ್ಳುವ ಬದಲು ಆಧುನಿಕ ತಂತ್ರಜ್ಞಾನ ಬಳಸಿ ವೆಚ್ಚ–ಸೋರಿಕೆ ಕಡಿಮೆ ಮಾಡುವ ಪರ್ಯಾಯ ಮಾರ್ಗಗಳನ್ನು ಶೋಧಿಸುವತ್ತ ಮತ್ತು ಜನರಿಗೆ ಕಡಿಮೆ ದರದಲ್ಲಿ ಸೌಲಭ್ಯ ಒದಗಿಸುವತ್ತ ಸರ್ಕಾರ ಗಂಭೀರವಾಗಿ ಯೋಚಿಸಲು ಇದು ಸಕಾಲ.

ದರ ಏರಿಕೆಯನ್ನು ಸಮರ್ಥಿಸಿಕೊಳ್ಳುವ ಬದಲು ಆಧುನಿಕ ತಂತ್ರಜ್ಞಾನ ಬಳಸಿ ವೆಚ್ಚ–ಸೋರಿಕೆ ಕಡಿಮೆ ಮಾಡುವ ಪರ್ಯಾಯ ಮಾರ್ಗಗಳನ್ನು ಶೋಧಿಸುವತ್ತ ಸರ್ಕಾರ ಗಮನಹರಿಸಬೇಕು

ದಿನದ ಟ್ವೀಟ್


ಯಾಕಿಂಥ ದುಃಸ್ಥಿತಿ?



ದೇಶದ ಜಿಎಸ್‌ಟಿ ಸಂಗ್ರಹದಲ್ಲಿ ಬೆಂಗಳೂರು ಎರಡನೇ ಸ್ಥಾನದಲ್ಲಿದೆ. ಅಷ್ಟಾದರೂ ಈ ನಗರವು ಉತ್ತಮವಾದ ರಸ್ತೆಗಳಿಗಾಗಿ, ಕಸಮುಕ್ತ ಬಡಾವಣೆಗಳಿಗಾಗಿ, ಸೂಕ್ತ ಸಿ.ಸಿ ಟಿ.ವಿ ಕ್ಯಾಮೆರಾ ಕಣ್ಗಾವಲು ವ್ಯವಸ್ಥೆಗಾಗಿ ಮತ್ತು ತನ್ನ ನಾಗರಿಕರಿಗೆ ಗುಣಮಟ್ಟದ ಜೀವನವನ್ನು ಕಲ್ಪಿಸಲು ಬೇಕಾದ ಉತ್ತಮ ಮೂಲಸೌಕರ್ಯಕ್ಕಾಗಿ ಇನ್ನೂ ಹೋರಾಡುತ್ತಲೇ ಇದೆ! ಎಲ್ಲಾ ಹಣ ಎಲ್ಲಿಗೆ ಹೋಗುತ್ತದೆ?

ಶರತ್ ಖಾದ್ರಿ, ಚಲನಚಿತ್ರ ನಿರ್ದೇಶಕ

ಕಿಡಿನುಡಿ



ಬಿಜೆಪಿ ಬೆಳವಣಿಗೆಯಿಂದ ಪರಿವಾರ ವಾದಿಗಳು, ಜಾತಿವಾದಿಗಳು ಕಂಗೆಟ್ಟಿದ್ದಾರೆ. ಅವರೆಲ್ಲರೂ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಕಾಲಕಾಲಕ್ಕೆ ಕೆಲವು ಮುಖವಾಡ ಹಾಕುತ್ತಾರೆ. ಜಾತ್ಯತೀತತೆಯೂ ಅವರ ಜಾತಿ ರಾಜಕಾರಣವನ್ನು ಮುಚ್ಚಿಕೊಳ್ಳುವ ಮುಖವಾಡ.

ಸಿ.ಟಿ.ರವಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

25 ವರ್ಷಗಳ ಹಿಂದೆ

ಶನಿವಾರ, 5-7-1997

- **ಗುಜ್ರಾಲ್ ಸಂಧಾನ ವಿಫಲ, ಲಾಲೂ ಹೊಸ ಪಕ್ಷ ಖಚಿತ**

ನವದೆಹಲಿ, ಜುಲೈ 4 (ಪಿಟಿಐ)– ಜನತಾ ದಳ ವಿಭಜನೆಯಾಗುವುದನ್ನು ತಡೆಯಲು ಪ್ರಧಾನಿ ಐ.ಕೆ.ಗುಜ್ರಾಲ್ ಅವರು ಇಂದು ರಾತ್ರಿ ನಡೆಸಿದ ಕಡೇ ಗಳಿಗೆ ಯತ್ನ ವಿಫಲವಾಗಿದೆ. ರಾಜಧಾನಿಯಲ್ಲಿ ನಾಳೆ ತಮ್ಮ ಬೆಂಬಲಿಗರ ಸಮಾವೇಶ ನಡೆಸಿಯೇ ತೀರುವುದಾಗಿ ಲಾಲೂ ಪ್ರಸಾದ್ ಯಾದವ್ ಅವರು ಪ್ರಕಟಿಸಿ ಹೊಸ ಪಕ್ಷ ರಚಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ. ಇಂದರಿಂದಾಗಿ ಕೇಂದ್ರದ ಸಂಯುಕ್ತ ರಂಗ ಸರ್ಕಾರದ ಪ್ರಮುಖ ಘಟಕ ಪಕ್ಷವಾದ ಜನತಾದಳ ಇಬ್ಭಾಗವಾಗುವುದು ಖಚಿತವಾಗಿದೆ.

- **ಮಹದೇವ ಗಿರಣಿ ಮುಚ್ಚಲು ನಿರ್ಧಾರ**

ಬೆಂಗಳೂರು, ಜುಲೈ 4– ಸುಮಾರು 7 ಕೋಟಿ ರೂಪಾಯಿಗಳಿಗೂ ಮೀರಿ ನಷ್ಟ ಅನುಭವಿಸಿರುವ ಹುಬ್ಬಳ್ಳಿಯ ಮಹದೇವ ಜವಳಿ ಗಿರಣಿಯನ್ನು ಮುಚ್ಚಲು ರಾಜ್ಯ ಸಚಿವ ಸಂಪುಟ ಇಂದು ಇಲ್ಲಿ ತೀರ್ಮಾನಿಸಿತು.

50 ವರ್ಷಗಳ ಹಿಂದೆ

ಬುಧವಾರ, 5-7-1972

- **ಪರೀಕ್ಷಾ ಕ್ರಮವನ್ನೇ ತೆಗೆದುಹಾಕಲು ಮೇಲ್ಮನೆಯಲ್ಲಿ ಒತ್ತಾಯ**

ಬೆಂಗಳೂರು, ಜುಲೈ 4– ವಿದ್ಯಾರ್ಥಿಗಳನ್ನು 'ಬಲಿ ತೆಗೆದುಕೊಂಡು' ಅವರ ಪಾಲಕರನ್ನು ಕಳವಳಕ್ಕೀಡು ಮಾಡುವ ಪರೀಕ್ಷಾ ಕ್ರಮವನ್ನೇ ತೆಗೆದುಹಾಕಬೇಕು ಎಂದು ಮೇಲ್ಮನೆಯಲ್ಲಿ ಸದಸ್ಯರೊಬ್ಬರು ಪ್ರತಿಪಾದಿಸಿದರು.

ಮುಂಗಡ ಪತ್ರದ ಮೇಲಿನ ತಮ್ಮ ಭಾಷಣವನ್ನು ಮುಂದುವರಿಸಿದ ಸಂಸ್ಥಾ ಕಾಂಗ್ರೆಸಿನ ಶ್ರೀ ಕೆ.ಜತ್ತಪ್ಪ ರೈ, ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆಂದರೆ, ಬೋಧನೆ ಸರಿಯಾಗಿರಲಿಲ್ಲ ಎಂದು ಅರ್ಥ-ವಾಗುತ್ತದೆ ಎಂದು ವಿಶ್ಲೇಷಿಸಿದರು. ಪರೀಕ್ಷಾ ಫಲಿತಾಂಶ ಪ್ರಕಟವಾಗುವ ದಿನ ಪಾಲಕರು ಅತ್ಯಂತ ಕಳವಳದಿಂದ ಇರುತ್ತಾರೆ ಎಂದರು.

- **ಆಗಸ್ಟ್ 15ರಿಂದ ಜಿಲ್ಲಾ ಮಟ್ಟದಲ್ಲಿ ಆಡಳಿತ ಭಾಷೆ ಆಗಿ ಕನ್ನಡ ಬಳಕೆಗೆ ಆಜ್ಞೆ**

ಬೆಂಗಳೂರು, ಜುಲೈ 4– ರಾಜ್ಯ ಸರ್ಕಾರವು ರಾಜ್ಯದ ಜಿಲ್ಲಾ ಮಟ್ಟದ ಸರ್ಕಾರಿ ಕಚೇರಿಗಳಲ್ಲಿ ಈ ವರ್ಷ ಆಗಸ್ಟ್ 15ರಿಂದ ಕನ್ನಡ ಭಾಷೆಯನ್ನೇ ಅಧಿಕೃತ ಭಾಷೆಯಾಗಿ ಉಪಯೋಗಿಸಬೇಕೆಂದು ಮೈಸೂರು ಅಧಿಕೃತ ಭಾಷಾ ಕಾಯಿದೆಯನ್ವಯ ಆದೇಶ ನೀಡಿದೆ.

ಆದರೆ ಕೇಂದ್ರ ಸರ್ಕಾರಿ ಕಚೇರಿಗಳಿಗೆ, ಅಕೌಂಟೆಂಟ್ ಜನರಲ್‌ರಿಗೆ, ರಾಜ್ಯದ ಲೆಕ್ಕ ಪತ್ರಗಳ ಇಲಾಖೆ ಹಾಗೂ ಸಂಬಳ ಇತ್ಯಾದಿ ಬಿಲ್ಲುಗಳಿಗೆ ಸಂಬಂಧಿಸಿ ಖಜಾನೆಗಳಿಗೆ ಒಯ್ಯುವ ಪತ್ರ ವ್ಯವಹಾರ ಇಂಗ್ಲಿಷ್ ಭಾಷೆಯಲ್ಲೇ ಮುಂದುವರಿಯುವುದು. ಅಲ್ಲದೆ; ಪರಿಷ್ಕರಣೆ ಆಗಬಹುದಾದ ಯಾವುದೇ ಕಾನೂನಿಗೆ ಸಂಬಂಧಿಸಿದ ಆಜ್ಞೆಗಳಿಗೆ ಹಾಗೂ ಗ್ರಾಮ ಪಂಚಾಯಿತಿ ನ್ಯಾಯಾಲಯಗಳ ಹೊರತು ಇತರ ನ್ಯಾಯಾಲಯಗಳಿಗೆ ಮಾಡುವ ಪತ್ರ ವ್ಯವಹಾರಗಳು ಇಂಗ್ಲಿಷ್ ಭಾಷೆಯಲ್ಲೇ ಮುಂದುವರಿಯುವುವು.

- **ಎಚ್.ಎಲ್.ಎನ್ ನಿಧನ**

ಬೆಂಗಳೂರು ಜುಲೈ 4– ಚಲನಚಿತ್ರ ಮತ್ತು ಕನ್ನಡ ರಂಗಭೂಮಿಯ ಹಿರಿಯ ನಟ-ನಿರ್ದೇಶಕ ಶ್ರೀ ಎಚ್.ಎಲ್.ಎನ್.ಸಿಂಹ ಅವರು ನಿನ್ನೆ ರಾತ್ರಿ 2.20ರಲ್ಲಿ ನಿಧನರಾದರು.

ಸಿಂಹ ಅವರಿಗೆ 68 ವರ್ಷ ವಯಸ್ಸಾಗಿತ್ತು. ಅವರಿಗೆ ಪತ್ನಿ ಮತ್ತು ಒಬ್ಬ ಮಗ ಇದ್ದಾರೆ. ಕೆಲವು ದಿನಗಳಿಂದ ಅವರು ಅನಾರೋಗ್ಯದಿಂದ ಇದ್ದರು.

ಬಿಜೆಪಿ – ಕಾಂಗ್ರೆಸ್ ನಡುವೆ ರಾಜ್ಯದಲ್ಲಿ ನೇರ ಹಣಾಹಣಿ ಇರಲಿದೆ ಎಂಬುದು ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ

ಚುನಾವಣೆ: ಬಿಜೆಪಿಯ ಸವಾಲುಗಳು ಏನು?



ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ಬಿಜೆಪಿಯು ದಕ್ಷಿಣ ಭಾರತದಲ್ಲಿ ತನ್ನ ನೆಲೆ ವಿಸ್ತರಿಸಿಕೊಳ್ಳುವ ಯತ್ನಕ್ಕೆ ಮುಂದಾಗಿರುವುದು ಹೈದರಾಬಾದ್‌ನಲ್ಲಿ ಭಾನುವಾರ ಮುಕ್ತಾಯವಾದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಸ್ಪಷ್ಟವಾಗಿದೆ. 'ಡಬಲ್ ಎಂಜಿನ್' ಸರ್ಕಾರದ ಪ್ರಯೋಜನಗಳ ಬಗ್ಗೆ ಪಕ್ಷದ ನಾಯಕತ್ವವು ಮತ್ತೆ ಮತ್ತೆ ಮಾತನಾಡಿದೆ. 2014ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯು ಉತ್ತರ, ಪಶ್ಚಿಮ ಮತ್ತು ಮಧ್ಯ ಭಾರತದಲ್ಲಿ ಗಟ್ಟಿ ನೆಲೆಯನ್ನು ಕಂಡುಕೊಂಡಿತು. 2019ರ ಲೋಕಸಭಾ ಚುನಾವಣೆಯಲ್ಲಿ ಪಕ್ಷವು ಪೂರ್ವ ಹಾಗೂ ಪೂರ್ವಾಂಚಲ ರಾಜ್ಯಗಳಲ್ಲಿ ನೆಲೆ ಗಟ್ಟಿಗೊಳಿಸಿಕೊಳ್ಳುವಲ್ಲಿ ಯಶಸ್ವಿಯಾಯಿತು. ದಕ್ಷಿಣದ ರಾಜ್ಯಗಳತ್ತ ಗಮನಹರಿಸುವುದು ಪಕ್ಷದ ಈಗಿನ ಕಾರ್ಯತಂತ್ರ ಎಂಬುದು ಸ್ಪಷ್ಟ. ವಿಂಧ್ಯ ಪರ್ವತದ ದಕ್ಷಿಣ ಭಾಗದಲ್ಲಿರುವ ಕರ್ನಾಟಕ, ತೆಲಂಗಾಣದಲ್ಲಿ 2024ರ ಲೋಕಸಭಾ ಚುನಾವಣೆಗೂ ಮೊದಲು ವಿಧಾನಸಭಾ ಚುನಾವಣೆ ನಡೆಯಲಿದೆ.

ಒಂದು ರಾಜ್ಯದಲ್ಲಿ ಅಧಿಕಾರ ಉಳಿಸಿಕೊಳ್ಳುವ ಭರವಸೆ ಬಿಜೆಪಿಯಲ್ಲಿದೆ. ಇನ್ನೊಂದು ರಾಜ್ಯದಲ್ಲಿ ಅಧಿಕಾರವನ್ನು ಕಸಿದುಕೊಳ್ಳಲು ಪಕ್ಷವು ಎಲ್ಲ ಯತ್ನ ನಡೆಸಿದೆ. ಕರ್ನಾಟಕದಲ್ಲಿನ ಚುನಾವಣಾ ಸಮರಕ್ಕೆ ಒಂದು ವರ್ಷವೂ ಉಳಿದಿಲ್ಲ. ಕರ್ನಾಟಕದಲ್ಲಿ ಅಧಿಕಾರ ಉಳಿಸಿಕೊಳ್ಳಬಲ್ಲೆ ಎಂಬುದನ್ನು ತೋರಿಸಿಕೊಡುವುದು ಬಿಜೆಪಿಯ ಪಾಲಿಗೆ ಮಹತ್ವದ್ದಾಗಲಿದೆ.

ದಕ್ಷಿಣ ಭಾರತದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿದ್ದು ಕರ್ನಾಟಕದಲ್ಲಿ ಮಾತ್ರ. ವಿಧಾನಸಭಾ ಚುನಾವಣೆಗಳಲ್ಲಿ ಪಕ್ಷವು ಸರಳ ಬಹುಮತವನ್ನು ಪಡೆದೇ ಇರಲಿಲ್ಲ ಎಂಬುದು ನಿಜವಾದರೂ, ಇಲ್ಲಿ ಅಧಿಕಾರ ಹಿಡಿಯಲು ಪಕ್ಷಕ್ಕೆ ಸಾಧ್ಯವಾಗಿದೆ. 2004ರ ಚುನಾವಣೆಯ ನಂತರ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದರೂ, ಕಾಂಗ್ರೆಸ್ ಮತ್ತು ಜೆಡಿಎಸ್ ಮೈತ್ರಿ ಸರ್ಕಾರ ರಚಿಸಿದ ಪರಿಣಾಮವಾಗಿ ಬಿಜೆಪಿ ಅಧಿಕಾರ ಹಿಡಿಯಲು ಆಗಲಿಲ್ಲ. 2008ರಲ್ಲಿ ಪಕ್ಷವು ಪಕ್ಷೇತರರ ನೆರವು ಪಡೆದು ಸರ್ಕಾರ ರಚಿಸಿತು. 2018ರಲ್ಲಿ ಸರಳ ಬಹುಮತದ ಹತ್ತಿರ ಬಂದರೂ, ಸದನದಲ್ಲಿ ವಿಶ್ವಾಸಮತ ಸಾಬೀತು ಮಾಡಲು ಆಗಲಿಲ್ಲ. ಆಗ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಸರ್ಕಾರ ರಚನೆಯಾಯಿತು. ಕಾಂಗ್ರೆಸ್ ಹಾಗೂ ಜೆಡಿಎಸ್‌ನ ಕೆಲವು ಶಾಸಕರು ರಾಜೀನಾಮೆ ನೀಡಿದ ಕಾರಣ ಮೈತ್ರಿ ಸರ್ಕಾರ ಉರುಳಿತು. ನಂತರದಲ್ಲಿ ಬಿಜೆಪಿಯು ಸರ್ಕಾರ ರಚಿಸಿತು.

ಹೀಗಾಗಿ, 2023ರಲ್ಲಿ ಸ್ವಂತ ಬಲದ ಮೇಲೆ ಅಧಿಕಾರ ಹಿಡಿಯುವುದು ಬಿಜೆಪಿಯ ಗುರಿ ಆಗಿರಲಿದೆ. 2023ರ ಚುನಾವಣೆಯು ಬಹಳ ತುರುಸಿನಿಂದ ಕೂಡಿರುವ ಸಾಧ್ಯತೆ ಹೆಚ್ಚಿದೆ. ಇದಕ್ಕೆ ಹಲವು ಕಾರಣಗಳು ಇವೆ. 1985ರ ನಂತರದಲ್ಲಿ ಕರ್ನಾಟಕದ ಮತದಾರರು ಆಡಳಿತದಲ್ಲಿ ಇರುವ ಪಕ್ಷಕ್ಕೆ ಸ್ಪಷ್ಟ ಬಹುಮತವನ್ನು ಮತ್ತೊಮ್ಮೆ ಯಾವತ್ತೂ ನೀಡಿಲ್ಲ. ಬಿಜೆಪಿಯು ಇದನ್ನು ಬದಲಾಯಿಸ ಲಿದೆಯೇ? ಬಿಜೆಪಿಯು ಕರ್ನಾಟಕದಲ್ಲಿ ಬೆಳವಣಿಗೆ ಕಾಣುವಲ್ಲಿ ಪಕ್ಷದ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ಅವರ ಪಾತ್ರ ಪ್ರಮುಖ. ಯಡಿಯೂರಪ್ಪ ಅವರು 2013ರಲ್ಲಿ ಪಕ್ಷ ತೊರೆದಿದ್ದಾಗ, ಅಧಿಕಾರ ಉಳಿಸಿಕೊಳ್ಳಲು ಬಿಜೆಪಿಗೆ ಸಾಧ್ಯವಾಗಿರಲಿಲ್ಲ. ಪಕ್ಷವು 2023ರಲ್ಲಿ ಯಡಿಯೂರಪ್ಪ ಅವರ ಮುಂದಾಳತ್ವ ಇಲ್ಲದೆ ಚುನಾವಣೆ ಎದುರಿಸಲಿದೆ. ಯಡಿಯೂರಪ್ಪ ಅವರನ್ನು ಹಿರಿಯ ಮಾರ್ಗದರ್ಶಕ ಎಂದು ಕಾಣಲಾಗುತ್ತಿದೆಯಾದರೂ, ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಪಕ್ಷದಲ್ಲಿ ಅವರ ಸ್ಥಾನ ಏನು ಎಂಬುದು ಅಸ್ಪಷ್ಟ. ಅವರಿಗೆ ಯಾವ ಹೊಣೆ ನೀಡಲಾಗುತ್ತದೆ ಎಂಬುದನ್ನು ಆಧರಿಸಿ, ಅವರು ಪ್ರಚಾರದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆಯೇ ಎಂಬುದು ತೀರ್ಮಾನವಾಗಲಿದೆ. ಯಡಿಯೂರಪ್ಪ ಅವರಿಂದ ಬಸವರಾಜ ಬೊಮ್ಮಾಯಿ ಅವರಿಗೆ ಅಧಿಕಾರ ಹಸ್ತಾಂತರವು ಸುಲಲಿತವಾಗಿ ಆಗಿದೆಯಾದರೂ, ಒಂದಿಷ್ಟು ಅನಿಶ್ಚಿತತೆಗಳು ಉಳಿದುಕೊಂಡಿವೆ. ಮೂರು ವರ್ಷಗಳಲ್ಲಿ ಬಿಜೆಪಿ ಮಾಡಿದ ಕೆಲಸಗಳು ನಿಕಷಕ್ಕೆ ಒಳಗಾಗುತ್ತವೆ. ಅಭಿವೃದ್ಧಿ ಯೋಜನೆಗಳನ್ನು ಸರ್ಕಾರ ಅನುಷ್ಠಾನಕ್ಕೆ ತಂದ ಬಗೆಯನ್ನು ಜನ ಹೇಗೆ ಸ್ವೀಕರಿಸಿದ್ದಾರೆ ಎಂಬುದು ಮಹತ್ವದ್ದಾಗಲಿದೆ.

ಡಬಲ್ ಎಂಜಿನ್ ಸರ್ಕಾರ ಇದ್ದರೆ ಎಷ್ಟು ಅನುಕೂಲ ಇದೆ ಎಂಬುದನ್ನು ಪ್ರಧಾನಿ, ಗೃಹ ಸಚಿವರು ಹಾಗೂ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷರು ಹೈದರಾಬಾದ್‌ನ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಮತ್ತೆ ಮತ್ತೆ ವಿವರಿಸಿದರು. ಉತ್ತರಾಖಂಡ ಹಾಗೂ ಗೋವಾದ ಚುನಾವಣಾ ಯಶಸ್ಸು ಈ ಮಾತಿನ ಮಹತ್ವವನ್ನು ಹೇಳುತ್ತದೆ. ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರಗಳ ಸಾಧನೆಗೆ ಹೆಚ್ಚಿನ ಸ್ಪಂದನ ಇಲ್ಲದಿದ್ದರೂ, ಪಕ್ಷದ ಕೇಂದ್ರ ನಾಯಕತ್ವ ಹಾಗೂ ಕೇಂದ್ರ ಸರ್ಕಾರದ ಕುರಿತು ಬಲವಾದ ಒಲವು ಬಿಜೆಪಿಗೆ ಅಧಿಕಾರಕ್ಕೆ ಮರಳಲು ಸಹಾಯ ಮಾಡಿತು ಎಂದು ಲೋಕನೀತಿ–ಸಿಎಸ್‌ಡಿಎಸ್ ಗೋವಾ ಮತ್ತು ಉತ್ತರಾಖಂಡದಲ್ಲಿ ನಡೆಸಿದ ಚುನಾವಣೋತ್ತರ ಸಮೀಕ್ಷೆಯು ಹೇಳಿದೆ.

ಕರ್ನಾಟಕದಲ್ಲಿಯೂ ಇಂಥದ್ದೇ ಕಾರ್ಯತಂತ್ರವನ್ನು ಬಳಸಿಕೊಳ್ಳಲಾಗುತ್ತದೆಯೇ? 2013ರಲ್ಲಿ ಲೋಕನೀತಿ–ಸಿಎಸ್‌ಡಿಎಸ್ ನಡೆಸಿದ ಸಮೀಕ್ಷೆಯನ್ನು ನೋಡುವುದಾದರೆ, ಮೊದಲ ಹಾಗೂ ಎರಡನೆಯ ಸುತ್ತಿನ ಮತದಾನದ ಸಂದರ್ಭಗಳಲ್ಲಿ ಸ್ಪಷ್ಟ ವ್ಯತ್ಯಾಸ ಕಂಡುಬಂದಿತ್ತು. ಎರಡನೆಯ ಹಂತದ ಮತದಾನದ ಭಾಗವಾಗಿದ್ದ ಕ್ಷೇತ್ರಗಳಲ್ಲಿ ಬಿಜೆಪಿ ಉತ್ತಮ ಸಾಧನೆ ತೋರಿತ್ತು. ಆ ವರ್ಷ, ಪ್ರಧಾನಿಯವರು ಹೆಚ್ಚು ಪ್ರಚಾರ ನಡೆಸಿದ್ದು ಮೊದಲ ಹಂತದ ಮತದಾನ ಆದ ನಂತರದಲ್ಲಿ. ಮೊದಲ ಹಂತದ ಮತದಾನ ನಡೆದ ನಂತರದಲ್ಲಿ ಬಿಜೆಪಿಯ ಚುನಾವಣಾ ಕಾರ್ಯತಂತ್ರ ನಿಪುಣರು, ಪ್ರಧಾನಿಯವರ ರ‍್ಯಾಲಿಗಳ ಸಂಖ್ಯೆಯನ್ನು ಜಾಸ್ತಿ ಮಾಡಿದರು.

ಪಕ್ಷದ ರಾಜ್ಯ ಘಟಕದಲ್ಲಿನ ಹಲವು ಗುಂಪುಗಳನ್ನು ಒಗ್ಗೂಡಿಸುವುದು ಬಿಜೆಪಿಯು ಗಮನ ನೀಡಬೇಕಿರುವ ಇನ್ನೊಂದು ಅಂಶ. ಪಕ್ಷ ನಿಷ್ಠರು ಹಾಗೂ ಪಕ್ಷಕ್ಕೆ ಹೊಸದಾಗಿ ಬಂದವರ ನಡುವೆ ಕಂದಕ ಇರುವಂತೆ ಕಾಣಿಸುತ್ತಿದೆ. ರಾಜ್ಯ ಸಚಿವ ಸಂಪುಟದ ಪುನರ್ ರಚನೆಯು ಆಗುತ್ತದೆ ಎಂದು ಬಹಳ ಕಾಲದಿಂದ ಹೇಳಲಾಗುತ್ತಿದೆ. ಆದರೆ ಅದು ಇನ್ನಷ್ಟೇ ಕಾರ್ಯರೂಪಕ್ಕೆ ಬರಬೇಕಿದೆ. ಸಚಿವರ ಪೈಕಿ ಹಲವರ ಸಾಧನೆ ಬಗ್ಗೆ ಪ್ರಶ್ನೆಗಳು ಇವೆ. ಕಾಂಗ್ರೆಸ್ ಹಾಗೂ ಜೆಡಿಎಸ್‌ನಿಂದ ಹೊರಬಂದು, ಬಿಜೆಪಿ ಸೇರಿ ಮಂತ್ರಿಯಾದವರ ಕಾರ್ಯಕ್ಷಮತೆಯನ್ನು ಚುನಾವಣೆ ಹತ್ತಿರವಾದಂತೆಲ್ಲ ಬಹಳ ಸೂಕ್ಷ್ಮವಾಗಿ ಅವಲೋಕಿಸಲಾಗುತ್ತದೆ. ಈ ರೀತಿ ಬಿಜೆಪಿಗೆ ಬಂದ ಕೆಲವರು, ಬಿಜೆಪಿಯ ಹಿರಿಯ ನಾಯಕರ ಕ್ಷೇತ್ರದಿಂದ ಗೆದ್ದುಬಂದರು. ಆ ಕ್ಷೇತ್ರಗಳನ್ನು ಆ ಹಿರಿಯ ನಾಯಕರು ತಮ್ಮದು ಎಂದು ಈಗಲೂ ಹೇಳಿಕೊಳ್ಳುವುದಿದೆ. ಟಿಕೆಟ್ ನೀಡುವ ಸಂದರ್ಭದಲ್ಲಿ ಬೇರೆ ಬೇರೆ ಹಿತಾಸಕ್ತಿಗಳ ನಡುವೆ ಸಮತೋಲನ ಸಾಧಿಸುವುದು ಬಿಜೆಪಿ ಪಾಲಿಗೆ ಪ್ರಮುಖವಾಗಲಿದೆ.

ಬಸವರಾಜ ಬೊಮ್ಮಾಯಿ ಅವರೇ ತನ್ನ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಸ್ಪಷ್ಟವಾಗಿ ಘೋಷಿಸಿ, ಬಿಜೆಪಿ ಚುನಾವಣಾ ಕಣಕ್ಕೆ ಇಳಿಯಲಿದೆಯೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಬಿಜೆಪಿಯಲ್ಲಿನ ಕೆಲವು ಗುಂಪುಗಳು 'ಸಾಮೂಹಿಕ ನಾಯಕತ್ವ'ದ ಮಾತು ಆಡುತ್ತಿವೆ. ಇನ್ನು ಕೆಲವು ಗುಂಪುಗಳು, ಬೊಮ್ಮಾಯಿ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿಸಿ ಚುನಾವಣೆ ಎದುರಿಸುವ ಮಾತುಗಳನ್ನು ಆಡುತ್ತಿವೆ. ಇನ್ನೂ ಕೆಲವು ಗುಂಪುಗಳು, ಕೇಂದ್ರದ ನಾಯಕತ್ವದ ಅಡಿಯಲ್ಲಿ ಚುನಾವಣೆ ಎದುರಿಸಲಾಗುತ್ತದೆ ಎಂದು ಹೇಳುತ್ತಿವೆ.

ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ರಾಜ್ಯದಲ್ಲಿ ನೇರ ಹಣಾಹಣಿ ಇರಲಿದೆ ಎಂಬುದು ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ. ಜೆಡಿಎಸ್ ಪಕ್ಷವು ಮೂರನೆಯ, ಸಣ್ಣ ಪಕ್ಷವಾಗಿ ಇರಲಿದೆ. ರಾಜ್ಯದಲ್ಲಿ ಆಮ್ ಆದ್ಮಿ ಪಕ್ಷವು ಗಮನಾರ್ಹ ರಾಜಕೀಯ ಅಸ್ತಿತ್ವವನ್ನು ಇನ್ನೂ ತೋರಿಸಿಲ್ಲ. ರಾಜ್ಯದಲ್ಲಿ ಮುಂದಿನ ಕೆಲವು ತಿಂಗಳುಗಳು ಬಹಳ ಕುತೂಹಲಕಾರಿ ಆಗಿರಲಿವೆ.



ಚುರುಮುರಿ



ನಿನ್ನಿಚ್ಛೆಯಂತಿರುವೆ...

• ನಾರಾಯಣ ರಾಯಚೂರ್

'ರೀ...ಏನ್ರೀ? ರೀ... ಅಂದ್ರೆ ಸರಿ ಅಂತೀರಲ್ಲ?'

'ನಾ ಹೇಳಿದ್ದು ಪಕ್ಕಕ್ಕೆ 'ಸರಿ' ಅಂತ ಅಲ್ವೆ, ಸಮ್ಮತಿಸೂಚಕ 'ಸರಿ'!

'ಹಾಗ್ಬನ್ನಿ ದಾರೀಗೆ, ಅದಿರ್ಲಿ ಈ ಬಾರಿ ಆ್ಯನಿವರ್ಸರಿಗೆ ಏನು ಗಿಫ್ಟ್?'

'ಓಹ್ ಅದಾ! ಮರೆತುಬಿಟ್ಟಿದ್ದೆ ಅನ್ನಲ್ಲ... ಇದು ಸಿಲ್ವರ್ ಜ್ಯುಬಿಲಿ ಆ್ಯನಿವರ್ಸರಿ ಅಲ್ಲವೇ? ಬೆಳ್ಳೀದು ಏನಾರೂ...'

'ಕಾಲುಂಗುರ, ಗೆಜ್ಜೆ ಅಂತ ಇನ್ನೂ ಕಾಲಲ್ಲೇ ಕೂಡಬೇಡಿ, ಕಾಲ ಸಾಕಷ್ಟು ಮುಂದುವರಿದಿದೆ. ಸ್ವಲ್ಪ ಕತ್ತಿನ ಕಡೆನೂ ಗಮನಹರಿಸಿ'.

'ನಾನಿನ್ನೂ ಕಾಲು, ಶೂಸು, ಲೇಸು ಇಲ್ಲೇ ಇದೀನಿ. ನೀನು ನೆಕ್ಲೆಸಿಗೆ ಹೋಗಿದೀಯ'.

'ಮತ್ತಿನ್ನೇನ್ರಿ? ಈ ಕಾಲದ ಇರುವೆಗಳೂ ಚಿನ್ನದ ಸರದ ಮೋಹಕ್ಕೆ ಬಿದ್ದಿವೆಯಂತೆ! ನೋಡಲಿಲ್ವೇ ಸಾಮಾಜಿಕ ಜಾಲತಾಣದಲ್ಲಿ!'

'ಜಾಲತಾಣನಾ... 'ಜಾಲಿ' ತಾಣಗಳೂ ಬೇಕಾದಷ್ಟಿರ್ತಾವೆ ಬಿಡು'.

'ಇಲ್ಲಾರಿ ನೋಡಿ ಬೇಕಾದ್ರೆ, ಹಿರಿಯ ಅಧಿಕಾರಿಯೊಬ್ಬರು 'ಇರುವೆಗಳು ಚಿನ್ನದ ಸರವನ್ನು ಹೇಗೆ ಕಚ್ಚಿ, ಎಳೆದುಕೊಂಡು ಹೋಗ್ತಾಯಿವೆ ನೋಡಿ' ಅಂತ ಹಾಕಿದ್ದಾರಂತೆ'.

'ಸಕ್ಕರೆ-ಸರ ಆಗಿದ್ರೆ ಸರಿ ಅನ್ನಬಹುದಿತ್ತು, ಈ ಇರುವೆಗಳಿಗೇಕೆ ಚಿನ್ನದ ಮೋಹ ಅಂತ?!'

'ಅವು ಹೆಣ್ಣು ಇರುವೆಗಳು ಅಂತ ಹಾಕಿದಾರಾ ಚಿನ್ನಾ?!'

'ಚಿನ್ನಾ ಅಂತೆ?- ಈ ಗಿಲೀಟಿನ ಮಾತು ಬೇಡ, ಅವ್ರು ಜಂಡರ್ ಏನೂ ಹಾಕಿಲ್ಲ'.

'ಅಲ್ಲ, ಕನ್ನಡಿ ಮೇಲೆ ಸೊಳ್ಳೆ ಬಂದು ಕುಳಿತು ತೊಂದ್ರೆ ಮಾಡ್ತಿತ್ತಂತೆ, ಅದು ಹೆಣ್ಣು ಸೊಳ್ಳೆನೇ ಇರಬೇಕು ಅಂತ ಜೋಕ್ ಓದಿದ್ದೆ'.

'ಚೀಪ್ ಜೋಕ್'.

'ಅಲ್ಲೂ ಇರುವೆ, ಇಲ್ಲೂ ಇರುವೆ ಅನ್ನೋ ಚಿತ್ರಗೀತೆನಾ ನಿಜ ಮಾಡೋಕೆ ಹಾಗೆ ಮಾಡಿರಬೇಕಷ್ಟೆ. ಈ ಚಿನ್ನಕ್ಕೆ ಟ್ವೆಂಟಿಟು- ಟ್ವೆಂಟಿ ಫೋರ್ ಕ್ಯಾರೆಟ್ ಅಂತಾರಲ್ಲ, ಚಿನ್ನದಲ್ಲೂ ಕ್ಯಾರೆಟ್ ಇರಬಹುದು ಅಂತ ಹೊಸ ಜನರೇಷನ್ ಇರುವೆಗಳು ಹುಡುಕುತ್ತಿದ್ದಿರಬಹುದು, ಬಹುಶಃ ಅವು ಮೊಲದ ಫ್ರೆಂಡ್ಸೂ ಇರಬಹುದು...'

'ನೀವು ಹೀಗೇ ಇರುವೆ, ಮೊಲ ಅಂತಾ ಇದ್ರೆ, ನಾನು ಹುಲಿ ಆಗಬೇಕಾಗತ್ತೆ ಅಷ್ಟೇ...'

'ಸರಿ, ಸರಿ... ಆ್ಯನಿವರ್ಸರಿ... ನೀನೇ ಸರಿ!'

ಸಂಗತ

ಮೆದುಳಿಗೆ ಇಳಿಯುತ್ತಿದೆಯೇ ಮಾಹಿತಿ?

ತಂತ್ರಜ್ಞಾನವು ಓದುಗರಿಗೆ ಅಗಾಧ ಪ್ರಮಾಣದಲ್ಲಿ ಮಾಹಿತಿಯನ್ನು ಒದಗಿಸುತ್ತಿರುವ ಸಂದರ್ಭದಲ್ಲೇ ಗುಣಾತ್ಮಕ ಸಂಶೋಧನೆಗಳ ಕೊರತೆಯನ್ನು ಎದುರಿಸುತ್ತಿದ್ದೇವೆ

• ರಾಜಕುಮಾರ ಕುಲಕರ್ಣಿ

ಇದು, ಎರಡು ದಶಕಗಳ ಹಿಂದಿನ ಮಾತು- ಪದವಿ ತರಗತಿಯ ವಿದ್ಯಾರ್ಥಿಗಳಿಗೆ ಆಕ್ಸ್‌ಫರ್ಡ್ ಇಂಗ್ಲಿಷ್ ನಿಘಂಟುವಿನ ಸಂಪಾದಕ ಜೇಮ್ಸ್ ಮರ್ರೆ ಕುರಿತು ನಾನು ಪಾಠ ಮಾಡಬೇಕಿತ್ತು. ಬೃಹತ್ ಗಾತ್ರದ ಆ ನಿಘಂಟುವಿನ ಯಾವ ಪುಟದಲ್ಲೂ ಅದರ ಸಂಪಾದಕ ಮರ್ರೆ ಕುರಿತು ಹೆಚ್ಚಿನ ಮಾಹಿತಿ ಇರಲಿಲ್ಲ. ಕೊನೆಗೆ ಎರಡು ದಿನಗಳ ಕಾಲ ವಿಶ್ವವಿದ್ಯಾಲಯದ ಗ್ರಂಥಾಲಯಕ್ಕೆ ಭೇಟಿ ನೀಡಿ, ಹಲವಾರು ಪರಾಮರ್ಶನ ಪುಸ್ತಕಗಳನ್ನು ಪರಿಶೀಲಿಸಿ ವಿವರಗಳನ್ನು ಹೆಕ್ಕಿ ತೆಗೆದಾಗ ಸಿಕ್ಕ ಮಾಹಿತಿ ಅರ್ಧಪುಟದಷ್ಟಿತ್ತು.

ಇಂಟರ್‌ನೆಟ್ ಹೆಚ್ಚು ಬಳಕೆಯಲ್ಲಿ ಇಲ್ಲದ ಕಾಲದಲ್ಲಿ ಮಾಹಿತಿಯ ಶೋಧ ಹೆಚ್ಚು ಸಮಯ ಮತ್ತು ಶ್ರಮವನ್ನು ತೆಗೆದುಕೊಳ್ಳುತ್ತಿತ್ತು. ಆದರೆ ಆ ಎರಡು ದಿನಗಳ ಅನೇಕ ಪುಸ್ತಕಗಳ ಓದುವಿಕೆಯು ಹಲವು ವಿಷಯಗಳನ್ನು ತಿಳಿದುಕೊಳ್ಳಲು ನೆರವಾಯಿತು. ಇಂದು ಪರಿಸ್ಥಿತಿ ಹಿಂದಿನಂತಿಲ್ಲ- ಇಂಟರ್‌ನೆಟ್ ಬಳಕೆ ವ್ಯಾಪಕವಾಗಿದ್ದು ಜಾಲತಾಣದಲ್ಲಿ ಜೇಮ್ಸ್ ಮರ್ರೆ ಹೆಸರು ಟೈಪಿಸಿದ ಕ್ಷಣಾರ್ಧದಲ್ಲಿ ಹತ್ತಾರು ಪುಟಗಳ ಮಾಹಿತಿಯು ಕಂಪ್ಯೂಟರ್ ಪರದೆ ಮೇಲೆ ತೆರೆದುಕೊಳ್ಳುತ್ತದೆ.

ಸಾಮಾನ್ಯ ಮಾಹಿತಿ ಮಾತ್ರವಲ್ಲದೆ ಇಂದು ಸಂಶೋಧನಾ ಲೇಖನಗಳು ಕೂಡ ಓದುಗರಿಗೆ ಉಚಿತವಾಗಿ ಲಭ್ಯವಾಗುತ್ತಿವೆ. ಸ್ಕಿ-ಹಬ್ ಹೆಸರಿನ ಜಾಲತಾಣವು ಸಂಶೋಧನಾ ಲೇಖನವೊಂದು ಪ್ರಕಟವಾದ ಕೆಲವೇ ದಿನಗಳಲ್ಲಿ ಓದುಗರ ಕೈಸೇರುವಂತೆ ಮಾಹಿತಿ ಪಡೆಯುವಿಕೆಯನ್ನು ಸರಳಗೊಳಿಸಿದೆ.

ಮಾಹಿತಿಯು ಸುಲಭವಾಗಿ ಮತ್ತು ಹೆಚ್ಚಿನ ಪರಿಶ್ರಮವಿಲ್ಲದೆ ದೊರೆಯುತ್ತಿರುವುದರಿಂದ ಇಂದು ಬರವಣಿಗೆಯಲ್ಲಿ 'ಕತ್ತರಿಸು ಮತ್ತು ಅಂಟಿಸು' (ಕಟ್ ಆ್ಯಂಡ್ ಪೇಸ್ಟ್) ಸಂಸ್ಕೃತಿಯು ಮುನ್ನೆಲೆಗೆ ಬಂದಿದೆ. ಹೆಚ್ಚಿನ ಬರಹಗಾರರು ತಮ್ಮ ಅಧ್ಯಯನದ ವಿಷಯದಲ್ಲಿ ಪ್ರಕಟವಾದ ವಿವಿಧ ಲೇಖನಗಳನ್ನು ಸಂಗ್ರಹಿಸಿ ಪ್ರತೀ ಲೇಖನದಿಂದ ಒಂದಿಷ್ಟು ಮಾಹಿತಿಯನ್ನು ಪಡೆದುಕೊಂಡು ಹೀಗೆ ಕಲೆಹಾಕಿದ ಮಾಹಿತಿಗೆ ಹೊಸ ಲೇಖನದ ಸ್ವರೂಪ ನೀಡುತ್ತಿದ್ದಾರೆ. ಬರಹಗಾರರ ಈ ನಕಲು ಸಂಸ್ಕೃತಿಗೆ ತಡೆ ಹಾಕಲು ಪ್ರಕಾಶಕರು ನಕಲು ಅಥವಾ ಕೃತಿಚೌರ್ಯವನ್ನು ಪತ್ತೆ ಹಚ್ಚಲು ತಂತ್ರಾಂಶಗಳನ್ನು ಉಪಯೋಗಿಸುತ್ತಿದ್ದಾರೆ. ಇಲ್ಲಿ ಜಾಣ ಬರಹಗಾರ ಮೂಲ ಲೇಖನದ ವಾಕ್ಯದಲ್ಲಿನ ಒಂದೆರಡು ಶಬ್ದಗಳನ್ನು ಕೈಬಿಡುವುದರಿಂದಲೂ ಅಥವಾ ಹೊಸ ಶಬ್ದಗಳ ಸೇರ್ಪಡೆಯಿಂದಲೂ ತಂತ್ರಾಂಶದ ನಕಲು ಶೋಧದ ಕಾರ್ಯವನ್ನೇ ಕಷ್ಟಸಾಧ್ಯಗೊಳಿಸುತ್ತಿದ್ದಾನೆ.

ಪ್ರಾಯೋಗಿಕ ತರಗತಿಗಳಿಗೆ ಹಾಜರಾದರೆ ಸಾಕು ಥಿಯರಿಗೆ ಸಂಬಂಧಿಸಿದ ಸಾಮಗ್ರಿಯನ್ನು ತರಗತಿಗೆ ಹಾಜರಾಗದೇ ತಂತ್ರಜ್ಞಾನದ ನೆರವಿನಿಂದ ಕಲೆಹಾಕಬಹುದು ಎನ್ನುವ ಆತ್ಮವಿಶ್ವಾಸವನ್ನು ವಿದ್ಯಾರ್ಥಿಗಳಲ್ಲಿ ನಾವು ಕಾಣುತ್ತಿದ್ದೇವೆ. ಇದರಿಂದ ಕಲಿಕೆ ಎನ್ನುವುದು ಶಿಕ್ಷಕ ಮತ್ತು ವಿದ್ಯಾರ್ಥಿ ಜೊತೆಯಾಗಿ ಪಾಲ್ಗೊಳ್ಳುವ ಚಟುವಟಿಕೆ ಎನ್ನುವ ಮಾತು ಸವಕಲಾಗಿ ಈಗ ಕಲಿಕೆಯು ಏಕಮುಖವಾದ ಕ್ರಿಯೆಯಾಗಿ ಬದಲಾಗುತ್ತಿದೆ.

ತಂತ್ರಜ್ಞಾನವು ಅಗಾಧ ಪ್ರಮಾಣದಲ್ಲಿ ಓದುಗರಿಗೆ ಮಾಹಿತಿಯು ಸುಲಭವಾಗಿ ದೊರೆಯಲು ನೆರವಾಗುತ್ತಿರುವ ಸಂದರ್ಭದಲ್ಲೇ ಗುಣಾತ್ಮಕ ಸಂಶೋಧನೆಗಳಾಗುತ್ತಿಲ್ಲ ಎಂದು ಚರ್ಚಿಸುವ ವಿಲಕ್ಷಣ ಸನ್ನಿವೇಶದಲ್ಲಿ ನಾವಿದ್ದೇವೆ. ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯುಜಿಸಿ), ರಾಷ್ಟ್ರೀಯ ವೈದ್ಯಕೀಯ ಆಯೋಗ, ಭಾರತೀಯ ತಾಂತ್ರಿಕ ಶಿಕ್ಷಣ ಮಂಡಳಿ ಈ ಉನ್ನತ ಶಿಕ್ಷಣ ಸಮಿತಿಗಳು ಶಿಕ್ಷಕರು ಉದ್ಯೋಗ ಬಡ್ತಿ ಮತ್ತು ವೇತನ ಬಡ್ತಿಗಾಗಿ ಸಂಶೋಧನಾ ಲೇಖನಗಳನ್ನು ಪ್ರಕಟಿಸುವುದನ್ನು ಕಡ್ಡಾಯಗೊಳಿಸಿವೆ. ಶಿಕ್ಷಕರ ಈ ಅಗತ್ಯವನ್ನು ಮನಗಂಡು ಅನೇಕ ಸಂಶೋಧನಾ ನಿಯತಕಾಲಿಕಗಳು ಲೇಖನಗಳನ್ನು ಪ್ರಕಟಿಸಲು ನಿರ್ದಿಷ್ಟ ಮೊತ್ತದ ಶುಲ್ಕವನ್ನು ನಿಗದಿಪಡಿಸಿವೆ. ಕೆಲವೊಮ್ಮೆ ತುರ್ತುಪರಿಸ್ಥಿತಿಗೆ ಅನುಗುಣವಾಗಿ ಶಿಕ್ಷಕರು ಹೆಚ್ಚುವರಿ ಶುಲ್ಕವನ್ನು ಪಾವತಿಸಿ, ತಮ್ಮ ಸಂಶೋಧನಾ ಲೇಖನಗಳು ಶೀಘ್ರ ಪ್ರಕಟವಾಗುವಂತೆ ನೋಡಿಕೊಳ್ಳುತ್ತಿದ್ದಾರೆ. ಈ ಬೆಳವಣಿಗೆಯನ್ನು ನಿಯಂತ್ರಿಸಲು ನಿರ್ದಿಷ್ಟ ನಿಯತಕಾಲಿಕಗಳಲ್ಲೇ ಲೇಖನಗಳನ್ನು ಪ್ರಕಟಿಸಬೇಕೆನ್ನುವ ನಿಯಮವನ್ನು ಯುಜಿಸಿ ಜಾರಿಗೆ ತಂದಿದೆ.



ವೇತನ ಬಡ್ತಿ, ಉದ್ಯೋಗ ಬಡ್ತಿ, ಹುದ್ದೆಯ ನೇಮಕಾತಿಯ ನಿಯಮಗಳ ಚೌಕಟ್ಟಿಗೆ ಒಳಪಡಲು ಇಲ್ಲಿ ಬಹುಪಾಲು ಸಂಶೋಧನೆಗಳು ನಡೆಯುತ್ತಿವೆಯೇ ವಿನಾ ರಾಷ್ಟ್ರದ ಪ್ರಗತಿಗೆ ನೆರವಾಗಬಲ್ಲ ನಿಜವಾದ ಅರ್ಥದ ಸಂಶೋಧನೆಗಳು ನಿರೀಕ್ಷಿತ ಪ್ರಮಾಣದಲ್ಲಿ ಆಗುತ್ತಿಲ್ಲ, ಸಂಶೋಧಕರ ವಲಯದಲ್ಲಿ ವ್ಯಾಪಕ ಚರ್ಚೆಗೆ ಒಳಗಾಗುತ್ತಿಲ್ಲ.

ಇನ್ನು ಸಾಹಿತ್ಯ ಕೃತಿಗಳನ್ನೂ ಡಿಜಿಟಲೀಕರಣಗೊಳಿಸಿ ಓದುಗರಿಗೆ ಒದಗಿಸುವ ಕಾರ್ಯಕ್ಕೆ ಸಾರ್ವಜನಿಕ ಗ್ರಂಥಾಲಯ ಸೇರಿದಂತೆ ಅನೇಕ ಸಂಸ್ಥೆಗಳಲ್ಲಿ ಚಾಲನೆ ದೊರೆತಿದೆ. ಏಕಕಾಲಕ್ಕೆ ಸಾಹಿತ್ಯ ಕೃತಿಯೊಂದು ಡಿಜಿಟಲೀಕರಣದ ರೂಪದಲ್ಲಿ ಹಲವು ಓದುಗರಿಗೆ ಲಭ್ಯವಾಗುವ ಈ ಸೌಲಭ್ಯವನ್ನು ಓದುಗರ ವಲಯ ಒಕ್ಕೊರಲಿನಿಂದ ಸ್ವಾಗತಿಸುತ್ತಿಲ್ಲ. ಈ ಮೂಲಕ ಓದುವ ಸಾಹಿತ್ಯ ಕೃತಿಯೊಂದು ಪುಸ್ತಕ ಓದಿದಂತೆ ಸರಾಗವಾಗಿ ಮನಸ್ಸಿಗೆ ಇಳಿಯಲಾರದು ಎನ್ನುವ ಸಮಸ್ಯೆ ಅನೇಕ ಓದುಗರದು.

ಈ ನಡುವೆ ಮಾಹಿತಿಯ ಸುಲಭ ಪ್ರಾಪ್ತಿ ಕೃತಿ ಚೌರ್ಯವನ್ನು ಸುಗಮವಾಗಿಸಿರುವುದರಿಂದ ಶಿಕ್ಷಕರು, ಸಂಶೋಧಕರು ಮತ್ತು ವಿದ್ಯಾರ್ಥಿಗಳ ಅರಿವಿನ ವ್ಯಾಪ್ತಿ ವಿಸ್ತರಿಸುತ್ತಿಲ್ಲ ಎನ್ನುವ ಆರೋಪ ಶೈಕ್ಷಣಿಕ ವಲಯದಲ್ಲಿ ಕೇಳಿಬರುತ್ತಿದೆ.

ವಾಚಕರ ವಾಣಿ

ಅಧಿಕಾರಿಶಾಹಿಯ ಬೇಜವಾಬ್ದಾರಿತನ

ನಾವು ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಿಸುತ್ತಿರುವ ಹೊತ್ತಿನಲ್ಲಿ, ಕಲುಷಿತ ನೀರು ಕುಡಿದು ಜನ ಸಾಯುತ್ತಿರುವ ಸುದ್ದಿಗಳು ನಾವು ಇದುವರೆಗೂ ಸಾಧಿಸಿರುವ ಪ್ರಗತಿಯ ಬಗ್ಗೆ ಅನೇಕ ಪ್ರಶ್ನೆಗಳನ್ನು ಹುಟ್ಟುಹಾಕುತ್ತಿವೆ. ಒಂದೆಡೆ, ಶುದ್ಧ ಕುಡಿಯುವ ನೀರನ್ನು ಜನರಿಗೆ ಒದಗಿಸುವ ಸಲುವಾಗಿ ಬೃಹತ್ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಪ್ರಯತ್ನಗಳು ನಡೆಯುತ್ತಿವೆ. ಇನ್ನೊಂದೆಡೆ, ನೀರು ಸರಬರಾಜು ವ್ಯವಸ್ಥೆಯು ಹಳ್ಳ ಹಿಡಿದು ರಾಯಚೂರು ಜಿಲ್ಲೆಯಲ್ಲಿ ಕಲುಷಿತ ನೀರನ್ನು ಕುಡಿದು ಜನ ಸಾಯುತ್ತಿದ್ದಾರೆ. ಇದಕ್ಕೆ ಕಾರಣ ಅಧಿಕಾರಿಶಾಹಿಯ ಬೇಜವಾಬ್ದಾರಿತನ ಮಾತ್ರ. ಇಂತಹ ಪ್ರಕರಣಗಳಲ್ಲಿ ಸರಿಯಾಗಿ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ನಮ್ಮ ದೇಶ ಪ್ರಗತಿಯ ಪಥದಲ್ಲಿ ಸಾಗಲು ಸಾಧ್ಯವಿಲ್ಲ.

ಎ.ಜೆ.ಜಾವೀದ್, ಹಾಸನ

ಹೇಳಿಕೆ ವೀರರಿಗೆ ಚಾಟಿ ಏಟು

ಬಿಜೆಪಿ ವಕ್ತಾರರಾಗಿದ್ದ ನೂಪುರ್ ಶರ್ಮಾ ಅವರನ್ನು ವಿವಾದಿತ ಹೇಳಿಕೆ ಬಗೆಗಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿರುವುದು, ಹೇಳಿಕೆ ವೀರರಲ್ಲಿ ನಡುಕ ಹುಟ್ಟಿಸಿದೆ. ಇತ್ತೀಚಿನ ದಿನಗಳಲ್ಲಿ ಮಾತನಾಡಲು ವೇದಿಕೆ ಮತ್ತು ಮೈಕ್ ದೊರಕಿದರೆ ಸಾಕು, ಕೆಲವರಿಗೆ ನಿಯಂತ್ರಣ ಎನ್ನುವ ಶಬ್ದವೇ ಮರೆತು ಹೋಗುತ್ತದೆ. ದೃಶ್ಯ ಮಾಧ್ಯಮದವರು ಮುಂದೆ ಇದ್ದರಂತೂ ಇದು ಇನ್ನೂ ಹೆಚ್ಚು. ಹಾಗೆಯೇ, ಅಸಭ್ಯ, ಅನಾಗರಿಕ ಮಾತುಗಳೂ ಅಡೆತಡೆ ಇಲ್ಲದೆ ಹರಿಯುತ್ತವೆ.

ಇಂಥವರ ವಿರುದ್ಧ ಕ್ರಮ ತೆಗೆದುಕೊಳ್ಳಲು ಪಕ್ಷ ರಾಜಕಾರಣ ಅಡ್ಡ ಬರುತ್ತಿದೆ. ಕರ್ನಾಟಕದಲ್ಲೂ ಇಂಥವರ ಸಂಖ್ಯೆ ಕಡಿಮೆಯೇನಲ್ಲ. ಈ ಸಂಬಂಧ ಸುಪ್ರೀಂ ಕೋರ್ಟ್‌ನಲ್ಲಿ ವ್ಯಕ್ತವಾದ ನ್ಯಾಯಮೂರ್ತಿಯ ಆಕ್ರೋಶವು ಸರ್ಕಾರದ ಕಣ್ಣು ತೆರೆಸಬೇಕು.

ರಮಾನಂದ ಶರ್ಮಾ, ಬೆಂಗಳೂರು

ಕಾಂಗ್ರೆಸ್ ಇನ್ನಾದರೂ ಎಚ್ಚೆತ್ತುಕೊಳ್ಳಲಿ

ವಿರೋಧ ಪಕ್ಷಗಳ ಆಡಳಿತ ಇರುವ ರಾಜ್ಯ ಸರ್ಕಾರಗಳನ್ನು ಉರುಳಿಸುವ ಆಟದಲ್ಲಿ ಬಿಜೆಪಿ ತೊಡಗಿದೆ. ಇದು, ಅತಿ ಎನಿಸುವ ಮಟ್ಟಿಗೆ ಹೋಗಿದೆ. ಆದರೆ, ನಮ್ಮ ರಾಜ್ಯದಲ್ಲಿ ಕಾಂಗ್ರೆಸ್‌ನ ಹಿರಿಯ ನಾಯಕರು, ಚುನಾವಣೆಯಲ್ಲಿ ಜನ ತಮ್ಮ ಪಕ್ಷವನ್ನು ಬಹುಮತದಿಂದ ಆರಿಸಿಯೇ ಬಿಟ್ಟಿದ್ದಾರೆ ಎಂದು ಭ್ರಮಿಸಿ, ಮುಖ್ಯಮಂತ್ರಿಯ ಕುರ್ಚಿಗಾಗಿ 'ಶೀತಲ ಸಮರ'ದಲ್ಲಿ ಮಗ್ನರಾಗಿದ್ದಾರೆ. ಕಾಂಗ್ರೆಸ್ ಹೈಕಮಾಂಡ್‌ಗೆ ಇದರ ಪರಿವೆಯೇ ಇದ್ದಂತಿಲ್ಲ. 23 ಮಂದಿಯ ಭಿನ್ನಮತೀಯರ ಗುಂಪು ನಿತ್ರಾಣವಾದ ನಂತರ, 'ಪಿತ್ರಾರ್ಜಿತ ಆಸ್ತಿಯಾದ ಕಾಂಗ್ರೆಸ್ ನಮ್ಮ ಹಿಡಿತಕ್ಕೇ ದಕ್ಕಿದೆ' ಎಂದು ನಿರುಮ್ಮಳವಾಗಿ ಇದೆ.

ಬಿಜೆಪಿ ನಾಯಕರು ವಿರೋಧಿಗಳ ಬುಡವನ್ನೇ ಅಲ್ಲಾಡಿಸುತ್ತಿದ್ದಾರೆ. ಅಧಿಕಾರ ಕಸಿದುಕೊಳ್ಳಲು ಅವಕಾಶಕ್ಕಾಗಿ ಕಾಯತೊಡಗಿದ್ದಾರೆ. ಆದರೆ ಕಾಂಗ್ರೆಸ್ ಮುಖಂಡರು ಕುರ್ಚಿಗಾಗಿ ಈಗಲೇ ಒಳಜಗಳದಲ್ಲಿ ನಿರತರಾಗಿದ್ದಾರೆ. ದಿಗ್ಗಜರಿಂದ ರಾರಾಜಿಸುತ್ತಿದ್ದ ಪಕ್ಷ ಈಗ ಈ ಮಟ್ಟಕ್ಕೆ ಇಳಿದಿರುವುದು ದುರಂತ. ಈ ಪಕ್ಷ ಇನ್ನಾದರೂ ಎಚ್ಚೆತ್ತುಕೊಳ್ಳಲಿ.

ಸ್ವಾಮಿ ಕೇಶವ್ ಜಿ. ಬೆಂಗಳೂರು

ಮಾರಿಕೊಳ್ಳಲು ಸಿದ್ಧ...!

ಹಿಂದೊಮ್ಮೆ ವಾಜಪೇಯಿ
ನೇತೃತ್ವದ ಸರ್ಕಾರಕ್ಕೆ
ಏಕೈಕ ಸಂಸದನ
ಬೆಂಬಲದ ಕೊರತೆಯಾಗಿ
ಸರ್ಕಾರ ಬಿದ್ದುಹೋಗಿತ್ತು,
ಆಗ ವಾಜಪೇಯಿ ಹೇಳಿದ್ದರಂತೆ
'ಕೊಂಡುಕೊಳ್ಳುವುದಕ್ಕೆ ಬೇಕಾದಷ್ಟಿತ್ತು
ಆದರೆ ಕೊಂಡುಕೊಳ್ಳುವ
ಮನಸ್ಸಿರಲಿಲ್ಲ' ಎಂದು.
ಈಗ ನೋಡಿದರೆ ಎಲ್ಲ ಪಕ್ಷದ
ವರಿಷ್ಠರಿಗೆ ಅನ್ನಿಸುತ್ತಿರಬಹುದು
'ನಮ್ಮೆಲ್ಲ ಸದಸ್ಯರು ಮಾರಿಕೊಳ್ಳಲು
ಸಿದ್ಧರಿದ್ದಾರೆ, ಹುಷಾರಾಗಿ
ಕಾಪಾಡಿಕೊಳ್ಳಬೇಕು' ಎಂದು!

ಜೆ.ಬಿ.ಮಂಜುನಾಥ, ಪಾಂಡವಪುರ

ಯಾಕೆ ಈ ಪರಿ ಜಿಎಸ್‌ಟಿ ಹೇರಿಕೆ?

ಕೆಲವು ವಿಷಯಗಳಲ್ಲಿ ನಮ್ಮ ಅರ್ಥ ಸಚಿವರಿಗೆ ಯಾರು ಸಲಹೆ ನೀಡುತ್ತಾರೋ ಎಂಬ ಪ್ರಶ್ನೆ ನಮ್ಮನ್ನು ಕಾಡುತ್ತದೆ. ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನ ತತ್ತರಿಸಿ ಹೋಗಿರುವಾಗ ಆಸ್ಪತ್ರೆಯ ಹಾಸಿಗೆಗೂ ಜಿಎಸ್‌ಟಿ! ಆಸ್ಪತ್ರೆ ಎಂದರೆ ಇವರೇನು ಐಷಾರಾಮಿ ಹೋಟೆಲ್ ಅಂದುಕೊಂಡಿದ್ದಾರೆಯೇ? ಇವರಿಗೆ ತುಸು ಸಾಮಾನ್ಯ ಜ್ಞಾನ ಏನಾದರೂ ಇದೆಯೇ? ಮೊಸರಿಗೆ ಕೂಡ ಜಿಎಸ್‌ಟಿ ವಿಧಿಸಿದ್ದಾಯ್ತು. ಜನಸಾಮಾನ್ಯರೇನು ಕುರಿಗಳೇ?

ಮುರುಗೇಶ ಹನಗೋಡಿಮಠ, ಹುಬ್ಬಳ್ಳಿ

ಪೌರ ಕಾರ್ಮಿಕರ ಬೇಡಿಕೆಗೆ ಸ್ಪಂದಿಸಿ

ರಾಜ್ಯದಲ್ಲಿರುವ ಪೌರ ಕಾರ್ಮಿಕರು ಹಲವಾರು ವರ್ಷಗಳಿಂದ ತಮ್ಮ ಬೇಡಿಕೆಗಳಿಗಾಗಿ ಹೋರಾಟ ಮಾಡುತ್ತಾ ಬಂದಿದ್ದಾರೆ. ಕಡಿಮೆ ವೇತನದಲ್ಲಿ ಸೇವೆ ಸಲ್ಲಿಸುವ ಇವರು ಸೇವಾ ಅಭದ್ರತೆಯ ನಡುವೆಯೇ ನಗರ, ಪಟ್ಟಣಗಳ ಶುಚಿತ್ವಕ್ಕಾಗಿ ದುಡಿಯುವ ಶ್ರಮಜೀವಿಗಳು. ಪೌರ ಕಾರ್ಮಿಕರ ಸೇವಾಕಾರ್ಯ ಅನನ್ಯವಾಗಿದ್ದು, ಅದಕ್ಕೆ ಬೆಲೆ ಕಟ್ಟಲಾಗದು.

ಇಂದಿನ ತುಟ್ಟಿ ದಿನಮಾನದಲ್ಲಿ ಜೀವನ ನಿರ್ವಹಣೆ ಕಷ್ಟವಾಗುತ್ತಿದ್ದರೂ ಪೌರ ಕಾರ್ಮಿಕರ ನ್ಯಾಯಯುತ ಬೇಡಿಕೆಗಳಿಗೆ ಸರ್ಕಾರದಿಂದ ಸರಿಯಾದ ಸ್ಪಂದನೆ ಸಿಗದಿರುವುದು ಖಂಡನೀಯ. ಈಗಲಾದರೂ ಇವರ ಬೇಡಿಕೆಗಳಿಗೆ ಸರ್ಕಾರ ತುರ್ತಾಗಿ ಸ್ಪಂದಿಸಬೇಕು.

ಆರ್.ಬಿ.ಜಿ.ಘಂಟಿ, ಅಮೀನಗಡ, ಬಾಗಲಕೋಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ನವೋದ್ಯಮ ಕರ್ನಾಟಕ ಅತ್ಯುತ್ತಮ

ಪ್ರಜಾವಾಣಿ ವಾರ್ತೆ

ನವೋದ್ಯಮ ಕ್ಷೇತ್ರದಲ್ಲಿ ಕರ್ನಾಟಕದ ಸಾಧನೆ ಅತ್ಯುತ್ತಮವಾಗಿದೆ. ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯು (ಡಿಪಿಐಐಟಿ) ವಿವಿಧ ರಾಜ್ಯಗಳಲ್ಲಿ ನವೋದ್ಯಮಕ್ಕೆ ಇರುವ ಪ್ರೋತ್ಸಾಹ, ಪೂರಕ ವಾತಾವರಣ ಮತ್ತು ಇತರ ಅಂಶಗಳನ್ನು ಮೌಲ್ಯಮಾಪನಕ್ಕೆ ಒಳಪಡಿಸಿ ಶ್ರೇಣಿ ನೀಡಿದೆ. ಅತ್ಯುತ್ತಮ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ ಮತ್ತು ಗುಜರಾತ್ ಸ್ಥಾನ ಪಡೆದಿವೆ. ಸಣ್ಣ ರಾಜ್ಯಗಳ ಪೈಕಿ ಮೇಘಾಲಯ ಅತ್ಯುತ್ತಮ ರಾಜ್ಯ ಎನಿಸಿಕೊಂಡಿದೆ. ಜೊತೆಗೆ, ರಾಜ್ಯಗಳು ಅನುಸರಿಸಿರುವ ಅತ್ಯುತ್ತಮ ಪದ್ಧತಿಗಳ ಬಗೆಗಿನ ವರದಿಯೊಂದನ್ನು ಕೂಡ ಡಿಪಿಐಐಟಿ ಸಿದ್ಧಪಡಿಸಿದೆ. ಈ ವರದಿಯಲ್ಲಿಯೂ ಕರ್ನಾಟಕದ ಸಾಧನೆಗೆ ಶ್ಲಾಘನೆ ವ್ಯಕ್ತವಾಗಿದೆ. ಸಂಶೋಧನೆ ಮತ್ತು ಅಭಿವೃದ್ಧಿ, ಬ್ಯಾಟರಿ ಚಾಲಿತ ವಾಹನ ಕ್ಷೇತ್ರಕ್ಕೆ ನೀಡಿದ ಒತ್ತು, ನಾವೀನ್ಯತೆಗೆ ಉತ್ತೇಜನವನ್ನು ಉಲ್ಲೇಖಿಸಲಾಗಿದೆ. ರಾಜ್ಯವು ಎಂಜಿನಿಯರಿಂಗ್ ಸಂಶೋಧನೆ ಮತ್ತು ಅಭಿವೃದ್ಧಿ ನೀತಿ 2021 ಅನ್ನು ಜಾರಿಗೆ ತಂದದ್ದನ್ನೂ ಪ್ರಸ್ತಾಪಿಸಲಾಗಿದೆ.

ಮೌಲ್ಯಮಾಪನದ ಸಂದರ್ಭದಲ್ಲಿ ಏಳು ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ಸಾಂಸ್ಥಿಕ ಬೆಂಬಲ, ನಾವೀನ್ಯತೆಗೆ ಉತ್ತೇಜನ, ಮಾರುಕಟ್ಟೆ ಲಭ್ಯತೆ, ಸರ್ಕಾರದಿಂದ ದೊರೆತ ಪೋಷಣೆ, ಹಣಕಾಸು ಬೆಂಬಲ, ಸಾಮರ್ಥ್ಯವೃದ್ಧಿ ಅವಕಾಶಗಳು ಮತ್ತು ಮಾರ್ಗದರ್ಶನ ಬೆಂಬಲ ಎಂಬ ಅಂಶಗಳನ್ನು ಮೌಲ್ಯಮಾಪನಕ್ಕೆ ಒಳಪಡಿಸಲಾಗಿದೆ. ಇವುಗಳ ಅಡಿಯಲ್ಲಿ 26 ವಿಷಯಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ನವೋದ್ಯಮಗಳಿಗೆ ಸುಲಲಿತ ವ್ಯಾಪಾರದ ಅವಕಾಶವನ್ನು ತೆರೆಯುವುದು, ನವೋದ್ಯಮಕ್ಕೆ ಉತ್ತೇಜನ ಕೊಡುವುದು ಮತ್ತು ರಾಜ್ಯಗಳಲ್ಲಿ ಅನುಸರಿಸುತ್ತಿರುವ ಅತ್ಯುತ್ತಮ ಪದ್ಧತಿಗಳು ಪರಸ್ಪರರಿಗೆ ತಿಳಿಯುವಂತೆ ಮಾಡುವುದು ಶ್ರೇಣೀಕರಣದ ಉದ್ದೇಶವಾಗಿದೆ.

ಭಾರತಕ್ಕೆ 3ನೇ ಸ್ಥಾನ

ಜಗತ್ತಿನ ವಿವಿಧ ದೇಶಗಳು ಇತ್ತೀಚಿನ ವರ್ಷಗಳಲ್ಲಿ ನವೋದ್ಯಮಗಳಿಗೆ ವಿಶೇಷ ಪ್ರೋತ್ಸಾಹ ನೀಡಲು ಆರಂಭಿಸಿವೆ. ಭಾರತವೂ ಈ ವಿಚಾರದಲ್ಲಿ ಹಿಂದೆ ಬಿದ್ದಿಲ್ಲ. ಅತಿ ಹೆಚ್ಚು ನವೋದ್ಯಮ ಹೊಂದಿರುವ ದೇಶಗಳ ಪೈಕಿ ಭಾರತಕ್ಕೆ ಮೂರನೇ ಸ್ಥಾನವಿದೆ ಎಂದು ಡಿಪಿಐಐಟಿ ವರದಿಯು ಹೇಳಿದೆ. ಈ ಕ್ಷೇತ್ರದಲ್ಲಿ ಮೊದಲ ಸ್ಥಾನಕ್ಕೆ ಏರಬೇಕು ಎಂಬ ಆಕಾಂಕ್ಷೆಯನ್ನು ವರದಿಯಲ್ಲಿ ವ್ಯಕ್ತಪಡಿಸಲಾಗಿದೆ. ನವೋದ್ಯಮಗಳ ಸಂಖ್ಯೆಯಲ್ಲಿ ಆಗುತ್ತಿರುವ ಹೆಚ್ಚಳ ಮತ್ತು ಈ ಕ್ಷೇತ್ರಕ್ಕೆ ಪೂರಕವಾದ ವಾತಾವರಣ ಸೃಷ್ಟಿಯು ಇಡೀ ದೇಶಕ್ಕೆ ಹೊಸ ದಿಕ್ಕನ್ನೇ ತೋರುತ್ತಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಸ್ಟಾರ್ಟ್‌ಅಪ್ ಇಂಡಿಯಾ ಎಂಬ ಕಾರ್ಯಕ್ರಮದ ಮೂಲಕ ಕೇಂದ್ರ ಸರ್ಕಾರವು ನವೋದ್ಯಮಗಳಿಗೆ ಉತ್ತೇಜನ ನೀಡುತ್ತಿದೆ. ಶ್ರೇಣೀಕರಣ ವ್ಯವಸ್ಥೆಯು ಜಾರಿಗೆ ಬಂದ ನಂತರ ಹಲವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ನವೋದ್ಯಮ ನೀತಿಯನ್ನು ಬಲಪಡಿಸಿವೆ ಮತ್ತು ನವೋದ್ಯಮಗಳಿಗಾಗಿ ವಿವಿಧ ಬೆಂಬಲ ವ್ಯವಸ್ಥೆ ಜಾರಿಗೊಳಿಸಿವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಶ್ರೇಣೀಕರಣ


24 ಮೌಲ್ಯಮಾಪನಕ್ಕೆ ಪರಿಗಣಿಸಲಾದ ರಾಜ್ಯಗಳು

7 ಮೌಲ್ಯಮಾಪನಕ್ಕೆ ಪರಿಗಣಿಸಲಾದ ಕೇಂದ್ರಾಡಳಿತ ಪ್ರದೇಶಗಳು

5 ಶ್ರೇಣಿಗಳಲ್ಲಿ ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳ ಶ್ರೇಣೀಕರಣ



ನವೋದ್ಯಮ ರ್‍ಯಾಂಕಿಂಗ್



ಕರ್ನಾಟಕ

ಕರ್ನಾಟಕವು ನವೋದ್ಯಮಗಳ ಬೆಳವಣಿಗೆಗೆ ಪೂರಕವಾದ ವಾತಾವರಣವನ್ನು ನಿರ್ಮಿಸಿದೆ. ಇದಕ್ಕಾಗಿ ನೀತಿ ರೂಪಣೆ ಮತ್ತು ಯೋಜನೆಗಳ ಮಟ್ಟದಲ್ಲಿ ಕ್ರಮ ತೆಗೆದುಕೊಂಡಿದೆ. ಎಂಜಿನಿಯರಿಂಗ್ ಸಂಶೋಧನೆ ಮತ್ತು ಅಭಿವೃದ್ಧಿಗೆ ಆದ್ಯತೆ ನೀಡಿದ ಕಾರಣ ನವೋದ್ಯಮಗಳ ಸ್ಥಾಪನೆ ಮತ್ತು ಬೆಳವಣಿಗೆಗೆ ಅಗತ್ಯವಾದ ವಾತಾವರಣ ಸೃಷ್ಟಿಯಾಗಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

2021ರಲ್ಲಿ ಕರ್ನಾಟಕ ಸರ್ಕಾರವು ‘ಎಂಜಿನಿಯರಿಂಗ್ ಸಂಶೋಧನೆ ಮತ್ತು ಅಭಿವೃದ್ಧಿ ನೀತಿ-2021’ನ್ನು ರೂಪಿಸಿದೆ. ಈ ನೀತಿಯ ಅಡಿ ರಾಜ್ಯದ ಹಲವೆಡೆ ಪ್ರಯೋಗಾಲಯಗಳು ಮತ್ತು ಪರೀಕ್ಷಾ ಕೇಂದ್ರಗಳನ್ನು ಆರಂಭಿಸಲಾಗಿದೆ. ಎಂಜಿನಿಯರಿಂಗ್, ವಿದ್ಯುತ್ ಚಾಲಿತ ವಾಹನ ಆಧಾರಿತ ಸಾರಿಗೆಗೆ ಸಂಬಂಧಿಸಿದಂತೆ ನವೋದ್ಯಮಗಳ ಅನ್ವೇಷಣೆಗಳನ್ನು ಪರೀಕ್ಷೆಗೆ ಒಳಪಡಿಸಲು ಈ ಕೇಂದ್ರಗಳು ನೆರವಾಗುತ್ತವೆ.

ಬೆಂಗಳೂರಿನಲ್ಲಿ ಎಲ್ಲರಿಗೂ, ಎಲ್ಲಾ ಸಮಯದಲ್ಲೂ ಲಭ್ಯವಾಗುವಂತೆ ಇ-ಬೈಕ್ ಟ್ಯಾಕ್ಸಿ ಸೇವೆ ನೀತಿಯನ್ನು ಜಾರಿಗೆ ತರಲಾಗಿದೆ. ಇದರಿಂದ ಹಲವು ನವೋದ್ಯಮಗಳು ಇ-ಬೈಕ್ ಟ್ಯಾಕ್ಸಿ ಸೇವೆಯನ್ನು ನೀಡಲು ಮುಂದೆ ಬಂದಿವೆ. ಜತೆಗೆ ಈ ನವೋದ್ಯಮಗಳಿಗೆ ಅಗತ್ಯವಾದ ಸರಕು ಮತ್ತು ಸೇವೆಗಳನ್ನು ಒದಗಿಸುವ ಪೂರಕ ನವೋದ್ಯಮಗಳ ಸ್ಥಾಪನೆಗೂ ಅವಕಾಶ ದೊರೆತಿದೆ.

ನವೋದ್ಯಮಗಳ ಉತ್ತೇಜನಕ್ಕೆ ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಈ ಕಾರ್ಯಕ್ರಮದ ಅಡಿ ರಾಜ್ಯದ 14 ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳಿಗಾಗಿ ‘ಇ-ಸ್ಟೆಪ್’ ಎಂಬ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಈ ಸ್ವರೂಪದ 20 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. 8,000ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗಿದೆ.

ಗ್ರಾಮೀಣ ಪ್ರದೇಶಕ್ಕೆ ಸಂಬಂಧಿಸಿದ ಮತ್ತು ಗ್ರಾಮೀಣ ಪ್ರದೇಶದ್ದೇ ಆದ ನವೋದ್ಯಮಗಳ ಅಭಿವೃದ್ಧಿಗೂ ಆದ್ಯತೆ ನೀಡಲಾಗಿದೆ. ಈ ಕಾರ್ಯಕ್ರಮದ ಅಡಿ ರಾಜ್ಯದ ಗ್ರಾಮೀಣ ಪ್ರದೇಶದ ಹಲವೆಡೆ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ. 100 ನವೋದ್ಯಮಗಳಿಗೆ ತರಬೇತಿ, ಸಂಶೋಧನೆ ಮತ್ತು ಕಾರ್ಯನಿರ್ವಹಣೆಯಲ್ಲಿ ವಿವಿಧ ರೀತಿಯ ನೆರವು ನೀಡಲಾಗಿದೆ. ಕೃಷಿ ಉತ್ಪನ್ನಗಳನ್ನು ದೀರ್ಘಕಾಲದವರೆಗೆ ಕೆಡದಂತೆ ಇಡಲು ಅನುವು ಮಾಡಿಕೊಡುವ ಸೌರಶಕ್ತಿ ಚಾಲಿತ ರೆಫ್ರಿಜರೇಟರ್, ವಿದ್ಯುತ್ ಇಲ್ಲದೆಯೇ ಕೆಲಸ ಮಾಡುವ ನೀರು ಶುದ್ಧೀಕರಣ ಘಟಕಗಳನ್ನು ತಯಾರಿಸುವಂತಹ ನವೋದ್ಯಮಗಳಿಗೆ ಬೆಂಬಲ ನೀಡಲಾಗಿದೆ. ಈ ಮೂಲಕ ರಾಜ್ಯದ ಗ್ರಾಮೀಣ ಪ್ರದೇಶದ ಜನರ ಜೀವನಮಟ್ಟ ಸುಧಾರಿಸಲು, ನವೋದ್ಯಮಕ್ಕೆ ಸಂಬಂಧಿಸಿದ ಕಾರ್ಯಕ್ರಮದಲ್ಲಿ ಒತ್ತು ನೀಡಲಾಗಿದೆ.

ಗುಜರಾತ್

ನವೋದ್ಯಮಗಳ ತರಬೇತಿ ಮತ್ತು ನವೋದ್ಯಮಗಳ ಸ್ಥಾಪನೆಗೆ ಆರ್ಥಿಕ ನೆರವು ನೀಡುವಲ್ಲಿ ಗುಜರಾತ್ ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳು ಯಶಸ್ವಿಯಾಗಿವೆ. ಈ ಕಾರಣದಿಂದಲೇ ಬೇರೆಲ್ಲಾ ರಾಜ್ಯಗಳಿಗಿಂತ ಗುಜರಾತ್‌ನಲ್ಲಿ ನವೋದ್ಯಮಗಳ ಸ್ಥಾಪನೆಗೆ ಅತ್ಯುತ್ತಮ ವಾತಾವರಣ ಇದೆ ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ.

ನವೋದ್ಯಮಗಳ ಅಗತ್ಯಗಳು, ಅವುಗಳ ಬೆಳವಣಿಗೆಗೆ ಪೂರಕವಾಗುವಂತೆ ಸರ್ಕಾರವು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಅಧಿಕಾರಿಗಳಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಸರ್ಕಾರವು ರಾಜ್ಯದಲ್ಲಿ ಹಲವಾರು ತರಬೇತಿ ಶಿಬಿರಗಳನ್ನು ನಡೆಸಿದೆ. 2021ರಲ್ಲಿ ಇಂತಹ ಒಟ್ಟು ಐದು ಶಿಬಿರಗಳನ್ನು ನಡೆಸಲಾಗಿದೆ. ಪ್ರತಿ ಶಿಬಿರದಲ್ಲಿ 15 ಇಲಾಖೆಗಳ ಒಟ್ಟು 30 ಅಧಿಕಾರಿಗಳು ಭಾಗಿಯಾಗಿದ್ದಾರೆ. ಹೀಗೆ ರಾಜ್ಯದ ಎಲ್ಲಾ ಇಲಾಖೆಗಳ ಒಟ್ಟು 150 ಅಧಿಕಾರಿಗಳನ್ನು ನವೋದ್ಯಮಗಳ ಬೆಳವಣಿಗೆಗೆ ಪೂರಕವಾದ ವಾತಾವರಣ ನಿರ್ಮಿಸಲು ಸಜ್ಜುಗೊಳಿಸಲಾಗಿದೆ.

ದೊಡ್ಡ ಉದ್ಯಮಗಳು ನವೋದ್ಯಮಗಳಲ್ಲಿ ಹೂಡಿಕೆ ಮಾಡಲು ಸರ್ಕಾರವು ಒಂದು ಸೇತುವೆಯಂತೆ ಕೆಲಸ ಮಾಡಿದೆ. ರಾಜ್ಯದಲ್ಲಿನ ನವೋದ್ಯಮ ಕ್ಷೇತ್ರದ ಸ್ಥಿತಿಗತಿಯ ಬಗ್ಗೆ ದೇಶೀ ಉದ್ಯಮಗಳು, ಬಹುರಾಷ್ಟ್ರೀಯ ಕಂಪನಿಗಳಿಗೆ ಮನವರಿಕೆ ಮಾಡಿಕೊಡುವ ಸಲುವಾಗಿ ಸಮ್ಮೇಳನಗಳನ್ನು ನಡೆಸಲಾಗಿದೆ. ಒಟ್ಟು 300 ಕಂಪನಿಗಳು/ಹೂಡಿಕೆದಾರರು ಈ ಸಮ್ಮೇಳನಗಳಲ್ಲಿ ಭಾಗಿಯಾಗಿದ್ದಾರೆ. ನವೋದ್ಯಮಗಳು ಯಾವುವು, ಅವುಗಳಿಗೆ ಬಂಡವಾಳದ ಅವಶ್ಯಕತೆ ಏಕಿದೆ, ಅವುಗಳಲ್ಲಿ ಏಕೆ ಬಂಡವಾಳ ಹೂಡಬೇಕು ಮತ್ತು ಬಂಡವಾಳ ಹೂಡಿಕೆಯ ಸ್ವರೂಪದ ಬಗ್ಗೆ ಅವರಿಗೆ ಮನವರಿಕೆ ಮಾಡಿಕೊಡಲಾಗಿದೆ.

ನವೋದ್ಯಮಗಳಿಗೆ ಆರ್ಥಿಕ ನೆರವು ನೀಡಲು ಗುಜರಾತ್ ರಾಜ್ಯ ಸರ್ಕಾರವು ಎರಡು ನಿಧಿಗಳನ್ನು ಸ್ಥಾಪಿಸಿದೆ. ಜೀವವಿಜ್ಞಾನ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಅನ್ವೇಷಣೆಯಲ್ಲಿ ತೊಡಗಿರುವ ನವೋದ್ಯಮಗಳಿಗೆ ಆರ್ಥಿಕ ನೆರವು ನೀಡಲು ಪ್ರತ್ಯೇಕ ನಿಧಿ ಸ್ಥಾಪಿಸಲಾಗಿದೆ. ಗುಜರಾತ್ ರಾಜ್ಯ ಜೀವ ವಿಜ್ಞಾನ ಮಿಷನ್ ಅಡಿ ಈ ನಿಧಿಗೆ 2021ರಲ್ಲಿ ₹11.31 ಕೋಟಿ ಅನುದಾನ ನೀಡಲಾಗಿದೆ. ಇದೇ ರೀತಿ ವಿದ್ಯಾರ್ಥಿಗಳ ಅನ್ವೇಷಣೆಗೆ ನವೋದ್ಯಮಗಳ ರೂಪ ನೀಡಲು, ‘ಸ್ಟೂಡೆಂಟ್ಸ್ ಇನೋವೇಷನ್ಸ್ ಫಂಡ್’ ಅನ್ನು ಸ್ಥಾಪಿಸಲಾಗಿದೆ. ಗುಜರಾತ್ ಜ್ಞಾನ ಸೊಸೈಟಿಯ ಅಡಿಯಲ್ಲಿ ಈ ನಿಧಿಗೆ 2021ರಲ್ಲಿ ₹17 ಕೋಟಿ ಅನುದಾನ ಒದಗಿಸಲಾಗಿದೆ. ಈ ಎರಡೂ ನಿಧಿಗಳ ಅಡಿಯಲ್ಲಿ ಒಟ್ಟು 160 ನವೋದ್ಯಮಗಳಿಗೆ ತಲಾ ₹3 ಲಕ್ಷದ ಆರ್ಥಿಕ ನೆರವು ನೀಡಲಾಗಿದೆ.

ಮೇಘಾಲಯ

ನವೋದ್ಯಮ ರ್‍ಯಾಂಕಿಂಗ್‌ನ ‘ಅತ್ಯುತ್ತಮ ರಾಜ್ಯ’ ವರ್ಗದಲ್ಲಿ ಮೇಘಾಲಯವು ಸ್ಥಾನ ಪಡೆದಿದೆ. ಮೇಘಾಲಯವು, ಈ ವರ್ಗದಲ್ಲಿ ಸ್ಥಾನ ಪಡೆದ ಈಶಾನ್ಯ ಭಾರತದ ಏಕೈಕ ರಾಜ್ಯ ಎನಿಸಿದೆ.

ಮೇಘಾಲಯದಲ್ಲಿ ನವೋದ್ಯಮಗಳ ಬೆಳವಣಿಗೆಗೆ ಪೂರಕವಾದ ವಾತಾವರಣವನ್ನು ರೂಪಿಸುವ ಸಲುವಾಗಿ ರಾಜ್ಯ ಸರ್ಕಾರವು ನೀತಿಯೊಂದನ್ನು ರೂಪಿಸಿದೆ. 2023ರ ವೇಳೆಗೆ ಮೇಘಾಲಯವನ್ನು ದೇಶದ ನವೋದ್ಯಮಗಳ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವ ಗುರಿಯನ್ನು, ‘ಮೇಘಾಲಯ ನವೋದ್ಯಮ ನೀತಿ’ಯ ಅಡಿ ಹಾಕಿಕೊಳ್ಳಲಾಗಿದೆ. ಇದಕ್ಕಾಗಿ ₹15 ಕೋಟಿಯ ಅನುದಾನವನ್ನು ರಾಜ್ಯ ಸರ್ಕಾರವು ತೆಗೆದಿರಿಸಿದೆ. ನವೋದ್ಯಮಗಳ ಆರಂಭಕ್ಕೆ ಆರ್ಥಿಕ ನೆರವು ನೀಡಲು ಮೇಘಾಲಯ ಸರ್ಕಾರವು ‘ಪ್ರೈಮ್’ ಎಂಬ ಯೋಜನೆಯನ್ನು ರೂಪಿಸಿದೆ.

ಪ್ರೈಮ್ ಯೋಜನೆ ಅಡಿ ಎರಡು ಪ್ರತ್ಯೇಕ ನಿಧಿಗಳನ್ನು ರಚಿಸಲಾಗಿದೆ. ನವೋದ್ಯಮಗಳ ಸ್ಥಾಪನೆಗೆ ಆರಂಭಿಕ ಬಂಡವಾಳವಾಗಿ ತಲಾ ₹5 ಲಕ್ಷ ಆರ್ಥಿಕ ನೆರವು ನೀಡಲು ಒಂದು ನಿಧಿ ಸ್ಥಾಪಿಸಲಾಗಿದೆ. ಈ ನಿಧಿಯ ಅಡಿ 2021ರಲ್ಲಿ ₹70 ಲಕ್ಷ ಅನುದಾನವನ್ನು ಬಿಡುಗಡೆ ಮಾಡಿದ್ದು, 10ಕ್ಕೂ ಹೆಚ್ಚು ನವೋದ್ಯಮಗಳು ಇದರ ಅನುಕೂಲ ಪಡೆದಿವೆ. ಇದೇ ರೀತಿ, ನವೋದ್ಯಮಗಳಿಗೆ ಪೂರಕ ಆರ್ಥಿಕ ನೆರವು ನೀಡುವ ಸಲುವಾಗಿ ಬಡ್ಡಿರಹಿತ ಸಾಲ ನಿಧಿಯನ್ನು ಸ್ಥಾಪಿಸಲಾಗಿದೆ. ನವೋದ್ಯಮಗಳು ತಮ್ಮ ವಹಿವಾಟುಗಳನ್ನು ವಿಸ್ತರಿಸಲು ಅಗತ್ಯವಿರುವ ಆರ್ಥಿಕ ನೆರವನ್ನು ಈ ನಿಧಿಯಿಂದ ನೀಡಲಾಗುತ್ತದೆ. ಒಂದು ನವೋದ್ಯಮಕ್ಕೆ ಗರಿಷ್ಠ ₹25 ಲಕ್ಷ ಬಡ್ಡಿರಹಿತ ಸಾಲವನ್ನು ನೀಡಲಾಗುತ್ತದೆ. ಈ ಕಾರ್ಯಕ್ರಮಗಳ ಮೂಲಕ 100 ನವೋದ್ಯಮಗಳಿಗೆ ನೆರವು ನೀಡುವ ಗುರಿ ಹಾಕಿಕೊಳ್ಳಲಾಗಿದೆ.

ಮಹಿಳೆಯರ ಮುಂದಾಳತ್ವದ ನವೋದ್ಯಮಗಳಿಗೂ ಒತ್ತು ನೀಡಲಾಗಿದೆ. 10 ಮಹಿಳಾ ನವೋದ್ಯಮಗಳಿಗೆ ₹5 ಲಕ್ಷದ ಆರಂಭಿಕ ಬಂಡವಾಳ ಮತ್ತು ₹25 ಲಕ್ಷ ಬಡ್ಡಿರಹಿತ ಸಾಲವನ್ನು ಒದಗಿಸಲಾಗಿದೆ. ನವೋದ್ಯಮಗಳ ಸ್ಥಾಪನೆಗೆ ಅಗತ್ಯವಾದ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವ ಸಲುವಾಗಿ ರಾಜ್ಯದಾದ್ಯಂತ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ. 45ಕ್ಕೂ ಹೆಚ್ಚು ಕಂಪನಿಗಳು ಇಂತಹ ತರಬೇತಿ ಕಾರ್ಯಕ್ರಮದಲ್ಲಿ ಸಂಪನ್ಮೂಲ ಸಂಸ್ಥೆಗಳಾಗಿ ಭಾಗಿಯಾಗಿವೆ.

ಆಧಾರ: ರಾಜ್ಯಗಳ ನವೋದ್ಯಮ ರ್‍ಯಾಂಕಿಂಗ್–2021, ನವೋದ್ಯಮ: ಅತ್ಯುತ್ತಮ ಪದ್ಧತಿಗಳ ಕುರಿತ ವರದಿ–2021, ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆ, ಪಿಟಿಐ



ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 164

ಭಕ್ತಪರಾಧೀನ ಮಹಾಶಿವ

ಸತಿಗೆ ಮಹಾಶಿವನು ಭಕ್ತಿಯ ಒಂಬತ್ತು ಅಂಗಗಳನ್ನು ತಿಳಿಸುತ್ತಾನೆ. ನಿತ್ಯವೂ ಸ್ಥಿರವಾದ ಮನಸ್ಸಿನಿಂದ ಶಿವಪುರಾಣವನ್ನು ಆದರವಿಟ್ಟು ಕೇಳುವುದು ‘ಶ್ರವಣ’. ಶಿವನನ್ನು ಧ್ಯಾನಿಸುತ್ತಾ, ಅವನ ಅವತಾರಾದಿ ಲೀಲಾವಿಭೂತಿಗಳನ್ನು ನಿತ್ಯವೂ ಪ್ರೀತಿಯಿಂದ ಗಟ್ಟಿಯಾಗಿ ಉಚ್ಚರಿಸುವುದು ‘ಕೀರ್ತನ’. ಶಿವನು ಸದಾ ಎಲ್ಲೆಡೆಯಲ್ಲಿಯೂ ಇರುವನೆಂದು ತಿಳಿದು, ಯಾವ ಭಯವೂ ಇಲ್ಲದೇ ಸ್ಮರಿಸುವುದು ‘ಸ್ಮರಣ’. ಪಂಚಕರ್ಮೇಂದ್ರಿಯಗಳು, ಪಂಚಜ್ಞಾನೇಂದ್ರಿಯಗಳು ಮತ್ತು ಶುದ್ಧ ಮನಸ್ಸಿನಿಂದ ಸದಾ ಶಿವನನ್ನು ಸೇವಿಸುತ್ತಾ, ಅದರಿಂದುಂಟಾಗುವ ಆನಂದಾಮೃತದಿಂದ ಸಂತೋಷಪಡುವುದೇ ‘ದಾಸ್ಯ’. ಈ ದಾಸ್ಯವು ತನಗೆ ಬಹು ಪ್ರಿಯವಾದುದು ಎನ್ನುತ್ತಾನೆ.

ಪರಮಾತ್ಮನಾದ ಶಿವನಿಗೆ ಶಕ್ತಿಗನುಸಾರವಾಗಿ ಪಾದ್ಯ ಮೊದಲಾದ ಷೋಡಶೋಪಚಾರಗಳನ್ನು ಮಾಡುವುದು ‘ಅರ್ಚನ’. ಮಂತ್ರವನ್ನುಚ್ಚರಿಸುತ್ತಾ, ಮನಸ್ಸಿನಲ್ಲಿ ಧ್ಯಾನಿಸುತ್ತಾ, ‘ಉರಸಾ ಶಿರಸಾ ಭಕ್ತ್ಯಾ ಮನಸಾ ವಚಸಾ ತಥಾ | ಪದ್ಭ್ಯಾಂ ಕರಾಭ್ಯಾಂ ಜಾನುಭ್ಯಾಂ ಪ್ರಣಾಮೋಷ್ಟಾಂಗ ಈರಿತಃ’ ಎಂದು ಹೇಳಿ ಅಷ್ಟಾಂಗಪ್ರಣಾಮಗಳನ್ನು ಮಾಡುವುದು ‘ವಂದನ’. ಒಳ್ಳೆಯದಾಗಲೀ ಕೆಡುಕಾಗಲೀ ಯಾವುದನ್ನು ಈಶ್ವರನು ಮಾಡಿಸುವನೋ ಅವೆಲ್ಲವೂ ನಮಗೆ ಒಳ್ಳೆಯದಕ್ಕಾಗಿಯೇ ಮಂಗಳಕ್ಕಾಗಿಯೇ ಎಂದು ವಿಶ್ವಾಸವಿಡುವುದು ‘ಸಖ್ಯ’. ತನ್ನ ಶರೀರ ಸೇರಿದಂತೆ ಎಲ್ಲವನ್ನೂ ಈಶ್ವರನಿಗೆ ಭಕ್ತಿಯಿಂದ ಅರ್ಪಿಸುವುದೇ ‘ಆತ್ಮಸಮರ್ಪಣ’. ಈ ಒಂಬತ್ತು ಭಕ್ತಿಯ ಅಂಗಗಳು. ತನ್ನನ್ನು ಭಕ್ತಿಯಿಂದ ಒಲಿಸಿಕೊಳ್ಳುವ ಲಕ್ಷಣಗಳು. ಇವುಗಳು ತನಗೆ ಅತಿ ಪ್ರಿಯವಾದುವು ಎನ್ನುತ್ತಾನೆ, ಪರಮಶಿವ.

ಇನ್ನು ಬಿಲ್ವಸೇವೆ ಮುಂತಾದ ಅನೇಕ ಉಪಾಂಗಗಳ ಬಗ್ಗೆ ಬೇರೆ ಬೇರೆ ಗ್ರಂಥಗಳಿಂದ ತಿಳಿದು ಅನುಷ್ಠಾನ ಮಾಡಬೇಕು. ಅಂಗ ಮತ್ತು ಉಪಾಂಗಗಳಿಂದ ಕೂಡಿದ ಶಿವಭಕ್ತಿಯು ಜ್ಞಾನವೈರಾಗ್ಯಗಳನ್ನು ಉಂಟುಮಾಡುತ್ತದೆ. ಆ ಮೂಲಕ ಮುಕ್ತಿಯನ್ನು ಕೊಡುತ್ತದೆ. ಆ ಭಕ್ತಿಯಿಂದ ಸಕಲ ಕರ್ಮಗಳ ಫಲವು ಲಭಿಸುತ್ತದೆ. ಮೂರು ಲೋಕಗಳಲ್ಲಿ ಮತ್ತು ನಾಲ್ಕು ಯುಗಗಳಲ್ಲೂ ಸಹ ಭಕ್ತಿಯಂತಹ ಸುಖಸಾಧನವಾದ ಮಾರ್ಗವು ಇನ್ನೊಂದಿಲ್ಲ. ಅದರಲ್ಲೂ ಕಲಿಯುಗದಲ್ಲಿ ಭಕ್ತಿಯೇ; ಭಗವಂತನ ಸಾಕ್ಷಾತ್ಕಾರವನ್ನುಂಟುಮಾಡುವುದು. ಅದರಂತೆ ಮಿಕ್ಕ ಯುಗಗಳಲ್ಲೂ ಭಕ್ತಿಯು ಫಲವನ್ನು ಕೊಡುವುದು. ಆ ಭಕ್ತಿಗೆ ನಾನು ಯಾವಾಗಲೂ ಅಧೀನನಾಗಿರುವೆ ಎನ್ನುತ್ತಾನೆ ಸತೀವಲ್ಲಭ.

‘ಎಲೈ ಪ್ರಿಯ ಸತೀ, ನಿನ್ನನ್ನು ಪ್ರೀತಿಸುವಷ್ಟೇ, ಭಕ್ತರನ್ನು ಸಹ ಪ್ರೀತಿಸುತ್ತೇನೆ. ನನ್ನ ಭಕ್ತರ ರಕ್ಷಣೆಗೆ ಸದಾ ಸನ್ನದ್ಧನಾಗಿರುತ್ತೇನೆ. ನನ್ನ ಭಕ್ತರನ್ನು ಕೆಣಕುವವರನ್ನು ನಾನು ಸುಮ್ಮನೆ ಬಿಡುವುದಿಲ್ಲ. ನನ್ನ ಭಕ್ತನನ್ನು ಹಿಂಸಿಸಿದ ಯಮನನ್ನೇ ನನ್ನ ಮೂರನೇ ಕಣ್ಣಿನಿಂದ ಸುಟ್ಟು ಭಸ್ಮ ಮಾಡಿದ್ದೇನೆ. ಭಕ್ತನ ರಕ್ಷಣೆಗಾಗಿ ಸೂರ್ಯನ ಮೇಲೇರಿ ಹೋಗಿ ತ್ರಿಶೂಲದಿಂದ ಇರಿದಿದ್ದೇನೆ. ನನ್ನ ಭಕ್ತನಾದ ರಾಮನಿಗಾಗಿಯೇ ರಾವಣನನ್ನು ರಕ್ಷಿಸಲಿಲ್ಲ. ಭಕ್ತನಿಗಾಗಿಯೇ ವ್ಯಾಸಮುನಿಯನ್ನು ನಂದಿಯ ಮೂಲಕ ಕಾಶಿಯಿಂದ ಓಡಿಸಿದೆ. ನಾನು ಸದಾ ಭಕ್ತಿಗೆ ಅಧೀನ’ ಎನ್ನುತ್ತಾನೆ ಶಿವ.

ಶಿವನ ಮಾತು ಕೇಳಿ ಸಂತುಷ್ಟಳಾದ ಸತೀದೇವಿ, ಜೀವಾತ್ಮರನ್ನು ಉದ್ಧರಿಸುವ ಭಕ್ತಿಕಾಂಡದ ಶಾಸ್ತ್ರ, ಯಂತ್ರಶಾಸ್ತ್ರ, ಮಂತ್ರಶಾಸ್ತ್ರ ಮತ್ತು ಅವುಗಳ ಮಹಾತ್ಮೆ ಹಾಗೂ ಇತರೆ ಧರ್ಮಶಾಸ್ತ್ರಗಳನ್ನು ತಿಳಿಸಬೇಕೆಂದು ಮತ್ತೆ ಕೋರುತ್ತಾಳೆ. ಆಗ ಮಹಾಶಿವನು ಮುಕ್ತಿ ಹೊಂದುವ ಭಕ್ತಿ ಮಾರ್ಗಗಳನ್ನ ಹೇಳುತ್ತಾನೆ. ಆಯಾಯಾ ದೇವತೆಗಳ ಯಂತ್ರಶಾಸ್ತ್ರ, ಮಂತ್ರಶಾಸ್ತ್ರ, ಪಂಚಾಯತನ, ಮಹಾತ್ಮೆಗಳನ್ನು ವರ್ಣಿಸಿ, ಧರ್ಮಶಾಸ್ತ್ರ, ಇತಿಹಾಸ, ಭಕ್ತರ ಮಹಾತ್ಮೆ, ರಾಜಧರ್ಮ, ಸುತಧರ್ಮ, ಸ್ತ್ರೀಧರ್ಮವನ್ನಲ್ಲದೆ, ವೈದ್ಯಶಾಸ್ತ್ರ, ಜ್ಯೋತಿಶಾಸ್ತ್ರ, ಸಾಮುದ್ರಿಕಶಾಸ್ತ್ರ ಮುಂತಾದ ಜನರಿಗೆ ಅನುಕೂಲವಾಗುವಂಥ ಅನೇಕ ಶಾಸ್ತ್ರಗಳನ್ನು ಸತೀದೇವಿಗೆ ವಿಸ್ತಾರವಾಗಿ ತಿಳಿಸುತ್ತಾನೆ. ಇದನ್ನು ಕೇಳಿದ ಸತೀದೇವಿ ಧನ್ಯತಾಭಾವದಿಂದ ಪತಿ ಪರಮೇಶ್ವರನಿಗೆ ಪ್ರೀತಿಯಿಂದ ಪ್ರಣಾಮಗಳನ್ನು ಸಲ್ಲಿಸುತ್ತಾಳೆ.

ಹೀಗೆ ಶಿವ–ಸತೀ –ದಾಂಪತ್ಯದ ಕಥೆ ಮತ್ತು ಲೀಲಾವಿನೋದಗಳನ್ನು ನಾರದನಿಗೆ ಹೇಳುತ್ತಾನೆ, ಬ್ರಹ್ಮ. ಮೂರು ಲೋಕಗಳಿಗೂ ಸುಖವನ್ನುಂಟುಮಾಡುವ ಸರ್ವಜ್ಞರು, ಲೋಕೋಪಕಾರಕ್ಕಾಗಿ ಸಗುಣರೂಪವನ್ನು ಧರಿಸಿ ಪರಬ್ರಹ್ಮಸ್ವರೂಪಿಗಳೂ ಆದಂಥ ಸತೀಪರಮೇಶ್ವರರು ಕೈಲಾಸದಲ್ಲಿ, ಹಿಮತ್ಪರ್ವತದಲ್ಲಿ ಸಂತೋಷದಿಂದ ವಿಹರಿಸಿದರು ಎಂಬಲ್ಲಿಗೆ ಸತೀಖಂಡದ ಇಪ್ಪತ್ತಮೂರನೇ ಅಧ್ಯಾಯ ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ದೊಡ್ಡ ಗುಂಪೊಂದು ಘೋಷಣೆಗಳನ್ನು ಕೂಗುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಮಧ್ಯಪ್ರದೇಶದ ಕಟ್ನಿ ಜಿಲ್ಲೆಯ ಚಾಕ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ವಾಜಿದ್ ಎಂಬ ಮುಸ್ಲಿಂ ಅಭ್ಯರ್ಥಿ ಗೆದ್ದಿದ್ದಾರೆ. ಗೆಲುವಿನ ಸಂಭ್ರಮಾಚರಣೆ ವೇಳೆ ಸ್ಥಳೀಯರು ‘ಪಾಕಿಸ್ತಾನ ಜಿಂದಾಬಾದ್’ ಎಂದು ಘೋಷಣೆ ಕೂಗಿದ್ದಾರೆ ಎಂಬ ವಿವರಣೆಯನ್ನು ಈ ವಿಡಿಯೊ ಜೊತೆ ನೀಡಲಾಗಿದೆ. ದೈನಿಕ್ ಭಾಸ್ಕರ್, ಜೀ ನ್ಯೂಸ್ ಮುಂತಾದ ವೆಬ್‌ಸೈಟ್‌ಗಳು ಕೂಡಾ ಇದೇ ವಿವರಣೆ ಜೊತೆ ಈ ವಿಡಿಯೊವನ್ನು ಹಂಚಿಕೊಂಡಿವೆ.



ಈ ವಿಡಿಯೊ ಜೊತೆ ನೀಡಿರುವ ಮಾಹಿತಿಯು ಸತ್ಯಕ್ಕೆ ದೂರವಾಗಿದೆ ಎಂದು ‘ದಿ ಲಾಜಿಕಲ್ ಇಂಡಿಯನ್’ ವೇದಿಕೆಯು ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ವೈರಲ್ ಆಗಿರುವ ವಿಡಿಯೊದಲ್ಲಿರುವ ಘೋಷಣೆಗಳನ್ನು ಸೂಕ್ಷ್ಮವಾಗಿ ಆಲಿಸಿದಾಗ ‘ಜೀತ್ ಗಯಾ ಭಾಯ್ ಜೀತ್ ಗಯಾ’ ಮತ್ತು ‘ಜಿಂದಾಬಾದ್, ಜಿಂದಾಬಾದ್’ ಎಂಬ ಘೋಷಣೆಗಳು ಕೇಳುತ್ತವೆ. ಇದೇ ಘಟನೆಗೆ ಸಂಬಂಧಿಸಿದ ಇನ್ನೂ ಕೆಲವು ವಿಡಿಯೊಗಳಲ್ಲಿ ‘ವಾಜಿದ್ ಬಾಯಿ ಜೀತ್ ಗಯಾ’ ಎಂಬ ಘೋಷಣೆಯೂ ಕೇಳುತ್ತದೆ. ಚಾಕ ಗ್ರಾಮದ ಜನರು ದೇಶ ವಿರೋಧಿ ಘೋಷಣೆಗಳನ್ನು ಕೂಗಿಲ್ಲ ಎಂದು ‘ದಿ ಲಾಜಿಕಲ್ ಇಂಡಿಯನ್’ ಫ್ಯಾಕ್ಟ್‌ಚೆಕ್ ವಿವರಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಎರಡು ಲೆಕ್ಕಗಳು

ನರನೊಂದುವೆವಹಾರಕೆರಡಾಯವೆಯ ಲೆಕ್ಕ|
ಹೊರಗಣನುಭೋಗಕೊಂದೊಳನೀತಿಗೊಂದು||
ವರಮಾನ ದೇಹಕಾದೊಡೆ ಮಾನಸಕದೇನು?|
ಪರಿಕಿಸಾ ಲೆಕ್ಕವನು – ಮಂಕುತಿಮ್ಮ ||664||

ಪದ-ಅರ್ಥ: ನರನೊಂದುವೆವಹಾರಕೆರಡಾಯವೆಯ = ನರನ + ಒಂದು + ವೆವಹಾರಕೆ (ವ್ಯವಹಾರಕ್ಕೆ) + ಎರಡು + ಆಯ + ವೆಯ (ವ್ಯಯ), ಹೊರಗಣನುಭೋಗಕೊಂದೊಳನೀತಿಗೊಂದು = ಹೊರಗಣ + ಅನುಭೋಗಕೊಂದು + ಒಳನೀತಿಗೊಂದು, ಮಾನಸಕದೇನು = ಮಾನಸಕೆ (ಮನಸ್ಸಿಗೆ) + ಅದೇನು, ಪರಿಕಿಸಾ = ಪರಿಕಿಸು (ಪರೀಕ್ಷಿಸು) + ಆ.

ವಾಚ್ಯಾರ್ಥ: ಮನುಷ್ಯನ ಒಂದು ವ್ಯವಹಾರಕ್ಕೆ ಎರಡು ಲೆಕ್ಕಗಳಿವೆ. ಒಂದು ಆದಾಯ-ಆಯ, ಮತ್ತೊಂದು ವ್ಯಯ-ವೆಚ್ಚ. ಹೊರಗಿನ ಅನುಭೋಗಕ್ಕೊಂದು ಲೆಕ್ಕ, ಒಳನೀತಿಗೊಂದು. ವರಮಾನ ದೇಹಕ್ಕಾದರೆ ಅದರ ಪರಿಣಾಮ ಮನಸ್ಸಿನ ಮೇಲೆ ಏನು? ಆ ಲೆಕ್ಕವನ್ನು ಸರಿಯಾಗಿ ತಿಳಿದುಕೋ.

ವಿವರಣೆ: ಮನುಷ್ಯನ ಪ್ರತಿಯೊಂದು ವ್ಯವಹಾರದಲ್ಲಿ ಲಾಭ-ನಷ್ಟದ ಚಿಂತನೆ ಇದ್ದೇ ಇರುತ್ತದೆ. ಅದು ಹಣದ ವ್ಯವಹಾರ ಮಾತ್ರವಲ್ಲ. ಹಣದ ವ್ಯವಹಾರದಲ್ಲಂತೂ ಅದು ತುಂಬ ಸ್ಪಷ್ಟವಾಗಿರುತ್ತದೆ. ಎಷ್ಟು ಹಣ ಲಾಭವಾಯಿತು, ನಷ್ಟದ ಮೊತ್ತ ಎಷ್ಟು ಎನ್ನುವುದನ್ನು ಅಳೆಯುವುದಕ್ಕೆ ಹಣದ ಮಾಪನವಿದೆ. ಬದುಕಿನ ವ್ಯಾಪಾರದಲ್ಲಿ ಎಲ್ಲವೂ ಹಣಕ್ಕಾಗಿಯೇ ಮಾಡಿದ ವ್ಯವಹಾರಗಳಲ್ಲ. ಪ್ರತಿಯೊಂದು ಅನುಭವ ದೇಹದ ಮೇಲಾಗುತ್ತದೆ. ನಾವು ನೋಡಿದ ಸ್ಥಳಗಳು, ಕೇಳಿದ ಸಂಗೀತ, ಸವಿದ ಊಟ, ಮುಟ್ಟಿದ ಸ್ಪರ್ಶ, ಮೂಸಿದ ಸುಗಂಧ ಇವೆಲ್ಲ ಪಂಚೇಂದ್ರಿಯಗಳಿಂದ ದೇಹಕ್ಕೆ ದೊರೆತ ಅನುಭವಗಳು. ಇವುಗಳಲ್ಲಿಯೂ ಎರಡು ಲೆಕ್ಕಗಳಿವೆ. ಪಡೆದ ಸುಖಾನುಭವ ಆಯವಾದರೆ, ದುಃಖದ ಅನುಭವ ವ್ಯಯವಾಗುತ್ತದೆ. ಹಾಗಾದರೆ ದೇಹಕ್ಕೆ ಸುಖವಾದದ್ದೆಲ್ಲ ಮನಸ್ಸಿಗೂ ಸುಖವೆ? ಈ ಪ್ರಶ್ನೆಯನ್ನೇ ಕಗ್ಗ ಕೇಳುತ್ತದೆ. ದೇಹಕ್ಕೆ ಲಾಭವಾದರೆ ಮನಸ್ಸಿಗೆ ಅದರಿಂದೇನು?

ದುರ್ಯೋಧನ ಮೋಸದಿಂದ ದಾಯಾದಿಗಳಾದ ಪಾಂಡವರನ್ನು ಜೂಜಿನಲ್ಲಿ ಸೋಲಿಸಿ ಕಾಡಿಗೆ ಕಳುಹಿಸಿದ. ಮುಂದಿನ ಹದಿಮೂರು ವರ್ಷಗಳ ಕಾಲ ಯಾವ ಅಡೆತಡೆಯೂ ಇಲ್ಲದೆ ಕುರುರಾಜ್ಯ ಚಕ್ರವರ್ತಿಯಾದ. ಅವನ ಭೋಗಭಾಗ್ಯಗಳಿಗೆ ಏನು ಕೊರತೆ? ಅವನ ದೇಹಕ್ಕೆ ಬೇಕಾದ ಅನುಕೂಲತೆಗಳೆಲ್ಲ ಸಮೃದ್ಧವಾಗಿದ್ದವು. ಆದರೆ ಮನಸ್ಸು? ಒಳಗೆ ಕೊತಕೊತನೆ ಕುದಿಯುತ್ತಿತ್ತು. ಕಾಡಿನಲ್ಲಿದ್ದ ಪಾಂಡವರು ಪಡುವ ಕಷ್ಟವನ್ನು ಕಣ್ಣಾರೆ ನೋಡಬೇಕು, ಅವರ ಹೊಟ್ಟೆ ಉರಿಸಬೇಕು ಎಂದು ತನ್ನ ಹೊಟ್ಟೆ ಉರಿಸಿಕೊಂಡ! ಅರಮನೆಯ ಸುಖಭೋಗದಲ್ಲಿದ್ದರೂ ಪಾಂಡವರ ಚಿಂತೆಯ ನರಳಿಕೆ ಅವನ ಮನಸ್ಸನ್ನು ಹಿಂಡಿತು. ದೇಹ ಸ್ವರ್ಗದಲ್ಲಿ, ಮನ ನರಕದಲ್ಲಿ! ರಾಜ ಡಂಕನ್‌ನ್ನು ಕೊಂದ ಮ್ಯಾಕ್‌ಬೆಥ್ ರಾಜನಾದರೂ, ಅಪರಾಧಿಭಾವ ಅವನನ್ನು ಹಣ್ಣುಮಾಡಿತು. ದೇವೇಂದ್ರನೊಡನೆ ದೇಹಸುಖ ಪಡೆದ ಅಹಲ್ಯೆ ಮುಂದೆ ಶತಮಾನಗಳ ಕಾಲ ಪಾಪಪ್ರಜ್ಞೆಯಲ್ಲಿ ಕುದಿದು ಕಲ್ಲಾದಳು.

ಕಗ್ಗ ತಿಳಿಹೇಳುತ್ತದೆ, ನಮಗೆ ಎರಡು ಲೆಕ್ಕಗಳಿವೆ. ಹೊರಗಿನ ಅನುಭವಕ್ಕೊಂದು, ಒಳಗಿನ ನೀತಿಗೊಂದು. ದೇಹದ ಲಾಭಕ್ಕೋಸ್ಕರ ನಾವು ಏನೆಲ್ಲ ಮಾಡುತ್ತೇವೆ, ಆದರೆ ಅದು ಮನಸ್ಸಿಗೂ ಲಾಭವಾದೀತೇ? ಮನಸ್ಸಿಗೆ ಲಾಭವಾಗದಿದ್ದರೆ, ಮನಸ್ಸು ಆನಂದದಲ್ಲಿ ನೆಲೆ ನಿಲ್ಲದಿದ್ದರೆ ದೇಹದ ಲಾಭದಿಂದ ಏನು ಪ್ರಯೋಜನ? ಆದ್ದರಿಂದ ನಮ್ಮ ವ್ಯವಹಾರಗಳಲ್ಲಿ ದೇಹಕ್ಕೂ, ಮನಸ್ಸಿಗೂ ಸಂತೋಷವಾಗುವುದನ್ನು ಚಿಂತಿಸಬೇಕು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಜುಲೈ 5, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ಷಷ್ಠಿ ಗಂ. 19-29 ನಕ್ಷತ್ರ: ಪೂರ್ವಫಲ್ಗುನಿ ಗಂ 10-30 ಯೋಗ: ವ್ಯತೀಪಾತ ಗಂ 12-15
ಕರಣ: ಕೌಲವ ಗಂ. 07-05, ಮಿಥುನ ಮಾಸದ 20 ನೇ ದಿನ.
ರಾಹುಕಾಲ: ಮಧ್ಯಾಹ್ನ 03:00 – 04:30
ಸೂರ್ಯೋದಯ: 06-12 ಸೂರ್ಯಾಸ್ತ: 06-58
ಮುಸ್ಲಿಂ ದಿನಾಂಕ: 05 ಜುಲ್‌ಹಿಜಾ
ದಿನ ವಿಶೇಷ: ಕುಮಾರ ಷಷ್ಠಿ (ವ್ರತ)
ಅದೃಷ್ಟ ಸಂಖ್ಯೆ: 6, 11

ಮೇಷ: ವಿದ್ಯಾರ್ಥಿಗಳಿಗೆ ಶ್ರೇಯಸ್ಸು, ಮೇಧಾಶಕ್ತಿ ಹೆಚ್ಚಲಿದೆ. ಆಟಿಕೆಗಳ ಅಥವಾ ಕ್ರೀಡಾ ವಸ್ತುಗಳ ವ್ಯಾಪಾರಿಗಳಿಗೆ ಲಾಭದಾಯಕ ಬೆಳವಣಿಗೆ. ಕೃಷಿ ಕೆಲಸದಲ್ಲಿ ಆಯುಧಗಳನ್ನು ಬಳಸುವಾಗ ಜಾಗ್ರತೆ ಇರಲಿ.

ವೃಷಭ: ಕೈಗೂಂಡ ಕಾರ್ಯ ಸಫಲ. ಆರೋಗ್ಯವು ಆಹಾರದಲ್ಲಿ ಪಥ್ಯ ಮಾಡುವುದರ ಪ್ರಭಾವದಿಂದ ಸುಧಾರಣೆಗೆ ಬರುತ್ತದೆ. ಪಡೆದ ಸಾಲವನ್ನು ಮಾತಿನಂತೆ ಮರುಪಾವತಿ ಮಾಡುವುದು ಗೌರವ ಕಾಪಾಡುತ್ತದೆ.

ಮಿಥುನ: ಇತರರ ಕಷ್ಟ-ಸುಖಗಳಿಗೆ ನೆರವಾಗುವ ಮನೋಭಾವ ಬೆಳೆಸಿಕೊಳ್ಳಿ. ವೈದ್ಯರಿಗೆ ವೃತ್ತಿಯಲ್ಲಿ ಹೆಚ್ಚಿನ ಸಮಯ ಕಳೆಯಬೇಕಾದ ಅನಿವಾರ್ಯತೆ. ಅನಿರೀಕ್ಷಿತವಾಗಿ ತೋರಿಬರುವ ಅಡ್ಡಿ-ಆತಂಕಗಳಿಗೆ ಹೆದರಬೇಡಿ.

ಕರ್ಕಾಟಕ: ಸರ್ಕಾರಿ ಕಚೇರಿಗಳಿಗೆ ಅಲೆದಾಟವು ಹೆಚ್ಚಾಗಿ, ಹಣದ ಖರ್ಚಿಗೆ ಕಾರಣವಾದೀತು. ಒಂಟಿತನ ಹೋಗಲಾಡಿಸಿಕೊಳ್ಳಲು ಕೆಲಸಗಳತ್ತ ಮನಸ್ಸು ಹರಿಸುವ ಪ್ರಯತ್ನ ಮಾಡಿ. ರಾಜಕೀಯ ಭವಿಷ್ಯಕ್ಕೆ ಮೋಡಕವಿದಂತೆ ಆಗುತ್ತದೆ.

ಸಿಂಹ: ಯಾವುದೇ ಸಂಕೋಚವಿಲ್ಲದೆ ನೂತನ ಕಾರ್ಯಭಾರವನ್ನು ಹೆಗಲಿಗೇರಿಸಿಕೊಳ್ಳಿ. ಏಕೆಂದರೆ ನಿಮ್ಮ ಮೇಲಿರುವ ನಂಬುಗೆ ಮತ್ತು ವಿಶ್ವಾಸದಿಂದಾಗಿ ಈ ಅವಕಾಶಗಳು ನಿಮ್ಮದಾಗಲಿದೆ. ದೇಹಾಲಸ್ಯ ನೀಗುವುದು.

ಕನ್ಯಾ: ನಿಮ್ಮ ಆಲಸ್ಯ ನಿಮ್ಮ ಕುಟುಂಬದ ಅಭಿವೃದ್ಧಿಯನ್ನು ಹಾಳು ಮಾಡುತ್ತದೆ. ಆದ್ದರಿಂದ ಉತ್ಸಾಹಭರಿತರಾಗಿರಿ. ನಿಮ್ಮಲ್ಲಿರುವ ಅಗಾಧ ಜ್ಞಾನಶಕ್ತಿ ಹೊರ ಹೊಮ್ಮಲು ಸೂಕ್ತ ಕಾಲ. ಕೆಲಸದಲ್ಲಿ ಶ್ರದ್ಧೆ ಇರಲಿ.

ತುಲಾ: ನಿಮ್ಮ ನೆಚ್ಚಿನ ಬರವಣಿಗೆ ಹವ್ಯಾಸ ಪುನಃ ಆರಂಭಗೊಳ್ಳುವುದು. ಮಹಿಳೆಯರಿಗೆ ಉಪಯೋಗಕ್ಕೆ ಬಾರದ ವಿಚಾರದ ಬಗೆಗಿನ ಚಿಂತನೆಯು ಆರೋಗ್ಯವನ್ನು ಹಾಳು ಮಾಡುತ್ತದೆ.

ವೃಶ್ಚಿಕ: ವಾದವಿವಾದಗಳಿಗೆ ತೆರೆ ಎಳೆಯುವ ಪ್ರಯತ್ನ ಮಾಡಿ. ನಿಮ್ಮ ಸುತ್ತ-ಮುತ್ತಲಿನವರ ಬಗ್ಗೆ ನೀವು ಮೌನದಿಂದಿರುವುದು ನಿಮ್ಮ ವ್ಯಕ್ತಿತ್ವಕ್ಕೆ ಶೋಭೆ ತರುವುದು.

ಧನು: ವ್ಯಾಪಾರ ವ್ಯವಹಾರಗಳಲ್ಲಿ ತುಸು ಚೇತರಿಕೆ ಕಂಡು ಮುಂದುವರಿಯಲು ಸಹಾಯವಾಗುತ್ತದೆ. ಕೆಲಸ ಮತ್ತು ದುಡಿಮೆ ಸಮೃದ್ಧಿಯಾಗಿ ಇಲ್ಲವಾದರೂ ನೆಮ್ಮದಿಗೆ ಕೊರತೆ ಕಾಣುವುದಿಲ್ಲ. ಹಂತ ಹಂತವಾಗಿ ಪರಿಸ್ಥಿತಿ ಸುಧಾರಿಸಲಿದೆ.

ಮಕರ: ಹೊಸ ಹುದ್ದೆಯಲ್ಲಿ ಗೌರವ, ಸಂತೋಷ ಮತ್ತು ಹೊಸ ರೀತಿಯ ಅನುಭವ ದೊರೆಯುವುದು. ಮನೆಯಲ್ಲಿ ಗುರು-ಹಿರಿಯರ ಶುಭ ಆಶೀರ್ವಾದದಿಂದ ಮಂಗಳ ಕೆಲಸ ನಡೆಯಲಿದೆ.

ಕುಂಭ: ನಿಮ್ಮ ಸಮಸ್ಯೆಗಳು ತನ್ನಂತಾನೆಯೇ ಬಗೆಹರಿಯುವುದು. ಎಲೆಕ್ಟ್ರಾನಿಕ್ ಕ್ಷೇತ್ರದಲ್ಲಿರುವವರಿಗೆ ವ್ಯಾಪಾರ ವ್ಯವಹಾರಗಳಲ್ಲಿ ಹೇಳುವ ಲಾಭವಿಲ್ಲದ್ದಿದ್ದರೂ, ಹೆದರುವ ಅವಶ್ಯಕತೆ ಇರುವುದಿಲ್ಲ. ವೈವಾಹಿಕ ಜೀವನದಲ್ಲಿ ನೆಮ್ಮದಿ.

ಮೀನ: ತೆರಿಗೆ ಅಧಿಕಾರಿ ಸಿಬ್ಬಂದಿ ವರ್ಗದವರಿಗೆ ಕೆಲಸದಲ್ಲಿ ಒತ್ತಡ ಎದುರಾಗುವುದು. ಸಂಸ್ಥೆಯೊಂದರ ಸಲಹೆಗಾರರಾಗಿ ನೇಮಕಗೊಳ್ಳುವ ಸಂಭವವಿದೆ. ಶುಭ ಮತ್ತು ಅಶುಭದ ಮಿಶ್ರಣ ಫಲ ಅನುಭವಿಸುವಂತಾಗಲಿದೆ.

ಪದಬಂಧ 5009

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆನೆಗೂ ಆಡಿಗೂ ಇರುವ ವ್ಯತ್ಯಾಸ (6)
4.ಸಹಿಯೊಳಗೆ ಮುಷ್ಕರ ಹೂಡುವವನು ಕಾಣುತ್ತಿರುವನೇ (4)
5.ಸುಲಭವಲ್ಲದುದು ಇದು (3)
7.ಕಡಲ ತಡಿಯಲ್ಲಿದ್ದಾಗ ಉಂಟಾದ ನವೆ! (3)
10.ಒನಪು ತೋರಿದಾಗ ಬಂದಿರುವ ಸ್ಮರಣೆ (3)
12.ದುರಸ್ತಿಯನ್ನು ಹೀಗೆನ್ನಿ (3)
13.ಅದೇ ತಾನೆ ಮೂಡುತ್ತಿರುವ ಸೂರ್ಯ (4)
15.ಯಾತ್ರಿಕರು ಇಳಿದುಕೊಳ್ಳಲು ಮಾಡಿರುವ ವಸತಿ (6)

ಮೇಲಿಂದ ಕೆಳಕ್ಕೆ
1.ಜಗಲಿಯ ಹತ್ತಿರ ಕಾಣಿಸಿದ ಹೆಬ್ಬಾವು! (4)
2.ರಭಸದಲ್ಲೇ ಹರಿಯುತ್ತಿರುವ ದ್ರವ! (2)
3.ಬರದಲ್ಲಿ ಹೊರಹಾಕುವಿಕೆ! (4)
6.ಹಜಾರವನ್ನು ಹೀಗೂ ಹೇಳುವರು (4)
7.ಕದಕ್ಕೆ ತಾಕಿಸಿರುವ ಕೆನ್ನೆ! (3)
8.ಕಾರಿನಲ್ಲಿ ಹೋಗಿ ತಂದಿರುವ ಕಾಯಿಪಲ್ಲೆ (4)
9.ಜಂಬೂಕದ ಲಾಂಗೂಲ (4)
11.ಓಡುತ್ತಾ ಹೋಗಿ ಸುದ್ದಿ ಮುಟ್ಟಿಸುವವನು (4)
14.ಪವಿತ್ರವಾಗಿರುವ ಬ್ರಾಹ್ಮಣ! (2)

5008ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಶರೀರತ್ಯಾಗ 4.ಸಮಸ್ಯೆ 5.ಮಜೂರಿ 6.ಕಿಟಕಿ 7.ಗೆಣಸು 9.ಹಣ 10.ಹಸು 12.ಪರಮ 14.ನದವ 15.ಕರೀಸ 16.ವಿಧುರ 17.ವಚನಭ್ರಷ್ಟ

ಮೇಲಿಂದ ಕೆಳಕ್ಕೆ: 1.ಶಸ್ತ್ರಾಗಾರ 2.ರವಿಕಿರಣ 3.ಗಮಕಿ 4.ಸರಿಗೆ 8.ಣಗುಸು 9.ಹಗುರ 10.ಹಯವದನ 11.ದಷ್ಟಪುಷ್ಟ 13.ಮಕರ 14.ನಸವ

ಸುಡೊಕು 5395

		7		8			2	
	3						7	8
6		5		9		4		
	2		6				3	
5		3	2		1	8		9
	1				9		4	2
	6			2				4
3		8	9				5	
	5				4			1

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5394 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

ಸರ್ಕಾರದ ಪರವಾಗಿ 164, ವಿರುದ್ಧ 99 ಮತ ಚಲಾವಣೆ • ಕಾಂಗ್ರೆಸ್‌, ಎನ್‌ಸಿಪಿಯ ಹಲವು ಶಾಸಕರು ಗೈರು

ಮಹಾರಾಷ್ಟ್ರ: ವಿಶ್ವಾಸಮತ ಗೆದ್ದ ಶಿಂಧೆ



ಮಹಾರಾಷ್ಟ್ರದ ಮುಖ್ಯಮಂತ್ರಿ ಏಕನಾಥ ಶಿಂಧೆ ಮತ್ತು ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್‌ ಅವರು ವಿಶ್ವಾಸಮತ ಗೆದ್ದ ಬಳಿಕ ವಿಜಯದ ಸಂಕೇತ ತೋರಿಸಿದರು —ಪಿಟಿಐ ಚಿತ್ರ

ಮುಂಬೈ (ಪಿಟಿಐ): ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂಧೆ ಅವರು ವಿಧಾನಸಭೆಯಲ್ಲಿ ಸೋಮವಾರ ವಿಶ್ವಾಸ ಮತ ಗೆದ್ದಿದ್ದಾರೆ. ಶಿವಸೇನಾ ಮುಖ್ಯಸ್ಥ ಉದ್ಧವ್‌ ಠಾಕ್ರೆ ವಿರುದ್ಧ ಬಂಡಾಯ ಎದ್ದ ಶಿಂಧೆ ಅವರು ಬಿಜೆಪಿ ಬೆಂಬಲದಲ್ಲಿ ಜೂನ್‌ 30ರಂದು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದರು.

288 ಸದಸ್ಯ ಬಲದ (ಈಗ 287 ಸದಸ್ಯರು ಇದ್ದಾರೆ) ವಿಧಾನಸಭೆಯಲ್ಲಿ ಶಿಂಧೆ ಅವರ ಪರವಾಗಿ 164 ಮತಗಳು ಚಲಾವಣೆ ಆದವು. ವಿಶ್ವಾಸಮತದ ವಿರುದ್ಧ 99 ಮತಗಳು ಚಲಾವಣೆ ಆಗಿವೆ. ಒಟ್ಟು 263 ಶಾಸಕರು ಮತ ಚಲಾಯಿಸಿದ್ದಾರೆ.

ಶಿಂಧೆ ಮತ್ತು ದೇವೇಂದ್ರ ಫಡಣವೀಸ್‌ ನೇತೃತ್ವದ ಸರ್ಕಾರಕ್ಕೆ ಸಿಕ್ಕ ಎರಡನೇ ಮಹತ್ವದ ಗೆಲುವು ಇದು. ಭಾನುವಾರ ನಡೆದ ಸ್ಪೀಕರ್‌ ಚುನಾವಣೆಯಲ್ಲಿ ಬಿಜೆಪಿ ಶಾಸಕ ರಾಹುಲ್‌ ನಾರ್ವೇಕರ್‌ ಗೆದ್ದಿದ್ದಾರೆ. ರಾಹುಲ್‌ ಅವರಿಗೆ 164 ಮತಗಳು ಸಿಕ್ಕಿದ್ದವು. ಮಹಾ ವಿಕಾಸ್‌ ಆಘಾಡಿಯ ಅಭ್ಯರ್ಥಿ ರಾಜನ್‌ ಸಲ್ವಿ ಅವರಿಗೆ 107 ಮತಗಳು ಸಿಕ್ಕಿದ್ದವು.

ಶಿವಸೇನಾ ನಾಯಕತ್ವದ ವಿರುದ್ಧ ಕಳೆದ ತಿಂಗಳು ಬಂಡಾಯ ಎದ್ದ ಶಿಂಧೆ ಅವರಿಗೆ ಈಗ ಶಿವಸೇನಾದ 40 ಶಾಸಕರ ಬೆಂಬಲ ಇದೆ. ಪಕ್ಷದಿಂದ ಆಯ್ಕೆಯಾದ ಶಾಸಕರ ಪೈಕಿ ಮೂರನೇ ಎರಡಕ್ಕೂ ಹೆಚ್ಚು ಶಾಸಕರ ಬೆಂಬಲ ಇದ್ದರೆ ಪಕ್ಷಾಂತರ ನಿಷೇಧ ಕಾಯ್ದೆ ಅನ್ವಯ ಆಗುವುದಿಲ್ಲ. ಶಿಂಧೆ ಅವರಿಗೆ ಮೂರನೇ ಎರಡಕ್ಕೂ ಹೆಚ್ಚು ಶಾಸಕರ ಬೆಂಬಲ ಇದೆ.

ಇದಕ್ಕೂ ಹಿಂದೆ ಮುಖ್ಯಮಂತ್ರಿಯಾಗಿದ್ದ ಉದ್ಧವ್‌ ಠಾಕ್ರೆ ಅವರಿಗೆ ಶಿಂಧೆ ಬಂಡಾಯದಿಂದಾಗಿ ಬಹುಮತ ನಷ್ಟವಾಗಿತ್ತು. ಹಾಗಾಗಿ, ಅವರು ಜೂನ್‌ 29ರಂದು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಶಿವಸೇನಾ–ಎನ್‌ಸಿಪಿ–ಕಾಂಗ್ರೆಸ್‌ ಜತೆಯಾಗಿದ್ದ ಮಹಾ ವಿಕಾಸ ಆಘಾಡಿ ಸರ್ಕಾರ ಪತನವಾಗಿತ್ತು.

‘ನನ್ನನ್ನು (ಹಿಂದೆ) ಹೇಗೆ ನಡೆಸಿಕೊಳ್ಳಲಾಗಿದೆ ಎಂಬುದಕ್ಕೆ ಸಾಕ್ಷಿಯಾದ ಜನರು ಈ ಸದನದಲ್ಲಿ ಇದ್ದಾರೆ. ದೀರ್ಘಕಾಲ ನನ್ನನ್ನು ದಮನಿಸಲಾಗಿತ್ತು’ ಎಂದು ಶಿಂಧೆ ಅವರು ಸದನದಲ್ಲಿ ಹೇಳಿದರು. ಆದರೆ ಅದನ್ನು ಅವರು ವಿವರಿಸಲಿಲ್ಲ.


ಸದನದಲ್ಲಿ ಮಾತನಾಡಿದ ದೇವೇಂದ್ರ ಫಡಣವೀಸ್‌ ಅವರು ಕೆಲವು ವರ್ಷಗಳಲ್ಲಿ ರಾಜ್ಯದಲ್ಲಿ ನಾಯಕತ್ವದ ಕೊರತೆ ಇತ್ತು ಎಂದರು. ಈಗ ಸದನದಲ್ಲಿ ಇಬ್ಬರು (ಶಿಂಧೆ ಮತ್ತು ಫಡಣವೀಸ್‌) ನಾಯಕರು ಇದ್ದಾರೆ. ಅವರು ಜನರಿಗೆ ಸದಾ ಲಭ್ಯ ಇರಲಿದ್ದಾರೆ ಎಂದರು.

ಸೇನಾ ಶಾಸಕ ಸಂತೋಷ್‌ ಬಾಂಗರ್‌ ಅವರು ವಿಶ್ವಾಸಮತದ ಮೇಲಿನ ಮತದಾನಕ್ಕೂ ಮುನ್ನ ಶಿಂಧೆ ಅವರ ಪಾಳಯ ಸೇರಿಕೊಂಡರು. ಹೀಗಾಗಿ ಶಿಂಧೆ ಅವರನ್ನು ಬೆಂಬಲಿಸುವ ಶಿವಸೇನಾ ಶಾಸಕರ ಸಂಖ್ಯೆ 40ಕ್ಕೆ ಏರಿಕೆಯಾಯಿತು. ಶಿಂಧೆ ಮತ್ತು ಇತರ ಶಾಸಕರು ಗುವಾಹಟಿಯಲ್ಲಿ ತಂಗಿದ್ದಾಗ ಮರಳಿ ಬರುವಂತೆ ಬಾಂಗರ್‌ ವಿನಂತಿಸಿಕೊಂಡಿದ್ದರು.

ಹಲವರು ಗೈರುಹಾಜರು: ಮೂವರು ಶಾಸಕರು ಮತದಾನದಿಂದ ದೂರ ಉಳಿದರು. 20 ಶಾಸಕರು ಸದನಕ್ಕೆ ಗೈರುಹಾಜರಾಗಿದ್ದರು. ಅವರಲ್ಲಿ ಹೆಚ್ಚಿನವರು ಕಾಂಗ್ರೆಸ್‌ ಮತ್ತು ಎನ್‌ಸಿಪಿಯವರು. ಮಾಜಿ ಸಚಿವರಾದ ಕಾಂಗ್ರೆಸ್‌ನ ಅಶೋಕ್‌ ಚವಾಣ್‌,ವಿಜಯ ವಡೆಟ್ಟಿವರ್‌ ಅವರೂ ಗೈರುಹಾಜರಾದವರಲ್ಲಿ ಸೇರಿದ್ದಾರೆ. ಕಾಂಗ್ರೆಸ್‌ನ 11 ಶಾಸಕರು ಗೈರುಹಾಜರಾಗಿದ್ದರು.

ಪ್ರಮುಖ ಬೆಳವಣಿಗೆಗಳು

- ಎನ್‌ಸಿಪಿ ನಾಯಕ ಅಜಿತ್‌ ಪವಾರ್‌ ಅವರು ಮಹಾರಾಷ್ಟ್ರ ವಿಧಾನಸಭೆಯ ವಿರೋಧ ಪಕ್ಷದ ನಾಯಕನಾಗಿ ಸೋಮವಾರ ಆಯ್ಕೆಯಾಗಿದ್ದಾರೆ. ಈ ಹಿಂದೆ ಬಿಜೆಪಿ ವಿರೋಧ ಪಕ್ಷವಾಗಿದ್ದು, ದೇವೇಂದ್ರ ಫಡಣವೀಸ್‌ ಅವರು ವಿರೋಧ ಪಕ್ಷದ ನಾಯಕರಾಗಿದ್ದರು. ‘ಅಜಿತ್‌ ಪವಾರ್‌ ಅವರು ಒಬ್ಬ ಪ್ರಬುದ್ಧ ನಾಯಕ’ ಎಂದು ಮುಖ್ಯಮಂತ್ರಿ ಏಕನಾಥ ಶಿಂಧೆ ಹೇಳಿದ್ದಾರೆ
- ‘ಪೆಟ್ರೋಲ್‌ ಮತ್ತು ಡೀಸೆಲ್‌ ಮೇಲಿನ ಮೌಲ್ಯ ವರ್ಧಿತ ತೆರಿಗೆಯನ್ನು (ವಿಎಟಿ) ಕಡಿತ ಮಾಡುತ್ತೇವೆ. ಸಚಿವ ಸಂಪುಟದ ಮುಂದಿನ ಸಭೆಯಲ್ಲಿ ಈ ಸಂಬಂಧ ನಿರ್ಧಾರ ತೆಗೆದುಕೊಳ್ಳಲಾಗುವುದು’ ಎಂದು ಶಿಂಧೆ ವಿಧಾನಸಭೆಯಲ್ಲಿ ಘೋಷಿಸಿದ್ದಾರೆ. ವಿಶ್ವಾಸಮತ ಸಾಬೀತಿನ ನಂತರ ನಡೆದ ಚರ್ಚೆಗೆ ಪ್ರತಿಕ್ರಿಯೆ ನೀಡುವಾಗ ಅವರು ಈ ಘೋಷಣೆ ಮಾಡಿದ್ದಾರೆ
- ಶಿಂಧೆ ಬಣದ ಶಾಸಕರನ್ನು ಪಕ್ಷದ ಮುಖ್ಯ ಸಚೇತಕರಾಗಿ ಪರಿಗಣಿಸಿದ ವಿಧಾನಸಭಾ ಸ್ಪೀಕರ್‌ ರಾಹುಲ್‌ ನಾರ್ವೇಕರ್‌ ಅವರ ಆದೇಶವನ್ನು ಪ್ರಶ್ನಿಸಿ ಶಿವಸೇನಾದ ಉದ್ಧವ್‌ ಠಾಕ್ರೆ ಬಣವು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ಈ ಅರ್ಜಿಯನ್ನು ಜುಲೈ 11ರಂದು ಕೈಗೆತ್ತಿಕೊಳ್ಳುವುದಾಗಿ ಸುಪ್ರೀಂ ಕೋರ್ಟ್‌ ಪೀಠವು ಹೇಳಿದೆ. ಉದ್ಧವ್‌ ಠಾಕ್ರೆ ಬಣದ ಸುನಿಲ್‌ ಪ್ರಭು ಅವರನ್ನು ಶಿವಸೇನಾದ ಮುಖ್ಯ ಸಚೇತಕ ಹುದ್ದೆಯಿಂದ ತೆರವು ಮಾಡಿ, ಆ ಹುದ್ದೆಗೆ ಶಿಂಧೆ ಬಣದ ಭರತ್‌ ಗೋಡಾವಾಲಾ ಅವರನ್ನು ನೇಮಕ ಮಾಡುವ ಆದೇಶ ಪತ್ರಕ್ಕೆ ಸ್ಪೀಕರ್‌ ಭಾನುವಾರ ತಡರಾತ್ರಿ ಸಹಿ ಮಾಡಿದ್ದಾರೆ



ಮನೆ ಖರೀದಿ ಗ್ರಾಹಕರಿಗೆ ಭಾರಿ ವಂಚನೆ ಪ್ರಕರಣ

₹136 ಕೋಟಿ ಆಸ್ತಿ ಇ.ಡಿ ವಶಕ್ಕೆ

ನವದೆಹಲಿ (ಪಿಟಿಐ): ಮನೆ ಖರೀದಿದಾರರಿಗೆ ವಂಚಿಸಿದ ಮತ್ತು ಹಣ ಅಕ್ರಮ ವರ್ಗಾವಣೆ ಪ್ರಕರಣ ಸಂಬಂಧ ಬೆಂಗಳೂರಿನಲ್ಲಿ ಸುಮಾರು ₹137 ಕೋಟಿ ಮೌಲ್ಯದ ಆಸ್ತಿ ಮತ್ತು ವಾಸದ ಮನೆಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಇ.ಡಿ ಸೋಮವಾರ ಹೇಳಿದೆ.

ಈ ಆಸ್ತಿ ಡ್ರೀಮ್ಜ್‌ ಇನ್ಫ್ರಾ ಇಂಡಿಯಾ ಲಿಮಿಟೆಡ್‌ ಮತ್ತು ಇದರ ವ್ಯವಸ್ಥಾಪಕ ನಿರ್ದೇಶಕ (ಎಂಡಿ) ದಿಶಾ ಚೌಧರಿ, ಟಿಜಿಎಸ್‌ ಕನ್‌ಸ್ಟ್ರಕ್ಷನ್ಸ್‌ ಪ್ರೈವೇಟ್‌ ಲಿಮಿಟೆಡ್‌ ಮತ್ತು ಇದರ ವ್ಯವಸ್ಥಾಪಕ ನಿರ್ದೇಶಕ ಮನದೀಪ್‌ ಕೌರ್‌ ಹಾಗೂ ಇತರರಿಗೆ ಸೇರಿದ್ದಾಗಿದೆ.

ಗೃಹಕಲ್ಯಾಣ್‌ ಮತ್ತು ಸಚಿನ್‌ ನಾಯ್ಕ್‌ ಅಲಿಯಾಸ್‌ ಯೋಗೇಶ್‌, ದಿಶಾ ಚೌಧರಿ, ಮನ್‌ದೀಪ್‌ ಕೌರ್‌ ಹಾಗೂ ಇತರರ ವಿರುದ್ಧ ದಾಖಲಾದ 125 ಎಫ್‌ಐಆರ್‌ಗಳ ವಿಚಾರಣೆ ಆರಂಭಿಸಿದ ನಂತರ, ಆರೋಪಿಗಳ ವಿರುದ್ಧ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ ಪ್ರಕರಣವನ್ನು ಇ.ಡಿ ದಾಖಲಿಸಿದೆ.

‘ಬೆಂಗಳೂರು ಮಹಾನಗರ ಮತ್ತು ಸುತ್ತಮುತ್ತ ಕೈಗೆಟುಕುವ ಬೆಲೆಯಲ್ಲಿ ಫ್ಲಾಟ್‌ ನೀಡುವುದಾಗಿ ಭರವಸೆ ನೀಡಿ, ಸಾರ್ವಜನಿಕರಿಂದ ಭಾರಿ ಮೊತ್ತದ ಹಣ ಪಡೆದು ವಂಚಿಸಿದ್ದಾರೆ. ಆರೋಪಿಗಳು 10,299ಕ್ಕೂ ಹೆಚ್ಚು ಗ್ರಾಹಕರಿಂದ ₹722 ಕೋಟಿಗೂ ಹೆಚ್ಚು ಹಣವನ್ನು ಸಂಗ್ರಹಿಸಿ, ತಮ್ಮ ಸ್ವಂತ ಲಾಭಕ್ಕಾಗಿ ದುರುಪಯೋಗಪಡಿಸಿಕೊಂಡಿದ್ದಾರೆ’ ಎಂದು ಇ.ಡಿ ಹೇಳಿದೆ.

ತಮಿಳುನಾಡಿಗೆ ಸ್ವಾಯತ್ತೆ ನೀಡಲು ಪ್ರಧಾನಿಗೆ ಕೋರಿಕೆ

ಪ್ರತ್ಯೇಕ ದೇಶಕ್ಕೆ ಒತ್ತಾಯಿಸುವಂತೆ ಮಾಡಬೇಡಿ: ರಾಜಾ ಎಚ್ಚರಿಕೆ



ಚೆನ್ನೈ (ಪಿಟಿಐ): ‘ತಮಿಳುನಾಡಿಗೆ ಸ್ವಾಯತ್ತೆ ನೀಡಿ’ ಎಂದು ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್‌ ಶಾ ಅವರಿಗೆ ಒತ್ತಾಯಿಸಿರುವ ಡಿಎಂಕೆ ನಾಯಕ ಎ. ರಾಜಾ ಅವರು, ‘ಸ್ವತಂತ್ರ ದೇಶಕ್ಕಾಗಿ ಒತ್ತಾಯಿಸುವ ಸ್ಥಿತಿಗೆ ನಮ್ಮನ್ನು ತಳ್ಳಬೇಡಿ’ ಎಂದು ಹೇಳಿದ್ದಾರೆ.

ಭಾನುವಾರ ನಡೆದ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಪಕ್ಷದ ಜನಪ್ರತಿನಿಧಿಗಳ ಸಭೆಯಲ್ಲಿ ಮಾತನಾಡಿದ ಅವರು, ‘ದ್ರಾವಿಡ ಚಳವಳಿಯ ನೇತಾರ ಪೆರಿಯಾರ್‌ ಅವರು ಸ್ವತಂತ್ರ ತಮಿಳುನಾಡಿನ ಕುರಿತು ಪ್ರತಿಪಾದಿಸಿದ್ದರು. ಆದರೆ, ಡಿಎಂಕೆ ಇದರಿಂದ ದೂರ ಸರಿದಿದೆ. ಪಕ್ಷವು ಪೆರಿಯಾರ್‌ ಅವರನ್ನು ಒಪ್ಪಿಕೊಂಡರೂ, ಸಮಗ್ರತೆ ಮತ್ತು ಪ್ರಜಾಪ್ರಭುತ್ವವನ್ನು ಬೆಂಬಲಿಸಿದೆ. ಭಾರತದ ಒಳಿತನ್ನೇ ಬಯಸುತ್ತಿರುವ ಪಕ್ಷವೂ ಇದನ್ನೇ ಮುಂದು ವರಿಸಿಕೊಂಡು ಹೋಗಲು ಇಚ್ಛಿಸುತ್ತದೆ’ ಎಂದೂ ಅವರು ಹೇಳಿದ್ದಾರೆ.

‘ನಾನು ಪ್ರಧಾನಿ ಮತ್ತು ಅಮಿತ್‌ ಶಾ ಅವರಲ್ಲಿ ಹಾಗೂ ವೇದಿಕೆಯಲ್ಲಿರುವ ನಮ್ಮ ನಾಯಕರ ಸಮ್ಮುಖದಲ್ಲಿ ನಮ್ರತೆಯಿಂದ ಕೋರುತ್ತಿದ್ದೇನೆ. ನಮ್ಮ ಮುಖ್ಯಮಂತ್ರಿ ಅವರು ಡಿಎಂಕೆ ಸಂಸ್ಥಾಪಕರ ಹಾದಿಯಲ್ಲಿ ಸಾಗುತ್ತಿದ್ದಾರೆ. ನಮ್ಮನ್ನು ಪೆರಿಯಾರ್‌ ಹಾದಿಗೆ ತಳ್ಳಬೇಡಿ. ಪ್ರತ್ಯೇಕ ದೇಶದ ಬೇಡಿಕೆ ಮಂಡಿಸುವಂತೆ ಮಾಡಬೇಡಿ. ತಮಿಳುನಾಡಿಗೆ ಸ್ವಾಯತ್ತೆ ದೊರೆಯುವ ತನಕ ವಿರಮಿಸುವುದಿಲ್ಲ’ ಎಂದು ರಾಜಾ ತಿಳಿಸಿದ್ದಾರೆ.

ರಾಜಾ ಅವರ ಹೇಳಿಕೆಗೆ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಟೀಕೆ ವ್ಯಕ್ತವಾಗಿದೆ.

‘ರಾಜಾ ಅವರ ಹೇಳಿಕೆಯು ನಿರ್ಲಜ್ಜತನದಿಂದ ಕೂಡಿರುವಂಥದ್ದು’ ಎಂದು ತಮಿಳುನಾಡು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ನಾರಾಯಣನ್‌ ತಿರುಪತಿ ಅವರು ಖಂಡಿಸಿದ್ದಾರೆ.

‘ತನ್ನ ವಿಭಜಕ ಧೋರಣೆಗೆ ಡಿಎಂಕೆ ಹೆಸರುವಾಸಿಯಾಗಿರುವುದರಿಂದ ಇದೇನೂ ಅಚ್ಚರಿಯ ಸಂಗತಿಯಲ್ಲ. ಆದರೆ, ಆಘಾತಕಾರಿ ಮತ್ತು ಆಶ್ಚರ್ಯಕರ ಸಂಗತಿಯೆಂದರೆ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್‌ ಅವರು ಈ ಹೇಳಿಕೆಗೆ ಮೂಕಪ್ರೇಕ್ಷಕರಾಗಿದ್ದಾರೆ. ನಾನು ಅವರ ಮೌನವನ್ನು ಖಂಡಿಸುತ್ತೇನೆ’ ಎಂದೂ ಅವರು ಹೇಳಿದ್ದಾರೆ.

ಡಿಎಂಕೆ ಸ್ಪಷ್ಟನೆ: ತಮ್ಮ ಪಕ್ಷದ ವಿರುದ್ಧದ ಟೀಕೆಗಳನ್ನು ತಿರಸ್ಕರಿಸುವ ಡಿಎಂಕೆ ವಕ್ತಾರ ರವೀಂದ್ರನ್‌ ಅವರು, ‘ನಮ್ಮ ಪಕ್ಷವು ಭಾರತದ ಸಮಗ್ರತೆ ಮತ್ತು ಪ್ರಜಾಪ್ರಭುತ್ವದ ತತ್ವಗಳನ್ನು ಸಂಪೂರ್ಣವಾಗಿ ಬೆಂಬಲಿಸುತ್ತದೆ ಎಂದು ರಾಜಾ ಅವರು ಹೇಳಿದ್ದಾರೆ’ ಎಂದು ಸ್ಪಷ್ಟಪಡಿಸಿದ್ದಾರೆ.

ಸುದ್ದಿ 2 ನಿಮಿಷ

ಜ್ಞಾನವಾಪಿ ಮಸೀದಿ ಪ್ರಕರಣ ಮುಂದಿನ ವಿಚಾರಣೆ ಜುಲೈ 12ಕ್ಕೆ

ವಾರಾಣಸಿ: ಜ್ಞಾನವಾಪಿ ಮಸೀದಿ–ಶೃಂಗಾರ ಗೌರಿ ಸಂಕೀರ್ಣದ ನಿರ್ವಹಣೆಗೆ ಸಂಬಂಧಿಸಿದ ಪ್ರಕರಣದ ಮುಂದಿನ ವಿಚಾರಣೆಯನ್ನು ಇಲ್ಲಿನ ಜಿಲ್ಲಾ ನ್ಯಾಯಾಲಯವು ಜುಲೈ 12ಕ್ಕೆ ನಿಗದಿಪಡಿಸಿದೆ.

ಸೋಮವಾರ ಮುಸ್ಲಿಂ ಅರ್ಜಿದಾರರ ಪರ ವಕೀಲ ಮೊಹಮ್ಮದ್‌ ತೊಹಿದ್‌ ಖಾನ್‌ ಅವರು ವಾದ ಮಂಡಿಸಿದರು.



‘ಪ್ರಕರಣದ ಅರ್ಜಿಯು ವಿಚಾರಣೆಗೆ ಯೋಗ್ಯವಾಗಿದೆಯೇ ಇಲ್ಲವೇ ಎಂಬ ಬಗ್ಗೆ ಮುಸ್ಲಿಂ ಪರ ಅರ್ಜಿದಾರರು ಎಲ್ಲ ಅಂಶಗಳನ್ನು ಮಂಡಿಸಿದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಾದ ಮಂಡಿಸಲು ಅವರು ಕಾಲಾವಕಾಶ ಕೋರಿದ್ದರಿಂದ ನ್ಯಾಯಾಲಯವು ಮುಂದಿನ ವಿಚಾರಣೆಗಾಗಿ ಜುಲೈ 12ಕ್ಕೆ ದಿನಾಂಕ ನಿಗದಿಪಡಿಸಿತು’ ಎಂದು ಹಿಂದೂಗಳ ಪರ ವಾದ ಮಂಡಿಸಿದ ಮದನ್‌ ಮೋಹನ್‌ ಯಾದವ್‌ ಅವರು ಮಾಹಿತಿ ನೀಡಿದರು.

ಮಹಿಳೆಗೆ ಬೆಂಕಿ ಹಚ್ಚಿದ ಪ್ರಕರಣ: ಐವರ ಬಂಧನ

ಗುನಾ(ಪಿಟಿಐ): ಮಧ್ಯಪ್ರದೇಶದ ಗುನಾ ಜಿಲ್ಲೆಯ ಧನೋರಿಯಾ ಗ್ರಾಮದಲ್ಲಿ ಭೂ ವಿವಾದದಿಂದ ಮಹಿಳೆಗೆ ಬೆಂಕಿ ಹಚ್ಚಿದ್ದ ಪ್ರಕರಣಕ್ಕೆ ಸಂಬಂಧಿಸಿ ಇಬ್ಬರು ಮಹಿಳೆಯರು ಸೇರಿದಂತೆ ಐವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.

ಸುಟ್ಟ ಗಾಯಗಳಿಂದ ಬಳಲುತ್ತಿರುವ ರಾಮ್‌ಪ್ಯಾರಿ ಬಾಯಿ (45) ಅವರ ಸ್ಥಿತಿ ಗಂಭೀರವಾಗಿದೆ ಎಂದೂ ಹೇಳಿದ್ದಾರೆ.

‘ಹೊಲಕ್ಕೆ ಹೋದಾಗ ಪತ್ನಿ ಸುಟ್ಟ ಗಾಯಗಳಿಂದ ನರಳುತ್ತಿದ್ದಳು. ವಿಚಾರಿಸಿದಾಗ ಮೂವರು ಬೆಂಕಿ ಹಚ್ಚಿರುವುದಾಗಿ ತಿಳಿಸಿದ್ದಾಳೆ’ ಎಂದು ಮಹಿಳೆಯ ಪತಿ ದೂರಿನಲ್ಲಿ ತಿಳಿಸಿದ್ದಾರೆ.

ಘಟನೆಯ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದು, ಆರೋಪಿಗಳೇ ಇದನ್ನು ಚಿತ್ರೀಕರಿಸಿದ್ದರು ಎನ್ನಲಾಗಿದೆ.

‘ಘೋರ ಕೃತ್ಯ’: ಮಹಿಳೆಗೆ ಬೆಂಕಿ ಹಚ್ಚಿರುವುದು ಘೋರ ಮತ್ತು ನಾಚಿಕೆಗೇಡಿನ ಸಂಗತಿ ಎಂದಿರುವ ರಾಷ್ಟ್ರೀಯ ಮಹಿಳಾ ಆಯೋಗ,ಎಲ್ಲಾ ಆರೋಪಿಗಳ ವಿರುದ್ಧ ಮೊಕದ್ದಮೆ ದಾಖಲಿಸಿ ಕೂಡಲೇ ಬಂಧಿಸಬೇಕು ಎಂದು ಆಗ್ರಹಿಸಿದೆ.

ವಿದೇಶಿ ದೇಣಿಗೆ: ಆರೋಪ ನಿರಾಕರಿಸಿದ ಆಲ್ಟ್‌ನ್ಯೂಸ್‌

ನವದೆಹಲಿ (ಪಿಟಿಐ): ಕಾನೂನು ಉಲ್ಲಂಘಿಸಿ ವಿದೇಶಿ ಮೂಲಗಳಿಂದ ದೇಣಿಗೆ ಪಡೆಯಲಾಗಿದೆ ಎಂಬ ದೆಹಲಿ ಪೊಲೀಸರ ಆರೋಪ ನಿರಾಕರಿಸಿರುವ ಆಲ್ಟ್‌ನ್ಯೂಸ್‌ ಫ್ಯಾಕ್ಟ್‌ಚೆಕ್‌ ಸಂಸ್ಥೆ, ತಮ್ಮ ವಿರುದ್ಧ ಮಾಡುತ್ತಿರುವ ಆರೋಪಗಳು ಸಂಸ್ಥೆಯನ್ನು ಮುಚ್ಚಿಸುವ ಪ್ರಯತ್ನವಾಗಿದೆ ಎಂದು ಹೇಳಿದೆ.

’ವಿದೇಶಿ ಮೂಲಗಳಿಂದ ದೇಣಿಗೆ ಸ್ವೀಕರಿಸಿದ್ದೇವೆ ಎಂದು ಆರೋಪಿಸಲಾಗಿದೆ. ಆದರೆ ನಾವು ಹಾಗೆ ಹಣ ಪಡೆಯಲು ಸಾಧ್ಯವಿಲ್ಲ. ಪೊಲೀಸರ ಆರೋಪ ಸುಳ್ಳು. ಮಹಮ್ಮದ್‌ ಜುಬೈರ್‌ ವೈಯಕ್ತಿಕ ಖಾತೆಗೂ ಹಣ ಜಮಾ ಆಗಿಲ್ಲ. ಸಂಗ್ರಹಿಸುವ ಎಲ್ಲಾ ದೇಣಿಗೆಗಳು ಸಂಸ್ಥೆಯ ಬ್ಯಾಂಕ್‌ ಖಾತೆಗೆ ಸಂದಾಯವಾಗುತ್ತದೆ‘ ಎಂದು ಆಲ್ಟ್‌ ನ್ಯೂಸ್‌ ತನ್ನ ಟ್ವೀಟ್‌ನಲ್ಲಿ ಹೇಳಿಕೆ ಪೋಸ್ಟ್‌ ಮಾಡಿದೆ.

ಆಲ್ಟ್‌ ನ್ಯೂಸ್‌ನ ಅಡಿ ಕಾರ್ಯನಿರ್ವಹಿಸುವ ಪ್ರಾವ್ಡಾ ಮೀಡಿಯಾ, ವಿವಿಧ ವಹಿವಾಟು ಮೂಲಕ ಎರಡು ಲಕ್ಷ ರೂಪಾಯಿಗಳನ್ನು ಮೊಬೈಲ್‌ ಫೋನ್‌ ಸಂಖ್ಯೆ ಅಥವಾ ವಿದೇಶಗಳ ಐಪಿ ವಿಳಾಸ ಮೂಲಕ ಪಡೆದಿದೆ ಎಂದು ದೆಹಲಿ ಪೊಲೀಸರು ತಿಳಿಸಿದ್ದಾರೆ.

ಸರ್ವರ್‌ ‘ಕೋಮಾ’ಕ್ಕೆ: ಮದ್ಯದಂಗಡಿ ಖಾಲಿ

ಒಂದನೇ ಪುಟದಿಂದ

‘ತಿಣುಕಾಟದ ಮಧ್ಯೆಯೇ ಹೊಸ ವ್ಯವಸ್ಥೆಗೆ ಹೊಂದಿಕೊಂಡು ವೆಬ್‌–ಇಂಡೆಂಟ್‌ ಮೂಲಕ ಮದ್ಯ ಖರೀದಿ ಮಾಡುತ್ತಿದ್ದೆವು. ಈಗ ನಾಲ್ಕು ದಿನಗಳಿಂದ ವೆಬ್‌ ಇಂಡೆಂಟ್‌ ಸಲ್ಲಿಸಲು ಸಾಧ್ಯವೇ ಆಗುತ್ತಿಲ್ಲ. ದಿನವಿಡೀ ಕಂಪ್ಯೂಟರ್‌ ಮುಂದೆ ಕುಳಿತು ಇಂಡೆಂಟ್‌ ಸಲ್ಲಿಸಲು ಪ್ರಯತ್ನಿಸಲಾಗುತ್ತಿದೆ. ಆದರೂ, ಸಾಧ್ಯವಾಗಿಲ್ಲ’ ಎಂದು ಮದ್ಯ ವ್ಯಾಪಾರಿಗಳು ಅಳಲು ತೋಡಿಕೊಂಡರು.

‘ಒಂದು ವಾರಕ್ಕೆ ಬೇಕಾಗುವಷ್ಟು ಮದ್ಯ ಖರೀದಿಸಿ ದಾಸ್ತಾನಿಟ್ಟುಕೊಳ್ಳುವ ಶಕ್ತಿ ಈಗ ಮದ್ಯದ ವ್ಯಾಪಾರಿಗಳಲ್ಲಿ ಉಳಿದಿಲ್ಲ. ಎಂಆರ್‌ಪಿ ದರಕ್ಕಿಂತ ಶೇ 20ರಷ್ಟು ಕಡಿಮೆ ದರದಲ್ಲಿ ನಮಗೆ ಮದ್ಯ ಸಿಗುತ್ತಿತ್ತು. 2009ರಿಂದ ಈ ಪ್ರಮಾಣವನ್ನು ಶೇ 10ರಷ್ಟಕ್ಕೆ ಇಳಿಸಲಾಗಿದೆ. ಲಾಭಾಂಶ ಕಡಿಮೆ ಆಗಿರುವುದರಿಂದ ಹೆಚ್ಚು ಮದ್ಯ ಖರೀದಿ ಮಾಡಿ ದಾಸ್ತಾನಿಟ್ಟುಕೊಳ್ಳಲು ಸಾಧ್ಯವಾಗುತ್ತಿಲ್ಲ’ ಎಂದು ಬೆಂಗಳೂರು ನಗರ ಮದ್ಯ ವ್ಯಾಪಾರಿಗಳ ಸಂಘದ ಅಧ್ಯಕ್ಷ ಲೋಕೇಶ್‌ ಹೇಳಿದರು.

‘ಮದ್ಯವೇ ದಾಸ್ತಾನಿಲ್ಲದೆ ಅಂಗಡಿ ಬಾಗಿಲು ತೆರೆಯುವುದರಿಂದ ಬಾಗಿಲು ಹಾಕಿ ಮನೆಗೆ ಹೋಗಿ ಎಂದು ಗ್ರಾಹಕರು ನಿಂದಿಸುತ್ತಿದ್ದಾರೆ. ಈ ರೀತಿ ಅವ್ಯವಸ್ಥೆಯನ್ನು ಪಾನೀಯ ನಿಗಮ ತಂದೊಡ್ಡಿದೆ. ಅಧಿಕಾರಿಗಳ ಬೇಜವಾಬ್ದಾರಿಯೇ ಇಷ್ಟೆಲ್ಲಾ ಗೊಂದಲಗಳಿಗೆ ಕಾರಣ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

> **ವೆಬ್‌ ಇಂಡೆಂಟ್‌ಗೆ ದತ್ತಾಂಶ ಸಮಸ್ಯೆ ಇದೆ. ಅದನ್ನು ಸರಿಪಡಿಸುವ ಜತೆಗೆ ಈ ಹಿಂದಿನಂತೆ ಖುದ್ದು ಹೋಗಿ ಮದ್ಯ ಖರೀದಿ ಮಾಡಲು ಅವಕಾಶ ಕಲ್ಪಿಸಲಾಗುತ್ತಿದೆ. ಮಂಗಳವಾರ ಬೆಳಿಗ್ಗೆಯಿಂದ ಸಮಸ್ಯೆ ಬಗೆಹರಿಯಲಿದೆ**
> **ಪಿ.ಸಿ.ಜಾಫರ್‌,** ಕೆಎಸ್‌ಬಿಸಿಎಲ್‌ ವ್ಯವಸ್ಥಾಪಕ ನಿರ್ದೇಶಕ

> **ವೆಬ್‌ ಇಂಡೆಂಟ್‌ ಸಲ್ಲಿಸುವ ಪೋರ್ಟಲ್‌ ಶುಕ್ರವಾರದಿಂದ ಕೋಮಾ ಸ್ಥಿತಿಯಲ್ಲಿದ್ದು, ಮದ್ಯದ ಅಂಗಡಿಗಳಲ್ಲಿ ಮದ್ಯವೇ ಇಲ್ಲವಾಗಿದೆ. ಸಮಸ್ಯೆ ಬಗೆಹರಿಸುವಂತೆ ಅಧಿಕಾರಿಗಳಿಗೆ ಮನವಿ ಮಾಡಿದ್ದೇವೆ**
> **ಗೋವಿಂದರಾಜ ಹೆಗ್ಡೆ,** ಫೆಡರೇಷನ್‌ ಆಫ್‌ ವೈನ್‌ ಮರ್ಚಂಟ್ಸ್‌ ಅಸೋಸಿಯೇಷನ್‌ ಪ್ರಧಾನ ಕಾರ್ಯದರ್ಶಿ

ಮೂಸೆವಾಲಾ ಹತ್ಯೆ ಪ್ರಕರಣ: ಮತ್ತಿಬ್ಬರ ಬಂಧನ

ನವದೆಹಲಿ (ಪಿಟಿಐ): ಪಂಜಾಬಿ ಗಾಯಕ ಸಿಧು ಮೂಸೆವಾಲಾ ಹತ್ಯೆ ಪ್ರಕರಣ ಸಂಬಂಧ ಮತ್ತಿಬ್ಬರು ಆರೋಪಿಗಳನ್ನು ದೆಹಲಿ ಪೊಲೀಸ್‌ನ ವಿಶೇಷ ಘಟಕ ಭಾನುವಾರ ರಾತ್ರಿ ಬಂಧಿಸಿದೆ. ಬಂಧಿತರಲ್ಲಿ ಒಬ್ಬ ಆರೋಪಿ, ಮೂಸೆವಾಲಾ ಅವರಿಗೆ ಸಮೀಪದಿಂದ ಗುಂಡು ಹಾರಿಸಿದವನಾಗಿದ್ದಾನೆ ಎಂದು ಸೋಮವಾರ ಅಧಿಕಾರಿಗಳು ತಿಳಿಸಿದ್ದಾರೆ.

ಗ್ಯಾಂಗ್‌ಸ್ಟರ್‌ ಲಾರೆನ್ಸ್‌ ಬಿಷ್ಣೋಯಿ ಮತ್ತು ಗೋಲ್ಡಿ ಬ್ರಾರ್‌ ಗುಂಪಿನ ಸಹಚರರು ಮತ್ತು ವಿವಿಧ ಪ್ರಕರಣಗಳಲ್ಲಿ ಪೊಲೀಸರಿಗೆ ಬೇಕಾಗಿರುವ ಅಂಕಿತ್‌ ಮತ್ತು ಸಚಿನ್‌ ಭಿವಾನಿ ಬಂಧಿತ ಆರೋಪಿಗಳು. ಈ ಮೂಲಕ ಮೂಸೆವಾಲಾ ಹತ್ಯೆ ಪ್ರಕರಣದಲ್ಲಿ ಇಲ್ಲಿವರೆಗೆ ಬಂಧಿತರ ಸಂಖ್ಯೆ ಐದಕ್ಕೆ ಏರಿಕೆಯಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

‘ಮೂಸೆವಾಲಾ ಅವರ ಮೇಲೆ ಗುಂಡು ಹಾರಿಸಿದವರ ಪೈಕಿ ಅಂಕಿತ್‌ ಸಹ ಒಬ್ಬ. ಮತ್ತೊಬ್ಬ ಆರೋಪಿಯಾದ ಭಿವಾನಿ, ನಾಲ್ವರು ಶೂಟರ್‌ಗಳಿಗೆ ಆಶ್ರಯ ನೀಡುವ ಜವಾಬ್ದಾರಿ ಹೊಂದಿದ್ದ’ ಎಂದು ಹಿರಿಯ ಪೊಲೀಸ್‌ ಅಧಿಕಾರಿಯೊಬ್ಬರು ವಿವರಿಸಿದ್ದಾರೆ.

ಹರಿಯಾಣ ಮೂಲದ ಭಿವಾನಿ ರಾಜಸ್ಥಾನದಲ್ಲಿ ಲಾರೆನ್ಸ್‌ ಬಿಷ್ಣೋಯಿ ಗುಂಪಿನ ಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದನು. ಈತನು ರಾಜಸ್ಥಾನದ ಚುರು ಪ್ರಕರಣದಲ್ಲಿ ಪೊಲೀಸರಿಗೆ ಬೇಕಾದ ಪ್ರಮುಖ ಆರೋಪಿ ಎಂದು ಹೇಳಿದ್ದಾರೆ.

ಬಂಧಿತರಿಂದ ದೊರೆಯುವ ಸುಳಿವು ಆಧರಿಸಿ ತಂಡಗಳು ಕಾರ್ಯಾಚರಣೆಯನ್ನು ಮುಂದುವರಿಸಲಿವೆ ಎಂದು ವಿಶೇಷ ಪೊಲೀಸ್‌ ಕಮಿಷನರ್‌ (ವಿಶೇಷ ಘಟಕ) ಎಚ್‌.ಜಿ.ಎಸ್‌. ಧಲಿವಾಲ್‌ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಜನಜಾಗೃತಿ ಪಾದಯಾತ್ರೆಗೆ ಜ್ಞಾನಪ್ರಕಾಶ ಸ್ವಾಮೀಜಿ

‘ಪರಿಷ್ಕೃತ ಪಠ್ಯದಲ್ಲಿ ಬೌದ್ಧಿಕ ವಿಷ’



ಪಠ್ಯಪುಸ್ತಕ ಪರಿಷ್ಕರಣೆ ವಿರೋಧಿಸಿ ಜನಜಾಗೃತಿ ಪಾದಯಾತ್ರೆಗೆ ಹಾಲ್ಕುರಿಕೆ ಕೆಂಪಮ್ಮ ದೇವಾಲಯ ಆವರಣದಲ್ಲಿ ಮೈಸೂರು ಉರಿಲಿಂಗಪೆದ್ದಿ ಮಠದ ಜ್ಞಾನ ಪ್ರಕಾಶ ಸ್ವಾಮೀಜಿ ಸೋಮವಾರ ಚಾಲನೆ ನೀಡಿದರು. ಸಾಹಿತಿ ಎಸ್‌.ಜಿ. ಸಿದ್ದರಾಮಯ್ಯ ಹಾಗೂ ಇತರರು ಭಾಗವಹಿಸಿದ್ದರು.

ತಿಪಟೂರು (ತುಮಕೂರು): ‘ಪಠ್ಯ-ಪುಸ್ತಕದಲ್ಲಿ ಬೌದ್ಧಿಕ ವಿಷ ತುಂಬಿ ಬಾಲ್ಯದಲ್ಲೇಯೇ ಮಕ್ಕಳಿಗೆ ಉಣಿಸುವ ಮೂಲಕ ಅವರನ್ನು ಮನುವಾದದ ಗುಲಾಮಗಿರಿಗೆ ತಳ್ಳುವ ಹುನ್ನಾರವನ್ನು ಸರ್ಕಾರ ರೂಪಿಸಿದೆ’ ಎಂದು ಮೈಸೂರು ಉರಿಲಿಂಗಪೆದ್ದಿ ಮಠದ ಜ್ಞಾನ ಪ್ರಕಾಶ ಸ್ವಾಮೀಜಿ ಟೀಕಿಸಿದರು.

ತಾಲ್ಲೂಕಿನ ಹಾಲ್ಕುರಿಕೆ ಗ್ರಾಮದಲ್ಲಿ ಪಠ್ಯಪುಸ್ತಕ ಪರಿಷ್ಕರಣೆ ವಿರೋಧಿ ಜನಜಾಗೃತಿ ಪಾದಯಾತ್ರೆಗೆ ಸೋಮವಾರ ಚಾಲನೆ ನೀಡಿ ಅವರು ಮಾತನಾಡಿದರು.

‘ಬಿಜೆಪಿ ಸರ್ಕಾರವು ಬಹುಜನ ಸಂಸ್ಕೃತಿ ನಾಶಮಾಡಿ, ಬ್ರಾಹ್ಮಣ್ಯವನ್ನು ಜನರ ಮೇಲೆ ಹೇರಲು ಹೊರಟಿದೆ. ಮನುವಾದದ ಈ ಹುನ್ನಾರದ ವಿರುದ್ಧ ಜನ ಜಾಗೃತರಾಗುತ್ತಿದ್ದಾರೆ. ಬಿಜೆಪಿ ಸಾಂಸ್ಕೃತಿಕ ರಾಜಕಾರಣ ಹುನ್ನಾರದ ವಿರುದ್ಧ ಸಾಣೇಹಳ್ಳಿ ಪಂಡಿತಾರಾಧ್ಯ ಸ್ವಾಮೀಜಿ, ನಿರ್ಮಲಾನಂದನಾಥ ಸ್ವಾಮೀಜಿ ಸೇರಿದಂತೆ ನಾಡಿನ ಹಲವು ಮಠಾಧೀಶರು ಹಾಗೂ ಪ್ರಗತಿಪರ ಚಿಂತಕರ ನೇತೃತ್ವದಲ್ಲಿ ರಾಜ್ಯದಾದ್ಯಂತ ಅನಿರ್ದಿಷ್ಟಾವಧಿ ಧರಣಿ, ಹೋರಾಟ, ಜಾಗೃತಿ ಜಾಥಾ ಆಯೋಜಿಸಲಾಗಿದೆ’ ಎಂದರು.

‘ಶಿಕ್ಷಣ ಸಚಿವ ಬಿ.ಸಿ ನಾಗೇಶ್‌ ಅವರು ಪಠ್ಯಪುಸ್ತಕದಲ್ಲಿ ಕೋಮು ವಿಷ ತುಂಬುವ ಮೂಲಕ ಮಕ್ಕಳನ್ನು ಬೌದ್ಧಿಕ ಗುಲಾಮರನ್ನಾಗಿ ಮಾಡಲು ಹೊರಟಿದ್ದಾರೆ. ಸರ್ಕಾರ ಕೂಡಲೇ ಶಿಕ್ಷಣ ಸಚಿವರ ರಾಜೀನಾಮೆ ಪಡೆಯಬೇಕು ಹಾಗೂ ರೋಹಿತ್‌ ಚಕ್ರತೀರ್ಥ ನೇತೃತ್ವದ ಸಮಿತಿ ರೂಪಿಸಿರುವ ಪರಿಷ್ಕೃತ ಪಠ್ಯ-ಪುಸ್ತಕಗಳನ್ನು ವಾಪಸ್‌ ಪಡೆದು, ಹಳೆಯ ಪಠ್ಯ ಮುಂದುವರಿಸಬೇಕು’ ಎಂದು ಪ್ರಗತಿಪರ ಚಿಂತಕ ಶ್ರೀಪಾದ್‌ ಭಟ್‌ ಒತ್ತಾಯಿಸಿದರು.

‘ಸರ್ಕಾರ ಪಠ್ಯಪುಸ್ತಕ ಪರಿಷ್ಕರಣೆ ಮೂಲಕ ಬ್ರಾಹ್ಮಣೀಕರಣಕ್ಕೆ ಮುಂದಾಗಿದೆ. ಇದರ ವಿರುದ್ಧ ಜುಲೈ 9ರಂದು ತಿಪಟೂರಿನಲ್ಲಿ ನಡೆಯುವ ಸಮಾರಂಭದಲ್ಲಿ ನಾಡಿನ ಚಿಂತಕರು ಭಾಗವಹಿಸಲಿದ್ದಾರೆ’ ಎಂದು ತಿಪಟೂರು ಜನಸ್ಪಂದನ ಟ್ರಸ್ಟ್‌ ಅಧ್ಯಕ್ಷ ಸಿ.ಬಿ. ಶಶಿಧರ್‌ ತಿಳಿಸಿದರು.

ಸಾಹಿತಿ ಎಸ್‌.ಜಿ ಸಿದ್ದರಾಮಯ್ಯ, ದಲಿತ ಮುಖಂಡ ಕುಂದೂರು ತಿಮ್ಮಯ್ಯ, ಎಂ.ಬಿ ಪರಮಶಿವಯ್ಯ, ಹಾಲ್ಕುರಿಕೆ ಗ್ರಾ.ಪಂ.ಅಧ್ಯಕ್ಷ ಎಂ.ಬಿ. ಉಮಾಮಹೇಶ್‌, ಮಾಜಿ ಜಿ.ಪಂ.ಸದಸ್ಯ ತ್ರಿಯಾಂಬಕ, ಶ್ರೀಕಾಂತ್‌ ಕೆಳಹಟ್ಟಿ , ನಾಗತಿಹಳ್ಳಿ ಕೃಷ್ಣಮೂರ್ತಿ, ಶರತ್‌ ಕಲ್ಲೇ-ಗೌಡನಪಾಳ್ಯ ಭಾಗವಹಿಸಿದ್ದರು.

‘ಚಕ್ರತೀರ್ಥ ಸಮಿತಿ ಪರಿಷ್ಕರಿಸಿದ ಪಠ್ಯಪುಸ್ತಕ ರದ್ದುಪಡಿಸಿ’

ಕೊಪ್ಪ: ‘ರೋಹಿತ್‌ ಚಕ್ರತೀರ್ಥ ಸಮಿತಿ ಪರಿಷ್ಕರಿಸಿದ ಪಠ್ಯಪುಸ್ತಕ ರದ್ದುಪಡಿಸಬೇಕು. ಈ ನಿಟ್ಟಿನಲ್ಲಿ ಕುವೆಂಪು ಅವರ ಹುಟ್ಟೂರಿನಿಂದಲೇ ಪಕ್ಷಾತೀತವಾಗಿ ಹೋರಾಟ ಆರಂಭಿಸಬೇಕು’ ಎಂದು ಕಾಂಗ್ರೆಸ್‌ ಮುಖಂಡ ಕಿಮ್ಮನೆ ರತ್ನಾಕರ್‌ ಹೇಳಿದರು.

ಪರಿಷ್ಕೃತ ಪಠ್ಯ ಪುಸ್ತಕ ಹಿಂಪಡೆದು ಹಳೆಯ ಪಠ್ಯ ಪುಸ್ತಕಗಳನ್ನೇ ಕೊಡಬೇಕು ಎಂದು ಒತ್ತಾಯಿಸಿ ‘ಪಠ್ಯ ಪುಸ್ತಕವೋ… ಪಕ್ಷ ಪುಸ್ತಕವೋ?’ ವಿಷಯ ಕುರಿತು ಮಲೆನಾಡು ಜನಪರ ಒಕ್ಕೂಟ, ವಿಶ್ವಮಾನವ ಸಂದೇಶ ವೇದಿಕೆ ವತಿಯಿಂದ ಸೋಮವಾರ ಇಲ್ಲಿಯ ಪುರಭವನದಲ್ಲಿ ಆಯೋಜಿಸಿದ್ದ ಸಂವಾದದಲ್ಲಿ ಮಾತನಾಡಿದರು.

‘ನಾನು ಶಿಕ್ಷಣ ಸಚಿವನಾಗಿದ್ದಾಗ ಎಡ–ಬಲ ಎಲ್ಲರನ್ನೂ ಕಚೇರಿಗೆ ಕರೆದು ಪಠ್ಯ ಪರಿಷ್ಕರಣೆ ಬಗ್ಗೆ ಚರ್ಚಿಸಿ, ಮಾಹಿತಿ ಪಡೆದಿದ್ದೆ. ಬರಗೂರು ರಾಮಚಂದ್ರಪ್ಪ ಅವರ ಮನೆಗೆ ಹೋಗಿ ಚರ್ಚಿಸಿದ್ದೆ. ಪರಿಷ್ಕರಣೆಗೆ ಎರಡೂವರೆ ವರ್ಷಗಳ ಕಾಲ ಹಿಡಿಯುತ್ತದೆ, ಆದರೆ ಈಗಿನ ಸಮಿತಿ 15 ದಿನಗಳಲ್ಲೇ ಬದಲಾವಣೆ ಮಾಡಿ ಮೂರ್ಖತನ ತೋರಿಸಿದೆ’ ಎಂದು ಟೀಕಿಸಿದರು.

ಚಿತ್ರ ಸಾಹಿತಿ ಕವಿರಾಜ್‌ ಮಾತನಾಡಿ, ‘ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದರೆ ಸಮಾಜಕ್ಕೆ ಕಂಟಕವಾಗುವುದನ್ನು ಖಂಡಿತಾ ಒಪ್ಪಿಕೊಳ್ಳುತ್ತಿರಲಿಲ್ಲ. ಆದರೆ, ಈಗ ಎಲ್ಲವನ್ನೂ ಆರ್‌ಎಸ್‌ಎಸ್‌ನವರೇ ನಿಯಂತ್ರಿಸುತ್ತಿದ್ದಾರೆ. ಮತ್ತೆ ಚಾತುರ್ವರ್ಣ ವ್ಯವಸ್ಥೆಗೆ ಕೊಂಡೊಯ್ಯಬೇಕು ಎಂಬ ಉದ್ದೇಶದಿಂದಲೇ ಪಠ್ಯ ಪುಸ್ತಕ ಪರಿಷ್ಕರಣೆ ಈ ರೀತಿಯಾಗಿ ತಿದ್ದಿದ್ದಾರೆ’ ಎಂದು ಆರೋಪಿಸಿದರು.

ಈಡೇರದ ರೈತರ ಬೇಡಿಕೆ: ಆಂದೋಲನದ ಬೆದರಿಕೆ

ನವದೆಹಲಿ: ಕಳೆದ ವರ್ಷ ಡಿಸೆಂಬರ್‌ 9ರಂದು ಪ್ರತಿಭಟನೆ ಹಿಂತೆಗೆದುಕೊಳ್ಳುವ ಮುನ್ನ ಲಿಖಿತ ರೂಪದಲ್ಲಿ ನೀಡಿದ್ದ ಭರವಸೆಗಳನ್ನು ಕೇಂದ್ರ ಸರ್ಕಾರವು ಈಡೇರಿಸಿಲ್ಲ ಎಂದು ರೈತ ಸಂಘಟನೆ ‘ಸಂಯುಕ್ತ ಕಿಸಾನ್‌ ಮೋರ್ಚಾ (ಎಸ್‌ಕೆಎಂ)’ ಆರೋಪಿಸಿದೆ.

’ಸರ್ಕಾರವು ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಕುರಿತು ಸಮಿತಿಯನ್ನು ರಚಿಸಿಲ್ಲ. ರೈತರ ಮೇಲಿನ ಸುಳ್ಳು ಪ್ರಕರಣಗಳನ್ನು ಹಿಂಪಡೆದಿಲ್ಲ’ ಎಂದು ಎಸ್‌ಕೆಎಂ ಆರೋಪಿಸಿದೆ.

ಸಂಸತ್ತಿನ ಮುಂಗಾರು ಅಧಿವೇಶನ ನಡೆಯುವ ಜುಲೈ 18ರಿಂದ 31ರ ವರೆಗೆ ‘ದ್ರೋಹದ ವಿರುದ್ಧ ಪ್ರತಿಭಟನೆ’ ಎಂಬ ಹೆಸರಿನಲ್ಲಿ ದೇಶದಾದ್ಯಂತ ಜಿಲ್ಲಾ ಮಟ್ಟದಲ್ಲಿ ಮತ್ತೆ ಆಂದೋಲನವನ್ನು ಪ್ರಾರಂಭಿಸಲಾಗುವುದು ಎಂದು ಸಂಘಟನೆ ಎಚ್ಚರಿಸಿದೆ. ಜುಲೈ 31ರಂದು ದೇಶದಾದ್ಯಂತ ಬೆಳಿಗ್ಗೆ 11 ರಿಂದ ಮಧ್ಯಾಹ್ನ 3 ರವರೆಗೆ ಎಲ್ಲಾ ಪ್ರಮುಖ ಹೆದ್ದಾರಿಗಳ ತಡೆ ನಡೆಸಲಾಗುವುದು ಎಂದು ಸಂಘಟನೆ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಕೇಂದ್ರದ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ: ಭದ್ರತಾ ಲೋಪ ಆಗಿಲ್ಲ; ಎಸ್ಪಿ

ಪ್ರಧಾನಿ ಮೋದಿ ಪ್ರಯಾಣದ ವೇಳೆ ಕಪ್ಪು ಬಲೂನ್ ಹಾರಾಟ: ಬಂಧನ

ಅಮರಾವತಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಪ್ರಯಾಣಿಸುತ್ತಿದ್ದ ಹೆಲಿಕಾಪ್ಟರ್ ಮಾರ್ಗದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನಾ ಸಂಕೇತವಾಗಿ ಹೈಡ್ರೋಜನ್ ತುಂಬಿದ್ದ ಕಪ್ಪು ಬಲೂನುಗಳನ್ನು ಹಾರಿಸಿದ್ದು, ಈ ಪೈಕಿ ಒಬ್ಬನನ್ನು ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಪ್ರಧಾನಿಯವರು ಪ್ರಯಾಣಿಸುವ ವೇಳೆ ಕಪ್ಪು ಬಲೂನುಗಳನ್ನು ಹಾರಿಬಿಟ್ಟಿರುವುದು ದೊಡ್ಡ ಭದ್ರತಾ ಲೋಪ. ಈ ಕುರಿತು ವಿವರಣೆ ನೀಡುವಂತೆ ಪ್ರಧಾನಿಯವರ ವಿಶೇಷ ಭದ್ರತಾ ಪಡೆಯ (ಎಸ್‌ಪಿಜಿ) ಅಧಿಕಾರಿಗಳು ರಾಜ್ಯ ಪೊಲೀಸರಿಗೆ ಸೂಚಿಸಿದ್ದಾರೆ. 'ಬಲೂನ್‌ಗಳ ಬದಲು ಡ್ರೋನ್ ಹಾರಿಸಿದ್ದರೆ ಏನು ಗತಿ' ಎಂದೂ ಪ್ರಶ್ನಿಸಿರುವುದಾಗಿ ಹೇಳಲಾಗಿದೆ.

ಮೋದಿ ಅವರು ಸ್ವಾತಂತ್ರ್ಯ ಹೋರಾಟಗಾರ ಅಲ್ಲೂರಿ ಸೀತಾರಾಮ ರಾಜು ಅವರ ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಸಲುವಾಗಿ ವಿಜಯವಾಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಭೀಮಾವರಮ್‌ಗೆ ಎಂಐ–17 ಹೆಲಿಕಾಪ್ಟರ್‌ನಲ್ಲಿ ಪ್ರಯಾಣಿಸುತ್ತಿದ್ದರು.ಈ ವೇಳೆ ಘಟನೆ ನಡೆದಿದೆ. ನಮ್ಮಿಂದ ಯಾವುದೇ ಭದ್ರತಾ ಲೋಪ ಆಗಿಲ್ಲವೆಂದು ಪೊಲೀಸರು ತಿಳಿಸಿದ್ದಾರೆ.

ಆಂಧ್ರಪ್ರದೇಶಕ್ಕೆ ವಿಶೇಷ ಸ್ಥಾನಮಾನ ನೀಡುವ ವಿಚಾರದಲ್ಲಿ ಮೋದಿ, ಹುಸಿ ಭರವಸೆ ನೀಡಿದ್ದಾರೆ. ಹೀಗಾಗಿ ಅವರ ರಾಜ್ಯ ಪ್ರವಾಸದ ವೇಳೆ ಪ್ರತಿಭಟನೆ ನಡೆಸುವಂತೆ ಆಂಧ್ರಪ್ರದೇಶ ಕಾಂಗ್ರೆಸ್ ಸಮಿತಿ ಕರೆ ನೀಡಿತ್ತು.

ಗನ್ನಾವರಂನಲ್ಲಿರುವ ವಿಮಾನ ನಿಲ್ದಾಣದಿಂದ ಕೆಲ ಕಿ.ಮೀ.ನಷ್ಟು ದೂರವಿರುವ ಹಳ್ಳಿಯೊಂದರಲ್ಲಿನ ನಿರ್ಮಾಣ ಹಂತದ ಕಟ್ಟಡ ಏರಿದ್ದ ಕಾಂಗ್ರೆಸ್ ಕಾರ್ಯಕರ್ತರು ಬಲೂನುಗಳನ್ನು ಆಗಸದತ್ತ ಹಾರಿಬಿಟ್ಟಿದ್ದರು. ಈ ಕುರಿತ ವಿಡಿಯೊವನ್ನು ಕಾಂಗ್ರೆಸ್ ಹಂಚಿಕೊಂಡಿತ್ತು.


'ವಿಮಾನ ನಿಲ್ದಾಣದಲ್ಲಿ ಯಾವುದೇ ಭದ್ರತಾ ಲೋಪ ಆಗಿಲ್ಲ. ನಿಲ್ದಾಣದಿಂದ 4.5 ಕಿ.ಮೀ.ದೂರದಲ್ಲಿರುವ ಸುರಂಪಲ್ಲಿ ಗ್ರಾಮದ ನಿರ್ಮಾಣ ಹಂತದ ಕಟ್ಟಡವೊಂದರ ಮೇಲಿನಿಂದ ಕಾಂಗ್ರೆಸ್‌ನ ಇಬ್ಬರು ಕಾರ್ಯಕರ್ತರು ಕಪ್ಪು ಬಲೂನು ಹಾರಿಸಿದ್ದರು. ಆಗಷ್ಟೇ ಪ್ರಧಾನಿಯವರಿದ್ದ ಹೆಲಿಕಾಪ್ಟರ್ ನಿಲ್ದಾಣದಿಂದ ಹೊರಟಿತ್ತು. ಈ ಪೈಕಿ ಒಬ್ಬನನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ' ಎಂದು ಕೃಷ್ಣಾ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ ಪಿ.ಜೊಶುವಾ ಹೇಳಿದ್ದಾರೆ.

'ಪ್ರಧಾನಿ ಭೇಟಿಯ ವೇಳೆ ಕಾಂಗ್ರೆಸ್ ಕಾರ್ಯಕರ್ತರು ಕಪ್ಪು ಬಲೂನುಗಳೊಂದಿಗೆ ವಿಮಾನ ನಿಲ್ದಾಣದೊಳಗೆ ಪ್ರವೇಶಿಸಲು ಯತ್ನಿಸಿದ್ದರು. ಈ ಸಂಬಂಧ ಕಾಂಗ್ರೆಸ್ ಮಹಿಳಾ ಘಟಕದ ಮುಖಂಡೆ ಸುಂಕಾರ ಪದ್ಮಶ್ರೀ ಸೇರಿದಂತೆ ಮೂವರನ್ನು ವಶಕ್ಕೆ ಪಡೆಯಲಾಗಿದೆ. ಸ್ಥಳದಲ್ಲಿದ್ದ ಸಿಬ್ಬಂದಿ ಬಲೂನುಗಳನ್ನು ಒಡೆದುಹಾಕಿದ್ದಾರೆ' ಎಂದು ಮಾಹಿತಿ ನೀಡಿದ್ದಾರೆ.

ಪ್ರಧಾನಿ ಭೇಟಿ ವೇಳೆ ಭದ್ರತೆಗಾಗಿ ವಿಮಾನ ನಿಲ್ದಾಣದ ಸುತ್ತಲೂ ಒಟ್ಟು 8 ಸಾವಿರ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು.

ಮುಖ್ಯಾಂಶಗಳು

- ಭದ್ರತಾ ಲೋಪದ ಕುರಿತು ರಾಜ್ಯ ಪೊಲೀಸರಿಂದ ವಿವರಣೆ ಕೇಳಿದ ಎಸ್‌ಪಿಜಿ
- 'ಆಂಧ್ರಪ್ರದೇಶಕ್ಕೆ ವಿಶೇಷ ಸ್ಥಾನಮಾನದ ವಿಚಾರದಲ್ಲಿ ಮೋದಿ ಹುಸಿ ಭರವಸೆ'
- ವಿಮಾನ ನಿಲ್ದಾಣದೊಳಗೆ ನುಗ್ಗಲು ಕಾಂಗ್ರೆಸ್ ಕಾರ್ಯಕರ್ತರ ಯತ್ನ



ದೋಣಿಗಳ ಲಂಗರು...

ಕೇರಳದ ತಿರುವನಂತಪುರದಲ್ಲಿ ಕೆಲ ದಿನಗಳಿಂದ ಜೋರು ಮಳೆ ಸುರಿಯುತ್ತಿದ್ದು, ಸಮುದ್ರಕ್ಕೆ ಇಳಿಯದಂತೆ ಮೀನುಗಾರರಿಗೆ ಸೂಚನೆ ನೀಡಲಾಗಿದೆ. ಹೀಗಾಗಿ ವಿಜಿಂಜಾಮ್ ಮೀನುಗಾರಿಕಾ ಬಂದರಿನಲ್ಲಿ ದೋಣಿಗಳು ಸಾಲುಗಟ್ಟಿ ನಿಂತಿದ್ದ ದೃಶ್ಯ ಸೋಮವಾರ ಕಂಡುಬಂತು –ಪಿಟಿಐ ಚಿತ್ರ

'ಶಸ್ತ್ರಾಸ್ತ್ರಗಳ ಅಕ್ರಮ ಸಾಗಣೆಗೆ ತಡೆಯೊಡ್ಡಿ'

ನವದೆಹಲಿ (ಪಿಟಿಐ): ಭಯೋತ್ಪಾದನೆ ಪಿಡುಗು ಹತ್ತಿಕ್ಕಲು ಸಣ್ಣ ಪ್ರಮಾಣದ ಮತ್ತು ಹಗುರವಾದ ಶಸ್ತ್ರಾಸ್ತ್ರಗಳ ಅಕ್ರಮ ಸಾಗಣೆಯ ತಡೆಗೆ ವಿಶ್ವಸಂಸ್ಥೆಯ ಕ್ರಿಯಾಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು ಎಂದು ಭಾರತ ಕರೆ ನೀಡಿದೆ.

ಸಣ್ಣ ಮತ್ತು ಹಗುರವಾದ ಶಸ್ತ್ರಾಸ್ತ್ರಗಳ ಅಕ್ರಮ ಸಾಗಣೆ ತಡೆ ಮತ್ತು ಕಡಿವಾಣ ಕುರಿತಂತೆ ವಿಶ್ವಸಂಸ್ಥೆಯ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಸದಸ್ಯ ರಾಷ್ಟ್ರಗಳ ಎಂಟನೇ ದ್ವೈವಾರ್ಷಿಕ ಸಭೆಯಲ್ಲಿ ಭಾರತ ಈ ಹಕ್ಕೊತ್ತಾಯ ಮಂಡಿಸಿತು.

ಅಂತರರಾಷ್ಟ್ರೀಯ ಮಟ್ಟದಲ್ಲಿ ಶಸ್ತ್ರಾಸ್ತ್ರಗಳ ಅಕ್ರಮ ಸಾಗಣೆಯನ್ನು ಗುರುತಿಸಿ, ತಡೆಯಲು ಯೋಜನೆಯ ಅನುಷ್ಠಾನ ಪ್ರಕ್ರಿಯೆಯನ್ನು ಬಲಪಡಿಸುವ ಕುರಿತ ಕಾರ್ಯಸೂಚಿಯನ್ನು ಸಭೆಯು ಅಂಗೀಕರಿಸಿತು.

ಅನಿಸಿದ್ದನ್ನು ಹೇಳಲು ಪ್ರಾಣ ತೆರಲೂ ಸಿದ್ಧ: ನಿರ್ದೇಶಕಿ ಲೀನಾ

ಕಾಳಿ ಮಾತೆ ಪೋಸ್ಟರ್ ವಿವಾದ

ನವದೆಹಲಿ (ಪಿಟಿಐ): ತಮ್ಮ ಸಾಕ್ಷ್ಯಚಿತ್ರದಲ್ಲಿ ಕಾಳಿ ಮಾತೆಯ ಕೈಯಲ್ಲಿ ಸಿಗರೇಟು ಮತ್ತು ಎಲ್‌ಜಿಬಿಟಿಕ್ಯು ಬಾವುಟ ಹಿಡಿದ ಪೋಸ್ಟರ್‌ನಿಂದಾಗಿ ವಿವಾದಕ್ಕೀಡಾಗಿರುವ ಚಿತ್ರ ನಿರ್ದೇಶಕಿ ಲೀನಾ ಮಣಿಮೇಕಲೈ ಅವರು ತಾವು ಬದುಕಿರುವವರೆಗೂ ಯಾವುದೇ ಭಯವಿಲ್ಲದೇ ಧ್ವನಿ ಎತ್ತುವುದಾಗಿ ಸೋಮವಾರ ತಿಳಿಸಿದ್ದಾರೆ.

'ಲೀನಾ ಮಣಿಮೇಕಲೈ ಬಂಧಿಸಿ' ಹ್ಯಾಷ್‌ಟ್ಯಾಗ್ ಅಡಿಯಲ್ಲಿ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟರ್ ವಿರುದ್ಧ ಅಭಿಯಾನ ನಡೆಯುತ್ತಿದ್ದು, ಚಿತ್ರ ನಿರ್ದೇಶಕಿ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿದ್ದಾರೆ ಎಂದು 'ಗೌ ಮಹಾಸಭಾ' ಸಂಘಟನೆಯ ಸದಸ್ಯರೊಬ್ಬರು ಆರೋಪಿಸಿ ದೆಹಲಿ ಪೊಲೀಸರಿಗೆ ದೂರು ನೀಡಿದ್ದಾರೆ.

ತಮ್ಮ ವಿರುದ್ಧವಾದ ವ್ಯಕ್ತವಾಗಿರುವ ಆಕ್ರೋಶಗಳಿಗೆ ಟ್ವಿಟರ್‌ನಲ್ಲಿ ತಮಿಳಿನಲ್ಲಿ ಲೇಖನದ ಮೂಲಕ ಪ್ರತಿಕ್ರಿಯಿಸಿರುವ ಲೀನಾ, 'ನನಗೆ ಕಳೆದುಕೊಳ್ಳಲು ಏನೂ ಇಲ್ಲ. ನಾನು ಬದುಕಿರುವವರೆಗೂ ನಾನು ನಂಬಿದ್ದನ್ನು ನಿರ್ಭೀತಿಯಿಂದ ಮಾತನಾಡಲು ಬಯಸುತ್ತೇನೆ. ಇದಕ್ಕಾಗಿ ನಾನು ನನ್ನ ಪ್ರಾಣವನ್ನು ತೆರಬೇಕಾಗಿ ಬಂದರೆ, ಅದಕ್ಕೂ ಸಿದ್ಧ' ಎಂದು ಬರೆದುಕೊಂಡಿದ್ದಾರೆ.



ಲೀನಾ ಮಣಿಮೇಕಲೈ

ಮದುರೆಯಲ್ಲಿ ಹುಟ್ಟಿರುವ, ಟೊರೊಂಟೊ ಮೂಲದ ನಿರ್ದೇಶಕಿ ಲೀನಾ ಅವರು ಟ್ವಿಟರ್‌ನಲ್ಲಿ ಶನಿವಾರ 'ಕಾಳಿ' ಮಾತೆಯ ಚಿತ್ರ ಹಂಚಿಕೊಂಡಿದ್ದರು. ' ಈ ಸಿನಿಮಾವು ಟೊರೊಂಟೊದಲ್ಲಿರುವ ಅಗಾ ಖಾನ್ ಮ್ಯೂಸಿಯಂನ 'ರಿದಮ್ಸ್ ಆಫ್ ಕೆನಡಾ'ದ ಭಾಗವಾಗಿದೆ. ಪೋಸ್ಟರ್‌ನ ಹಿಂದಿರುವ ಉದ್ದೇಶಗಳನ್ನು ಅರ್ಥಮಾಡಿಕೊಳ್ಳಲು ಜನರು ಸಿನಿಮಾವನ್ನು ವೀಕ್ಷಿಸಬೇಕೆಂದು ಲೀನಾ ಒತ್ತಾಯಿಸಿದ್ದಾರೆ.

'ಟೊರೊಂಟೊ ನಗರದಲ್ಲಿ ಒಂದು ಸಂಜೆ ವೇಳೆ ಕಾಳಿ ಮಾತೆಯು ಸುತ್ತಾಡುತ್ತಿರುವಾಗ ನಡೆದ ವಿದ್ಯಮಾನಗಳ ಕುರಿತ ಚಿತ್ರ ಇದಾಗಿದೆ. ಜನರು ಈ ಚಿತ್ರ ವೀಕ್ಷಿಸಿದಲ್ಲಿ ಅವರು 'ಲೀನಾ ಮಣಿಮೇಕಲೈ ಬಂಧಿಸಿ' ಎನ್ನುವ ಹ್ಯಾಷ್‌ಟ್ಯಾಗ್ ಬದಲು 'ಲವ್ ಯೂ ಲೀನಾ ಮಣಿಮೇಕಲೈ' ಎನ್ನುವ ಹ್ಯಾಷ್‌ಟ್ಯಾಗ್ ಹಾಕುವರು ಎಂದೂ ಅವರು ಮತ್ತೊಂದು ಲೇಖನದಲ್ಲಿ ಪ್ರತಿಕ್ರಿಯಿಸಿದ್ದಾರೆ.

'ಗೌ ಮಹಾಸಭಾ'ದ ಮತ್ತೊಬ್ಬ ಸದಸ್ಯ ಅಜಯ್ ಗೌತಮ್ ಅವರು ಲೀನಾ ಅವರ ವಿರುದ್ಧ ಪೊಲೀಸರಿಗೆ ಸಲ್ಲಿಸಿರುವ ದೂರಿನ ಪ್ರತಿಯನ್ನು ಸುದ್ದಿಗಾರರಿಗೆ ನೀಡಿದ್ದು, 'ಚಿತ್ರ ನಿರ್ದೇಶಕಿ ಕಾಳಿ ಮಾತೆಯನ್ನು ಅವಹೇಳನಕಾರಿ ಮತ್ತು ಆಕ್ಷೇಪಾರ್ಹವಾಗಿ ಚಿತ್ರಿಸಿದ್ದಾರೆ. ಇದರಿಂದಾಗಿ ಲಕ್ಷಾಂತರ ಭಕ್ತರ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗಿದೆ' ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

'ಇದುವರೆಗೆ ಯಾವುದೇ ದೂರನ್ನು ಸ್ವೀಕರಿಸಿಲ್ಲ' ಎಂದು ಸೈಬರ್ ಸೆಲ್ ವಿಭಾಗದ ಹಿರಿಯ ಪೊಲೀಸ್ ಅಧಿಕಾರಿ ಮಾಹಿತಿ ನೀಡಿದ್ದಾರೆ.

'ಕಾಳಿ ಮಾತೆಯು ಸಿಗರೇಟ್ ಸೇದುತ್ತಿರುವ ಚಿತ್ರವು ಆಕ್ಷೇಪಾರ್ಹವಾಗಿದ್ದು, ಮುಜುಗರವುಂಟು ಮಾಡುತ್ತದೆ. ಚಿತ್ರದ ನಿರ್ದೇಶಕಿ ಲೀನಾ ಮಣಿಮೇಕಲೈ ಅವರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ದೆಹಲಿ ಪೊಲೀಸರಿಗೆ ಹಿಂದೂ ಸೇನೆಯು ಒತ್ತಾಯಿಸುತ್ತದೆ' ಎಂದು ಹಿಂದೂ ಸೇನೆಯ ರಾಷ್ಟ್ರೀಯ ಅಧ್ಯಕ್ಷ ವಿಷ್ಣು ಗುಪ್ತಾ ಟ್ವೀಟ್ ಮಾಡಿದ್ದಾರೆ.

ಗಂಟೆಯೊಳಗೆ ಕೋವಿಡ್ ಪರೀಕ್ಷೆಗೆ 'ಕೋವರ್‌ಸ್ಕ್ಯಾನ್'

ಹ್ಯೂಸ್ಟನ್ (ಪಿಟಿಐ): ಸಾರ್ಸ್ ಕೋವ್–2ನ ವಿವಿಧ ರೂಪಾಂತರ ತಳಿಗಳನ್ನು ಗಂಟೆಯೊಳಗೆ ಖಚಿತವಾಗಿ ಪತ್ತೆ ಹಚ್ಚುವ 'ಕೋವರ್‌ಸ್ಕ್ಯಾನ್' ರ‍್ಯಾಪಿಡ್ ಪರೀಕ್ಷಾ ವಿಧಾನವನ್ನು ಅಮೆರಿಕದ ವಿಜ್ಞಾನಿಗಳು ಅಭಿವೃದ್ಧಿಪಡಿಸಿದ್ದಾರೆ.

ಟೆಕ್ಸಾಸ್ ವಿಶ್ವವಿದ್ಯಾಲಯದ ಸೌಥ್‌ವೆಸ್ಟರ್ನ್ ಮೆಡಿಕಲ್ ಸೆಂಟರ್‌ನ ಸಂಶೋಧನಾರ್ಥಿಗಳು 'ಕೋವರ್‌ಸ್ಕ್ಯಾನ್' ಮೂಲಕ 4 ಸಾವಿರಕ್ಕೂ ಹೆಚ್ಚು ಜನರ ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷೆ ನಡೆಸಿದ್ದಾರೆ.

ಕೋವಿಡ್–19 ಅನ್ನು ಪತ್ತೆ ಹಚ್ಚಲು ನಡೆಸುವ ಈ ವಿಧಾನದ ಪರೀಕ್ಷೆಯು ಇತರ ವಿಧಾನಗಳಂತೆ ನಿಖರವಾಗಿದೆ ಮತ್ತು ಸಾರ್ಸ್ ಕೋವ್–2ನ ವಿವಿಧ ರೂಪಾಂತರ ತಳಿಗಳ ನಡುವಿನ ವ್ಯತ್ಯಾಸವನ್ನು ಸ್ಪಷ್ಟವಾಗಿ ತೋರಿಸುವಲ್ಲಿ ಯಶಸ್ವಿಯಾಗಿದೆ ಎಂದು ತಿಳಿಸಲಾಗಿದೆ.

'ಈ ಪರೀಕ್ಷಾ ವಿಧಾನದ ಮೂಲಕ ಕ್ಷಿಪ್ರಗತಿಯಲ್ಲಿ ಕೋವಿಡ್ ರೂಪಾಂತರಿಯನ್ನು ಗುರುತಿಸಲು ಸಾಧ್ಯವಾಗುತ್ತದೆ. ಈ ಮೂಲಕ ಸಮುದಾಯದಲ್ಲಿ ಹರಡುತ್ತಿರುವ ತಳಿ ಯಾವುದು ಎಂಬುದನ್ನು ಖಚಿತವಾಗಿ ತಿಳಿದುಕೊಳ್ಳಬಹುದು' ಎಂದು ಈ ಕುರಿತ ಅಧ್ಯಯನದಲ್ಲಿ ತೊಡಗಿರುವ ಹಿರಿಯ ಸಂಶೋಧಕರು ತಿಳಿಸಿದ್ದಾರೆ.

ವೈರಾಣು ಕೊಲ್ಲುವ ಎನ್–95 ಮಾಸ್ಕ್

ವಾಷಿಂಗ್ಟನ್ (ಪಿಟಿಐ): ಕೊರೊನಾ ವೈರಾಣು ಹರಡುವಿಕೆ ತಡೆಯುವುದರ ಜತೆಗೆ ಕೋವಿಡ್‌ಗೆ ಕಾರಣವಾಗುವ ಸಾರ್ಸ್–ಕೋವ್–2 ವೈರಾಣು ಕೊಲ್ಲುವ ಹೊಸ ಮಾದರಿಯ ಎನ್–95 ಫೇಸ್ ಮಾಸ್ಕ್ ಅನ್ನು ಸಂಶೋಧಕರು ಸಿದ್ಧಪಡಿಸಿದ್ದಾರೆ.

ಈ ಮಾಸ್ಕ್ ಅನ್ನು ದೀರ್ಘ ಸಮಯದವರೆಗೆ ಬಳಸಬಹುದಾಗಿದ್ದು, ಕಡಿಮೆ ಪ್ಲಾಸ್ಟಿಕ್ ತ್ಯಾಜ್ಯ ಉತ್ಪಾದಿಸುತ್ತದೆ. ಪದೇ ಪದೇ ಮಾಸ್ಕ್ ಬದಲಿಸುವುದು ತಪ್ಪುತ್ತದೆ ಎನ್ನುತ್ತಾರೆ ಸಂಶೋಧಕರು.

'ದೀರ್ಘಾವಧಿ ಬಾಳಿಕೆ ಮತ್ತು ವೈಯಕ್ತಿಕ ರಕ್ಷಣಾ ಸಾಮಗ್ರಿ ತಯಾರಿಕೆಯ ಪ್ರಯತ್ನದ ಮೊದಲ ಹೆಜ್ಜೆ ಇದಾಗಿದೆ' ಎಂದು ಅಮೆರಿಕದ ರೆನ್‌ಸೆಲ್ಲರ್ ಪಾಲಿಟೆಕ್ನಿಕ್ ಇನ್‌ಸ್ಟಿಟ್ಯೂಟ್‌ನ ಎಡ್ಮಂಡ್ ಪಲೆರ್ಮೊ ಝಾ ಹೇಳಿದ್ದಾರೆ.

'ಅಪ್ಲೈಡ್ ಎಸಿಎಸ್ ಮೆಟೀರಿಯಲ್ಸ್ ಅಂಡ್ ಇಂಟರ್‌ಫೇಸ್' ಜರ್ನಲ್‌ನಲ್ಲಿ ಇತ್ತೀಚೆಗೆ ಪ್ರಕಟವಾದ ಸಂಶೋಧನೆಯಲ್ಲಿ, ತಂಡವು ಎನ್-95 ಫೇಸ್ ಮಾಸ್ಕ್‌ಗಳಲ್ಲಿ ಬಳಸಲಾಗುವ ಪಾಲಿಪ್ರೊಪಿಲೀನ್ ಫಿಲ್ಟರ್‌ಗಳಿಗೆ ಬ್ರಾಡ್-ಸ್ಪೆಕ್ಟ್ರಮ್ ಆಂಟಿಮೈಕ್ರೊಬಿಯಲ್ ಪಾಲಿಮರ್‌ಗಳನ್ನು ಯಶಸ್ವಿಯಾಗಿ ಕಸಿಮಾಡಿರುವುದನ್ನು ಉಲ್ಲೇಖಿಸಲಾಗಿದೆ.

'ಮಾಸ್ಕ್‌ಗಳ ಫೈಬರ್ ಜಾಲಗಳಲ್ಲಿ ಬದಲಾವಣೆ ಮಾಡುವಾಗ ಅದಕ್ಕೆ ಯಾವುದೇ ಅಡ್ಡಿಯಾಗದಂತೆ ನೋಡಿಕೊಳ್ಳಬೇಕು. ಇಲ್ಲವಾದರೆ ಉಸಿರಾಟಕ್ಕೆ ತೊಂದರೆಯಾಗುವ ಅಪಾಯವಿದೆ. ಹೀಗಾಗಿ, ತಂಡವು ನೇರಳಾತೀತ (ಯುವಿ) ಕಿರಣಗಳನ್ನು ಬಳಸಿಕೊಂಡು ನಾನ್ ಪಾಲಿಪ್ರೊಪಿಲೀನ್ ಬಟ್ಟೆಗಳ ಫೈಬರ್ ಮೇಲ್ಮೈಗಳಿಗೆ ಆಂಟಿಮೈಕ್ರೊಬಿಯಲ್ ಕ್ವಾಟರ್ನರಿ ಅಮೋನಿಯಂ ಪಾಲಿಮರ್‌ಗಳನ್ನು ಜೋಡಿಸಿದೆ.

'ನಾವು ಅಭಿವೃದ್ಧಿಪಡಿಸಿರುವ ಈ ಪಾಲಿಮರ್ ಲೇಪನವನ್ನು ರಚಿಸಲು ಸರಳವಾದ ರಸಾಯನಶಾಸ್ತ್ರವನ್ನು ಬಳಸಿದ್ದೇವೆ. ಅವು ವೈರಸ್‌ಗಳು ಮತ್ತು ಬ್ಯಾಕ್ಟೀರಿಯಾಗಳನ್ನು ಅವುಗಳ ಹೊರ ಪದರವನ್ನು ತೆರೆಯುವ ಮೂಲಕ ಕೊಲ್ಲುತ್ತವೆ' ಎಂದು ಝಾ ಹೇಳಿದರು.

'ಇದು ತುಂಬಾ ಸರಳ ವಿಧಾನವಾಗಿದೆ' ಎಂದೂ ಅವರು ಹೇಳಿದರು.

ಈ ತಂಡವು ತಮ್ಮ ಪ್ರಕ್ರಿಯೆಯಲ್ಲಿ ಯುವಿ ಲೈಟ್ ಮತ್ತು ಅಸಿಟೋನ್ ಅನ್ನು ಮಾತ್ರ ಬಳಸಿದೆ. ಅವುಗಳು ವ್ಯಾಪಕವಾಗಿ ಲಭ್ಯವಿದ್ದು, ಈ ಪ್ರಕ್ರಿಯೆ ಕಾರ್ಯಗತಗೊಳಿಸಲು ಸುಲಭವಾಗಿದೆ.

ಸಂಕ್ಷಿಪ್ತ ಸುದ್ದಿ

ಲುಹಾನ್‌ಸ್ಕ್: ವಿಜಯ ಘೋಷಿಸಿದ ವ್ಲಾಡಿಮಿರ್ ಪುಟಿನ್

ಪೊಕ್ರೊವ್‌ಸ್ಕ್(ಉಕ್ರೇನ್)/ ಮಾಸ್ಕೊ (ಎಪಿ): ಉಕ್ರೇನ್ ತನ್ನ ಪಡೆಗಳ ಸೈನಿಕರ ಕೊನೆ ತಂಡವನ್ನು ಹಿಂತೆಗೆದುಕೊಂಡ ಒಂದು ದಿನದ ನಂತರ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಡಾನ್‌ಬಾಸ್ ಪ್ರದೇಶದ ಲುಹಾನ್‌ಸ್ಕ್‌ನಲ್ಲಿ ವಿಜಯ ಘೋಷಿಸಿದರು.

ಸೋಮವಾರ ವರ್ಚ್ಯುವಲ್ ಸಭೆಯಲ್ಲಿ ರಷ್ಯಾ ರಕ್ಷಣಾ ಸಚಿವ ಸೆರ್ಗೀ ಶೋಯಿಗು ತಮ್ಮ ಪಡೆಗಳು ಲುಹಾನ್‌ಸ್ಕ್ ನಿಯಂತ್ರಣಕ್ಕೆ ತೆಗೆದುಕೊಂಡಿರುವುದಾಗಿ ಪುಟಿನ್ ಅವರಿಗೆ ತಿಳಿಸಿದರು. ಇದೇ ವೇಳೆ, ಉಕ್ರೇನ್ ಮೇಲೆ ಆಕ್ರಮಣ ಮುಂದುವರಿಸುವಂತೆ ಪುಟಿನ್ ಸಚಿವರಿಗೆ ಆದೇಶಿಸಿದರು.

ಮಾಲ್‌ನಲ್ಲಿ ಗುಂಡಿನ ದಾಳಿ: ಕನಿಷ್ಠ 3 ಸಾವು

ಕೊಪನ್‌ಹೇಗನ್ (ಎಪಿ): ಡೆನ್ಮಾರ್ಕ್ ರಾಜಧಾನಿ ಕೊಪನ್‌ಹೇಗನ್‌ನ ಶಾಪಿಂಗ್ ಮಾಲ್‌ವೊಂದರಲ್ಲಿ ಬಂದೂಕುಧಾರಿಯೊಬ್ಬ ಭಾನುವಾರ ನಡೆಸಿದ ಗುಂಡಿನ ದಾಳಿಯಲ್ಲಿ ಕನಿಷ್ಠ ಮೂವರು ಮೃತಪಟ್ಟು, ನಾಲ್ವರು ಗಾಯಗೊಂಡಿದ್ದಾರೆ.


ಈ ಸಂಬಂಧ ಸೋಮವಾರ 22 ವರ್ಷದ ಆರೋಪಿಯನ್ನು ಬಂಧಿಸಲಾಗಿದ್ದು, ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಿಜೆಪಿ ಸಂಸದರ ವಿರುದ್ಧ ಛತ್ತೀಸ್‌ಗಡದಲ್ಲಿ ಪ್ರಕರಣ ದಾಖಲು

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ತಿರುಚಿದ ವಿಡಿಯೊ ಹಂಚಿಕೊಂಡ ಆರೋಪದಲ್ಲಿ ಬಿಜೆಪಿ ಸಂಸದರಾದ ರಾಜ್ಯವರ್ಧನ ಸಿಂಗ್ ರಾಥೋಡ್, ಸುಬ್ರತ್ ಪಾಠಕ್ ಹಾಗೂ ಇತರ ಮೂವರ ವಿರುದ್ಧ ಛತ್ತೀಸ್‌ಗಡದ ಬಿಲಾಸ್‌ಪುರದಲ್ಲಿ ಎಫ್‌ಐಆರ್ ದಾಖಲಾಗಿದೆ ಎಂದು ಕಾಂಗ್ರೆಸ್‌ನ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಸೋಮವಾರ ತಿಳಿಸಿದ್ದಾರೆ.

ಇವರ ವಿರುದ್ಧ ದೆಹಲಿ, ಜಾರ್ಖಂಡ್, ಮಹಾರಾಷ್ಟ್ರ, ಮಧ್ಯ ಪ್ರದೇಶ, ರಾಜಸ್ಥಾನ ಮತ್ತು ಉತ್ತರ ಪ್ರದೇಶದಲ್ಲೂ ಕಾಂಗ್ರೆಸ್ ದೂರು ದಾಖಲಿಸಿದೆ ಎಂದಿದ್ದಾರೆ.

ಷೇರುಪೇಟೆ ವಹಿವಾಟು 327



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,752
ಇಂದಿನ ಅಂತ್ಯ	15,835
▲	83
ದಿನದ ಕನಿಷ್ಠ	15,511

ವಿನಿಮಯ ದರ

$ ಡಾಲರ್	78.94
£ ಪೌಂಡ್	95.76
€ ಯುರೊ	82.43
¥ ಯೆನ್ (100ಕ್ಕೆ)	58

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹560
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹560

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1600 (1600)
ಸೋಯಾ (ರಿಫೈನ್ಡ್)	₹1300 (1330)
ಸೂರ್ಯಕಾಂತಿ (ರಿಫೈನ್ಡ್)	₹1640 (1650)
ಪಾಮೋಲಿನ್	₹1232 (1250)

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹345-570
ದ್ವಿತಳಿ (ಬಿ.ವಿ)	₹450-836

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)


ಆರ್‌ಎಸ್‌ಎಸ್-4	₹176.50
ಆರ್‌ಎಸ್‌ಎಸ್-5	₹167
ಗುಡ್ ಲಾಟ್	₹158.50

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಚಿನ್ನದ ದರ ₹ 241, ಬೆಳ್ಳಿ ಧಾರಣೆ ₹ 245 ಏರಿಕೆ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ಚಿನ್ನದ ದರ ₹ 241 ಏರಿಕೆ ಕಂಡು 10 ಗ್ರಾಂಗೆ ₹ 52,048ರಂತೆ ಮಾರಾಟ ಆಯಿತು. ಬೆಳ್ಳಿ ಧಾರಣೆ ಕೆ.ಜಿ.ಗೆ ₹ 254 ಹೆಚ್ಚಾಗಿ ₹ 58,139ಕ್ಕೆ ತಲುಪಿತು.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆಯಿಂದ ದೇಶಿ ಮಾರುಕಟ್ಟೆಯಲ್ಲಿಯೂ ಏರಿಕೆ ಆಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಕರೆನ್ಸಿ ಮಾರುಕಟ್ಟೆಯಲ್ಲಿ ಡಾಲರ್ ಮೌಲ್ಯ ಇಳಿಕೆ ಹಾಗೂ ಜಾಗತಿಕ ಆರ್ಥಿಕತೆ ಬೆಳವಣಿಗೆಯು ಇಳಿಕೆ ಕಾಣುವ ಆತಂಕದಿಂದಾಗಿ ಚಿನ್ನದ ದರವು ಏರಿಕೆ ಕಂಡಿತು ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ತಪನ್ ಪಟೇಲ್ ಹೇಳಿದ್ದಾರೆ.

ಎಫ್‌ಎಂಸಿಜಿ, ಬ್ಯಾಂಕ್, ಐ.ಟಿ. ಷೇರುಗಳ ಗಳಿಕೆ

ಮುಂಬೈ (ಪಿಟಿಐ): ಬ್ಯಾಂಕಿಂಗ್, ಎಫ್‌ಎಂಸಿಜಿ ಮತ್ತು ಐ.ಟಿ. ವಲಯದ ಷೇರುಗಳ ಉತ್ತಮ ಗಳಿಕೆಯ ಕಾರಣದಿಂದಾಗಿ ದೇಶಿ ಷೇರುಪೇಟೆಗಳು ಮೂರು ದಿನಗಳ ನಕಾರಾತ್ಮಕ ವಹಿವಾಟಿನಿಂದ ಸೋಮವಾರ ಹೊರಬಂದವು.

ಆದರೆ, ರೂಪಾಯಿ ಮೌಲ್ಯ ಇಳಿಕೆ ಮತ್ತು ವಿದೇಶಿ ಬಂಡವಾಳದ ಹೊರಹರಿವಿನ ಕಾರಣಗಳಿಂದಾಗಿ ಸೂಚ್ಯಂಕದ ಗಳಿಕೆ ಕಡಿಮೆ ಆಯಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 327 ಅಂಶ ಹೆಚ್ಚಾಗಿ 53,235 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 83 ಅಂಶ ಹೆಚ್ಚಾಗಿ 15,835 ಅಂಶಕ್ಕೆ ತಲುಪಿತು.

'ಕಚ್ಚಾ ತೈಲ ದರ ಇಳಿಕೆ ಮತ್ತು ಯುರೋಪಿನ ಮಾರುಕಟ್ಟೆಗಳ ವಹಿವಾಟು ಸ್ಥಿರತೆ ಕಂಡುಕೊಂಡ ಕಾರಣಗಳಿಂದಾಗಿ ದೇಶಿ ಷೇರುಪೇಟೆಗಳ ಸೂಚ್ಯಂಕಗಳು ಏರಿಕೆ ಕಂಡವು. ವಹಿವಾಟು ಚೇತರಿಕೆ ಕಂಡರೂ, ವಿದೇಶಿ ಬಂಡವಾಳ ಹೊರಹರಿವು ಇರುವುದರಿಂದ ಅಸ್ಥಿರತೆ ಮುಂದುವರಿಯಲಿದೆ' ಎಂದು ಕೋಟಕ್ ಸೆಕ್ಯುರಿಟೀಸ್ ಲಿಮಿಟೆಡ್‌ನ ಈಕ್ವಿಟಿ ರಿಸರ್ಚ್‌ನ ಮುಖ್ಯಸ್ಥ ಶ್ರೀಕಾಂತ್ ಚೌಹಾಣ್ ಹೇಳಿದ್ದಾರೆ.

ಬ್ರೆಂಟ್ ಕಚ್ಚಾ ತೈಲ ದರ ಶೇ 0.50ರಷ್ಟು ಇಳಿಕೆ ಕಂಡಿದ್ದು ಒಂದು ಬ್ಯಾರಲ್‌ಗೆ 111 ಡಾಲರ್‌ಗಳಿಗೆ ತಲುಪಿದೆ.

ರೂಪಾಯಿ ಮೌಲ್ಯ 1 ಪೈಸೆ ಇಳಿಕೆ ಕಂಡು ಒಂದು ಡಾಲರ್‌ಗೆ ₹ 78.95ರಂತೆ ವಿನಿಮಯಗೊಂಡಿತು.

ವಲಯವಾರು ಗಳಿಕೆ (%)

ಎಫ್‌ಎಂಸಿಜಿ	2.49
ಬ್ಯಾಂಕ್	1.08
ಬಂಡವಾಳ ಸರಕು	0.97
ಗ್ರಾಹಕ ಬಳಕೆ ವಸ್ತು	0.82
ಕೈಗಾರಿಕೆ	0.74

ಮುಂಬೈ ಧಾರಣೆ

ಶೇಂಗಾ

4-7-2022

ಜಾವಾ 70/80(ಹೊಸ)	10800-10850
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	10100-10200
ದಪ್ಪ ಗುಜರಾತ್(ಹೊಸ)	10850-10950

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1610 (1610)
ಒಂದು ವಾರದ ಡೆಲಿವರಿ	1605 (1605)
ಸೋಯಾ ಕಚ್ಚಾ	1225 (1240)
ಪಾಮ್ ವಾರದ ಡೆಲಿವರಿ	1230 (1248)
ಸೂರ್ಯಕಾಂತಿ ಎಣ್ಣೆ ಕಚ್ಚಾ	1600 (1610)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

51,975 (52,025)

ಬೆಳ್ಳಿ ಕೆ.ಜಿ 58,125 (58,000)

ಆವರಣದಲ್ಲಿ ಶನಿವಾರದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	475
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54500
ಚಿತ್ರದುರ್ಗ	
ಆಪಿ	49039-49489
ಬೆಟ್ಟೆ	39119-39559
ಕೆಂಪುಗೋಟು	29100-29500
ರಾಶಿ	48529-48969
ಕುಮಟ	
ಚಿಪ್ಪು	26109-30509
ಕೋಕ	18001-29999
ಫ್ಯಾಕ್ಟರಿ	10869-20390
ಹಳೆಚಾಲಿ	46089-47299
ಹೊಸಚಾಲಿ	35689-38019
ಸಾಗರ	
ಬಿಳಿಗೋಟು	12099-29619
ಚಾಲಿ	32299-37399
ಕೋಕ	16199-33509
ಕೆಂಪುಗೋಟು	26989-37399
ರಾಶಿ	35699-49739
ಸಿಪ್ಪೆಗೋಟು	5690-21100
ಶಿವಮೊಗ್ಗ	
ಬೆಟ್ಟೆ	50009-53669
ಗೊರಬಲು	17008-37899
ರಾಶಿ	44409-49699
ಸರಕು	56099-78510
ಸಿದ್ದಾಪುರ	
ಬಿಳಿಗೋಟು	26112-30808
ಚಾಲಿ	35599-38099
ಕೋಕ	22699-32019
ಕೆಂಪುಗೋಟು	29012-32499
ರಾಶಿ	47489-48009
ತಟ್ಟಿಬೆಟ್ಟೆ	42699-42699
ಶಿರಸಿ	
ಬೆಟ್ಟೆ	36699-43999
ಬಿಳಿಗೋಟು	23109-32476
ಚಾಲಿ	35618-38700
ರಾಶಿ	45018-46289
ಯಲ್ಲಾಪುರ	
ಬಿಳಿಗೋಟು	26899-31080
ಚಾಲಿ	34899-38570
ಕೋಕ	16899-29299
ಕೆಂಪುಗೋಟು	33636-33908
ರಾಶಿ	46900-50379
ತಟ್ಟಿಬೆಟ್ಟೆ	37899-45182
ಪುತ್ತೂರು	
ಹೊಸತು	30500-43000

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16100	16000	16000	230.10 ಸೆಂಟ್ಸ್
ಎಸಿ	9100	8800	8800	
ಆರ್‌ಪಿ	9600	9500	9925	ಲಂಡನ್
ಆರ್‌ಸಿ	4800	4500	4600	2033 ಡಾಲರ್ಸ್

ಗ್ರಾಹಕರ ಹಕ್ಕು ರಕ್ಷಣೆ: ಕೇಂದ್ರ ಗ್ರಾಹಕರ ಹಿತರಕ್ಷಣಾ ಪ್ರಾಧಿಕಾರದ ಮಾರ್ಗಸೂಚಿ ಪ್ರಕಟ

ಹೋಟೆಲ್: ಸೇವಾ ಶುಲ್ಕ ಸಂಗ್ರಹಿಸುವಂತಿಲ್ಲ

ನವದೆಹಲಿ (ಪಿಟಿಐ): ಹೋಟೆಲ್, ರೆಸ್ಟೋರೆಂಟ್‌ಗಳು ಗ್ರಾಹಕರಿಂದ ಸೇವಾ ಶುಲ್ಕ ಸಂಗ್ರಹಿಸುವಂತಿಲ್ಲ ಎಂದು ಕೇಂದ್ರ ಗ್ರಾಹಕರ ಹಿತರಕ್ಷಣಾ ಪ್ರಾಧಿಕಾರ (ಸಿಸಿಪಿಎ) ಹೇಳಿದೆ. ನಿಯಮ ಉಲ್ಲಂಘಿಸಿದರೆ ಗ್ರಾಹಕರು ದೂರು ದಾಖಲಿಸಬಹುದು ಎಂದೂ ತಿಳಿಸಿದೆ.

ಬಿಲ್‌ನಲ್ಲಿಯೇ ಸೇವಾ ಶುಲ್ಕ ಸೇರಿಸುತ್ತಿರುವುದಕ್ಕೆ ವಿರೋಧ ವ್ಯಕ್ತಪಡಿಸಿ ಬರುತ್ತಿರುವ ದೂರುಗಳ ಸಂಖ್ಯೆ ಹೆಚ್ಚಾಗುತ್ತಿರುವುದನ್ನು ಗಮನಿಸಿದ ಪ್ರಾಧಿಕಾರವು, ನಿಯಮಗಳಿಗೆ ವಿರುದ್ಧವಾಗಿ ವ್ಯಾಪಾರ ನಡೆಸುವುದು ಮತ್ತು ಗ್ರಾಹಕರ ಹಕ್ಕು ಉಲ್ಲಂಘಿಸುವುದನ್ನು ತಡೆಯುವ ಸಂಬಂಧ ಸೋಮವಾರ ಮಾರ್ಗಸೂಚಿ ಬಿಡುಗಡೆ ಮಾಡಿದೆ.

ಗ್ರಾಹಕರಿಗೆ ತಿಳಿಸದೆಯೇ ಹೋಟೆಲ್‌ಗಳು ಬಿಲ್‌ನಲ್ಲಿ ಸೇವಾ ಶುಲ್ಕ ಸೇರಿಸುತ್ತಿವೆ. ಸೇವಾ ಶುಲ್ಕ ಪಾವತಿಯು ಗ್ರಾಹಕರ ಆಯ್ಕೆಗೆ ಬಿಟ್ಟಿದ್ದಾಗಿದೆ ಎಂದು ಪ್ರಾಧಿಕಾರವು ಸ್ಪಷ್ಟವಾಗಿ ಹೇಳಿದೆ.

ಗ್ರಾಹಕರು ಆಹಾರ ಆರ್ಡರ್ ಮಾಡಿದಾಗ ಮೆನುವಿನಲ್ಲಿ ನಮೂದಿಸಿರುವ ಅದರ ದರ ಮತ್ತು ಅದಕ್ಕೆ ಅನ್ವಯಿಸುವ ತೆರಿಗೆಗಳಿಗೆ ಮಾತ್ರವೇ ಒಪ್ಪಿಗೆ ನೀಡಿದಂತಾಗುತ್ತದೆ. ಅದಕ್ಕೆ ಹೊರತಾದ ಯಾವುದೇ ಶುಲ್ಕ ವಿಧಿಸುವುದು ಗ್ರಾಹಕರ ಹಿತರಕ್ಷಣಾ ಕಾಯ್ದೆಯ ಅಡಿಯಲ್ಲಿ ವ್ಯಾಪಾರ ನಿಯಮಗಳಿಗೆ ವಿರುದ್ಧ ಎಂದು ಪರಿಗಣಿತವಾಗುತ್ತದೆ ಎಂದು ತಿಳಿಸಿದೆ.

ಸದ್ಯ, ಕೆಲವು ರೆಸ್ಟೋರೆಂಟ್ ಮತ್ತು ಹೋಟೆಲ್‌ಗಳು ಆಹಾರ ಬಿಲ್ ಮೇಲೆ ಶೇಕಡ 10ರಷ್ಟು ಸೇವಾ ಶುಲ್ಕ ವಿಧಿಸುತ್ತಿವೆ.

1915ಕ್ಕೆ ದೂರು ನೀಡಲು ಅವಕಾಶ

ಪ್ರಾಧಿಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸುವುದರ ವಿರುದ್ಧ ರಾಷ್ಟ್ರೀಯ ಗ್ರಾಹಕ ಸಹಾಯವಾಣಿ (ಎನ್‌ಸಿಎಚ್) ಸಂಖ್ಯೆ 1915ಕ್ಕೆ ಕರೆ ಮಾಡಿ ಗ್ರಾಹಕರು ದೂರು ನೀಡಬಹುದು. ಎನ್‌ಸಿಎಚ್ ಮೊಬೈಲ್ ಆ್ಯಪ್ ಮೂಲಕವೂ ದೂರು ನೀಡಬಹುದು. ನ್ಯಾಯಾಲಯದಲ್ಲಿ ದೂರು ನೀಡುವುದಕ್ಕೂ ಮುನ್ನ ಸಮಸ್ಯೆ ಬಗೆಹರಿಸಿಕೊಳ್ಳಲು ಎನ್‌ಸಿಎಚ್ ಪರ್ಯಾಯ ಮಾರ್ಗವಾಗಿದೆ. ಅಲ್ಲದೆ, ಗ್ರಾಹಕ ಆಯೋಗಕ್ಕೆ ದೂರು ಸಲ್ಲಿಸಲೂ ಅವಕಾಶ ಇದೆ.

ಸಮಸ್ಯೆಯ ತ್ವರಿತ ಇತ್ಯರ್ಥಕ್ಕೆ ಇ-ದಾಖಿಲ್ ಪೋರ್ಟಲ್ ಮೂಲಕವೂ ದೂರು ನೀಡಬಹುದು. ಅಲ್ಲದೆ, ಜಿಲ್ಲಾಧಿಕಾರಿಗೆ ದೂರು ನೀಡಲು ಅವಕಾಶ ಇದೆ. ಇ-ಮೇಲ್ ಮೂಲಕ ಸಿಸಿಪಿಎಗೂ ದೂರು ಕಳುಹಿಸಬಹುದು.

ಮಾರ್ಗಸೂಚಿ ಹೇಳುವುದೇನು?



- ಯಾವುದೇ ಹೋಟೆಲ್ ಅಥವಾ ರೆಸ್ಟೋರೆಂಟ್‌ಗಳು ಬಿಲ್‌ನಲ್ಲಿ ಸೇವಾ ಶುಲ್ಕ ಸೇರಿಸುವಂತಿಲ್ಲ
- ಬೇರೆ ಯಾವುದೇ ಹೆಸರಿನಲ್ಲಿಯೂ ಸೇವಾ ಶುಲ್ಕ ಸಂಗ್ರಹಿಸಬಾರದು
- ಸೇವಾ ಶುಲ್ಕ ಪಾವತಿಸುವಂತೆ ಗ್ರಾಹಕರನ್ನು ಒತ್ತಾಯಿಸಬಾರದು
- ಗ್ರಾಹಕರು ಸ್ವ–ಇಚ್ಛೆಯಿಂದ ಸೇವಾ ಶುಲ್ಕ ಪಾವತಿಸಬಹುದು. ಇದು ಗ್ರಾಹಕರ ವಿವೇಚನೆಗೆ ಬಿಟ್ಟಿದ್ದು ಎಂಬುದನ್ನು ಹೋಟೆಲ್‌ಗಳು ತಿಳಿಸಬೇಕು
- ಸೇವಾ ಶುಲ್ಕದ ಹೆಸರಿನಲ್ಲಿ ಯಾವುದೇ ಸೇವೆಗಳನ್ನು ನಿರ್ಬಂಧಿಸುವಂತೆ ಇಲ್ಲ.
- ಆಹಾರ ಬಿಲ್‌ನ ಮೊತ್ತದಲ್ಲಿಯೇ ಸೇವಾ ಶುಲ್ಕ ಸೇರಿಸಬಾರದು ಹಾಗೂ ಒಟ್ಟಾರೆ ಮೊತ್ತದ ಮೇಲೆ ಜಿಎಸ್‌ಟಿ ವಿಧಿಸಬಾರದು
- ಬಿಲ್‌ನಲ್ಲಿ ಸೇವಾ ಶುಲ್ಕ ಸೇರಿಸಿದ್ದರೆ ಅದನ್ನು ತೆಗೆಯುವಂತೆ ಗ್ರಾಹಕರು ಮನವಿ ಮಾಡಬಹುದಾಗಿದ

'ಮುಂದುವರಿಯಲಿದೆ ಶೇಕಡ 28ರ ತೆರಿಗೆ ಮಟ್ಟ'

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯಲ್ಲಿನ ಶೇಕಡ 28ರ ತೆರಿಗೆ ಪ್ರಮಾಣವನ್ನು ಮುಂದುವರಿಸಿಕೊಂಡು ಹೋಗುವ ಉದ್ದೇಶ ಕೇಂದ್ರ ಸರ್ಕಾರಕ್ಕೆ ಇದೆ ಎಂದು ರೆವಿನ್ಯು ಕಾರ್ಯದರ್ಶಿ ತರುಣ್ ಬಜಾಜ್ ಹೇಳಿದ್ದಾರೆ.

'ಆದರೆ, ಇನ್ನುಳಿದ ಮೂರು ಹಂತಗಳನ್ನು (ಶೇ 5, 12 ಮತ್ತು 18) ಎರಡು ಹಂತಗಳಿಗೆ ತಗ್ಗಿಸುವ ವಿಚಾರದಲ್ಲಿ ಚರ್ಚೆಗೆ ಸರ್ಕಾರ ಮುಕ್ತವಾಗಿದೆ' ಎಂದು ಅವರು ತಿಳಿಸಿದ್ದಾರೆ. ಐಷಾರಾಮಿ ಉತ್ಪನ್ನಗಳಿಗೆ, ತಂಬಾಕಿನಂತಹ ಉತ್ಪನ್ನಗಳಿಗೆ ಶೇ 28ರಷ್ಟು ತೆರಿಗೆ ವಿಧಿಸಲಾಗುತ್ತಿದೆ. ಈ ವರ್ಗದ ಉತ್ಪನ್ನಗಳ ಮೇಲೆ ಸೆಸ್ ಕೂಡ ವಿಧಿಸಲಾಗುತ್ತದೆ.

ಅಸೋಚಾಂ ಕಾರ್ಯಕ್ರಮದಲ್ಲಿ ಉದ್ಯಮ ವಲಯದ ಪ್ರಮುಖರನ್ನು ಉದ್ದೇಶಿಸಿ ಮಾತನಾಡಿದ ಸಂದರ್ಭದಲ್ಲಿ ಅವರು ಈ ವಿಷಯ ತಿಳಿಸಿದ್ದಾರೆ.



ಪೆಟ್ರೋಲಿಯಂ ಉತ್ಪನ್ನಗಳನ್ನು ಜಿಎಸ್‌ಟಿ ವ್ಯವಸ್ಥೆಯ ಅಡಿ ತರಬೇಕು ಎಂಬ ಬೇಡಿಕೆಯ ಬಗ್ಗೆ ಅವರು, 'ಈ ವಿಚಾರವಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಕೆಲವು ಆತಂಕಗಳಿವೆ. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಗೆ ದೊಡ್ಡ ಪ್ರಮಾಣದಲ್ಲಿ ವರಮಾನ ತಂದುಕೊಡುವ ಮೂಲ ಇದು. ಹೀಗಾಗಿ ತುಸು ಕಾಲ ಕಾಯಬೇಕು' ಎಂದು ಹೇಳಿದ್ದಾರೆ.

ಕೇಂದ್ರ ಸಿದ್ಧಪಡಿಸಿರುವ ಕರಡು ನಿಯಮಗಳಲ್ಲಿ ಪ್ರಸ್ತಾವ

ಸಹಕಾರ ಸಂಘಗಳ ಮೂಲಕ ಪೆಟ್ರೋಲಿಯಂ ಉತ್ಪನ್ನ ಮಾರಾಟ

ನವದೆಹಲಿ (ಪಿಟಿಐ): ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (ಪಿಎಸಿಎಸ್) ಪೆಟ್ರೋಲಿಯಂ ಉತ್ಪನ್ನಗಳ ಡೀಲರ್‌ಶಿಪ್, ನ್ಯಾಯಬೆಲೆ ಅಂಗಡಿ ನಡೆಸುವುದು, ಆಸ್ಪತ್ರೆ ಹಾಗೂ ಶಿಕ್ಷಣ ಸಂಸ್ಥೆಗಳನ್ನು ಕಟ್ಟುವ ಕೆಲಸಗಳಲ್ಲಿ ತೊಡಗಿಸಿಕೊಳ್ಳಲು ಅವಕಾಶ ಕಲ್ಪಿಸುವ ಪ್ರಸ್ತಾವನೆಯನ್ನು ಕೇಂದ್ರ ಸಿದ್ಧಪಡಿಸಿದೆ.

ಕೇಂದ್ರ ಸಹಕಾರ ಸಚಿವಾಲಯವು ಕರಡು ಉಪನಿಯಮಗಳನ್ನು ಸಿದ್ಧಪಡಿಸಿದೆ. ಈ ಉಪನಿಯಮಗಳಿಗೆ ಜುಲೈ 19ರೊಳಗೆ ಸಲಹೆಗಳನ್ನು ನೀಡುವಂತೆ ಅದು ರಾಜ್ಯ ಸರ್ಕಾರಗಳಿಗೆ ಹಾಗೂ ಇತರ ಪಾಲುದಾರರಿಗೆ ಸೂಚಿಸಿದೆ. ಈಗ ಜಾರಿಯಲ್ಲಿರುವ ನಿಯಮಗಳು ಪಿಎಸಿಎಸ್‌ಗಳಿಗೆ ತಮ್ಮ ಮೂಲ ವಹಿವಾಟು ಹೊರತುಪಡಿಸಿ ಇತರ ವಹಿವಾಟುಗಳಲ್ಲಿ ತೊಡಗಿಸಿಕೊಳ್ಳಲು ಅವಕಾಶ ಕಲ್ಪಿಸುವುದಿಲ್ಲ.



ಪಿಎಸಿಎಸ್‌ಗಳು 'ಬ್ಯಾಂಕ್ ಮಿತ್ರ' ಆಗಿ ಕೆಲಸ ಮಾಡಲು, ಶೈತ್ಯಾಗಾರಗಳು ಹಾಗೂ ಗೋದಾಮು ಸೇವೆ ಒದಗಿಸಲು, ನ್ಯಾಯಬೆಲೆ ಅಂಗಡಿ ಆರಂಭಿಸಲು, ಹೈನುಗಾರಿಕೆ, ಮೀನು ಸಾಕಣೆ, ನೀರಾವರಿ, ಪರಿಸರ ಸ್ನೇಹಿ ಇಂಧನ ವಲಯಗಳಲ್ಲಿ ಕೆಲಸ ಮಾಡಲು ಕರಡು ಉಪನಿಯಮಗಳು ಅವಕಾಶ ಕಲ್ಪಿಸುತ್ತವೆ.

ಶಿಕ್ಷಣ, ಆರೋಗ್ಯ, ಪ್ರವಾಸೋದ್ಯಮ, ಪರಿಸರ ಮತ್ತು ಸುಸ್ಥಿರ ಅಭಿವೃದ್ಧಿ ಚಟುವಟಿಕೆಗಳಲ್ಲಿ ಸಮುದಾಯ ಆಧಾರಿತ ಸೇವೆಗಳನ್ನು ಒದಗಿಸಲು ಅವಕಾಶ ಕಲ್ಪಿಸುತ್ತವೆ. ಪಿಎಸಿಎಸ್‌ಗಳು ಮೂಲಸೌಕರ್ಯ ಅಭಿವೃದ್ಧಿ, ಸಮುದಾಯ ಕೇಂದ್ರ ಅಭಿವೃದ್ಧಿ, ಆಸ್ಪತ್ರೆ ಹಾಗೂ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿ, ಆಹಾರ ಧಾನ್ಯಗಳ ಖರೀದಿಯಲ್ಲಿ ತೊಡಗಿಸಿಕೊಳ್ಳಬಹುದು.

ಎಲ್‌ಪಿಜಿ, ಪೆಟ್ರೋಲ್, ಡೀಸೆಲ್, ಪರಿಸರ ಸ್ನೇಹಿ ಇಂಧನ, ಕೃಷಿ ಹಾಗೂ ಮನೆಬಳಕೆ ಉತ್ಪನ್ನಗಳು, ಕೃಷಿ ಯಂತ್ರೋಪಕರಣಗಳ ಡೀಲರ್‌ಶಿಪ್ ಪಡೆಯಬಹುದು.

ಕರಡು ಉಪ ನಿಯಮಗಳ ಬಗ್ಗೆ ರಾಜ್ಯ ಸರ್ಕಾರಗಳಿಂದ ಸಲಹೆ ಕೇಳಲಾಗಿದೆ ಎಂದು ಸಹಕಾರ ಸಚಿವ ಅಮಿತ್ ಶಾ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಪಿಎಸಿಎಸ್‌ಗಳು ರಾಜ್ಯ ಪಟ್ಟಿಯಲ್ಲಿ ಬರುತ್ತವೆ.

ಕ್ರಿಕೆಟ್ ಟೆಸ್ಟ್: ರೂಟ್, ಬೆಸ್ಟೋ ಭರ್ಜರಿ ಆಟ; ಅಂತಿಮ ದಿನ ಆತಿಥೇಯರಿಗೆ ಬೇಕಿದೆ 119 ರನ್

ಗೆಲುವಿನತ್ತ ಇಂಗ್ಲೆಂಡ್ ದಾಪುಗಾಲು

ಬರ್ಮಿಂಗ್‌ಹ್ಯಾಂ (ಪಿಟಿಐ): ಜೋ ರೂಟ್ ಮತ್ತು ಜಾನಿ ಬೆಸ್ಟೋ ಅವರ ಜವಾಬ್ದಾರಿಯುತ ಆಟದ ನೆರವಿನಿಂದ ಇಂಗ್ಲೆಂಡ್ ತಂಡ, ಭಾರತ ವಿರುದ್ಧದ ಅಂತಿಮ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಗೆಲುವಿನತ್ತ ದಾಪುಗಾಲಿಟ್ಟಿದೆ.

ಜಯಕ್ಕೆ 378 ರನ್‌ಗಳ ಗುರಿ ಪಡೆದಿರುವ ಆತಿಥೇಯ ತಂಡ ನಾಲ್ಕನೇ ದಿನ, ಸೋಮವಾರದ ಆಟದ ಅಂತ್ಯಕ್ಕೆ 57 ಓವರ್‌ಗಳಲ್ಲಿ 3 ವಿಕೆಟ್‌ಗೆ 259 ರನ್ ಕಲೆಹಾಕಿದೆ.

ಅಂತಿಮ ದಿನವಾದ ಮಂಗಳವಾರ 119 ರನ್ ಗಳಿಸುವ ಸವಾಲು ಬೆನ್ ಸ್ಟೋಕ್ಸ್ ಬಳಗದ ಮುಂದಿದೆ. ಏಳು ವಿಕೆಟ್‌ಗಳು ಕೈಯಲ್ಲಿರುವುದರಿಂದ ಇಂಗ್ಲೆಂಡ್, ದಾಖಲೆಯ ಗೆಲುವಿನ ನಿರೀಕ್ಷೆಯಲ್ಲಿದೆ. ಜಸ್‌ಪ್ರೀತ್ ಬೂಮ್ರಾ ನೇತೃತ್ವದಲ್ಲಿ ಬೌಲರ್‌ಗಳು 'ಪವಾಡ' ನಡೆಸಿದರೆ ಮಾತ್ರ ಭಾರತಕ್ಕೆ ಜಯ ಒಲಿಯಬಹುದು.

ಪಂದ್ಯದ ಮೊದಲ ಮೂರು ದಿನ ಭಾರತ ತಂಡ ಪ್ರಭುತ್ವ ಸಾಧಿಸಿದ್ದರೆ, ಸೋಮವಾರದ ಆಟವನ್ನು ಇಂಗ್ಲೆಂಡ್ ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿತು. ರೂಟ್ (ಬ್ಯಾಟಿಂಗ್ 76, 112 ಎಸೆತ) ಮತ್ತು ಬೆಸ್ಟೋ (ಬ್ಯಾಟಿಂಗ್ 72, 87 ಎಸೆತ) ನಾಲ್ಕನೇ ವಿಕೆಟ್‌ಗೆ 150 ರನ್ ಸೇರಿಸಿದ್ದು, ಬೂಮ್ರಾ ಬಳಗದ ಗೆಲುವಿನ ಕನಸಿಗೆ ಅಡ್ಡಿಯಾಗಿದ್ದಾರೆ.

ಸವಾಲಿನ ಗುರಿ ಬೆನ್ನಟ್ಟಿದ ಇಂಗ್ಲೆಂಡ್ ತಂಡಕ್ಕೆ ಅಲೆಕ್ಸ್ ಲೀಸ್ (65 ಎಸೆತಗಳಲ್ಲಿ 56) ಮತ್ತು ಜ್ಯಾಕ್ ಕ್ರಾಲಿ (76 ಎಸೆತಗಳಲ್ಲಿ 46) ಭದ್ರ ಬುನಾದಿ ಹಾಕಿಕೊಟ್ಟರು. ಇವರಿಬ್ಬರು ಭಾರತದ ಆರಂಭಿಕ ದಾಳಿಯನ್ನು ಸಮರ್ಥವಾಗಿ ಎದುರಿಸಿ ಮೊದಲ ವಿಕೆಟ್‌ಗೆ 107 ರನ್ ಸೇರಿಸಿದರು.

ಉತ್ತಮವಾಗಿ ಆಡುತ್ತಿದ್ದ ಕ್ರಾಲಿ ಅವರನ್ನು ಬೌಲ್ಡ್ ಮಾಡಿದ ಭಾರತ ತಂಡದ ಹಂಗಾಮಿ ನಾಯಕ ಜಸ್‌ಪ್ರೀತ್ ಬೂಮ್ರಾ ಈ ಜತೆಯಾಟ ಮುರಿದರು. ತಮ್ಮ ಮುಂದಿನ ಓವರ್‌ನಲ್ಲಿ ಒಲಿ ಪೋಪ್ (0) ಅವರನ್ನೂ ಪೆವಿಲಿಯನ್‌ಗೆ ಅಟ್ಟಿದರು. ಅಲ್ಪ ಸಮಯದ ಬಳಿಕ ಲೀಸ್ ರನೌಟಾದರು.

ಎರಡು ರನ್ ಸೇರಿಸುವಷ್ಟರ‌ಲ್ಲಿ ಮೂರು ವಿಕೆಟ್ ಕಳೆದುಕೊಂಡ ಇಂಗ್ಲೆಂಡ್ ಆಘಾತ ಅನುಭವಿಸಿತು. ಈ ವೇಳೆ ಜತೆಯಾದ ರೂಟ್ ಮತ್ತು ಬೆಸ್ಟೋ ತಂಡಕ್ಕೆ ಆಸರೆಯಾದರು. ಬೆಸ್ಟೋ 14 ರನ್ ಗಳಿಸಿದ್ದಾಗ ಹನುಮ ವಿಹಾರಿ ಕ್ಯಾಚ್ ಕೈಚೆಲ್ಲಿದ್ದರು. ಅದು ಭಾರತಕ್ಕೆ ದುಬಾರಿಯಾಗಿ ಪರಿಣಮಿಸಿದೆ.

ಪಂತ್ ಅರ್ಧಶತಕ: ಇದಕ್ಕೂ ಮುನ್ನ 3 ವಿಕೆಟ್‌ಗೆ 125 ರನ್‌ಗಳಿಂದ ದಿನದಾಟ ಮುಂದುವರಿಸಿದ ಭಾರತ ತಂಡ 120 ರನ್ ಸೇರಿಸಿ, 245 ರನ್‌ಗಳಿಗೆ ಆಲೌಟಾಯಿತು.

ಚೇತೇಶ್ವರ ಪೂಜಾರ (66 ರನ್, 168 ಎ) ಮತ್ತು ರಿಷಭ್ ಪಂತ್ (57 ರನ್, 86 ಎ) ನಾಲ್ಕನೇ ವಿಕೆಟ್‌ಗೆ 78 ರನ್ ಸೇರಿಸಿದರು. ಚೆನ್ನಾಗಿ ಆಡುತ್ತಿದ್ದ ಪೂಜಾರ ವಿಕೆಟ್ ಪಡೆದ ಸ್ಟುವರ್ಟ್ ಬ್ರಾಡ್ ಈ ಜತೆಯಾಟ ಮುರಿದರು. ಶ್ರೇಯಸ್ ಅಯ್ಯರ್ ಉತ್ತಮ ಆರಂಭ ಪಡೆದರೂ, ಅದನ್ನು ದೊಡ್ಡ ಮೊತ್ತವಾಗಿ ಪರಿವರ್ತಿಸುವಲ್ಲಿ ವಿಫಲರಾದರು.

ಮೊದಲ ಇನಿಂಗ್ಸ್‌ನಲ್ಲಿ ಬಿರುಸಿನ ಶತಕ ಗಳಿಸಿದ್ದ ಪಂತ್, ಲೀಲಾಜಾಲವಾಗಿ ಬ್ಯಾಟ್ ಬೀಸಿದರು. ಆದರೆ ಅರ್ಧಶತಕ ಪೂರೈಸಿದ ಬಳಿಕ ಅವರು ಹೆಚ್ಚುಹೊತ್ತು ನಿಲ್ಲಲಿಲ್ಲ. ಜ್ಯಾಕ್ ಲೀಚ್ ಬೌಲಿಂಗ್‌ನಲ್ಲಿ 'ರಿವರ್ಸ್ ಪುಲ್' ಮಾಡುವ ಪ್ರಯತ್ನ‌ದಲ್ಲಿ ಮೊದಲ ಸ್ಲಿಪ್‌ನಲ್ಲಿ ಜೋ ರೂಟ್‌ಗೆ ಕ್ಯಾಚಿತ್ತರು.

ವಿದೇಶದಲ್ಲಿ ಟೆಸ್ಟ್ ಪಂದ್ಯವೊಂ‌ದರಲ್ಲಿ ಶತಕ ಹಾಗೂ ಅರ್ಧಶತಕ ಗಳಿಸಿದ ಭಾರತದ ಮೊದಲ ವಿಕೆಟ್‌ಕೀಪರ್ ಎಂಬ ಗೌರವಕ್ಕೆ ಅವರು ಭಾಜನರಾದರು.

ಪಂತ್ ಔಟಾದಾಗ ತಂಡದ ಮೊತ್ತ 198 ಆಗಿತ್ತು. ರವೀಂದ್ರ ಜಡೇಜ (23) ಅವರಿಗೆ ಕೊನೆಯ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳಿಂದ ಉತ್ತಮ ಸಾಥ್ ಸಿಗಲಿಲ್ಲ. ಬೆನ್ ಸ್ಟೋಕ್ಸ್ 33 ರನ್‌ಗಳಿಗೆ ನಾಲ್ಕು ವಿಕೆಟ್ ಪಡೆದರೆ, ಸ್ಟುವರ್ಟ್ ಬ್ರಾಡ್ ಮತ್ತು ಮ್ಯಾಟಿ ಪಾಟ್ಸ್ ತಲಾ ಎರಡು ವಿಕೆಟ್‌ಗಳನ್ನು ತಮ್ಮದಾಗಿಸಿ‌ಕೊಂಡರು.


ಇಂಗ್ಲೆಂಡ್‌ಗೆ ಆಸರೆಯಾದ ಜೋ ರೂಟ್ –ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್


ಮೊದಲ ಇನಿಂಗ್ಸ್
ಭಾರತ 416 (84.5 ಓವರ್)
ಇಂಗ್ಲೆಂಡ್ 284 (61.3 ಓವರ್)
ಎರಡನೇ ಇನಿಂಗ್ಸ್
ಭಾರತ 245 (81.5 ಓವರ್)
(ಭಾನುವಾರ 45 ಓವರ್‌ಗಳಲ್ಲಿ 3ಕ್ಕೆ 125)
ಪೂಜಾರ ಸಿ ಲೀಸ್ ಬಿ ಬ್ರಾಡ್ 66 (168ಎ, 4X8), ಪಂತ್ ಸಿ ರೂಟ್ ಬಿ ಲೀಚ್ 57 (86ಎ, 4X8), ಶ್ರೇಯಸ್ ಸಿ ಆ್ಯಂಡರ್ಸನ್ ಬಿ ಪಾಟ್ಸ್ 19 (26ಎ, 4X3), ಜಡೇಜ ಬಿ ಸ್ಟೋಕ್ಸ್ 23 (58ಎ, 4X1), ಶಾರ್ದೂಲ್ ಸಿ ಕ್ರಾಲಿ ಬಿ ಪಾಟ್ಸ್ 4 (26ಎ), ಶಮಿ ಸಿ ಲೀಸ್ ಬಿ ಸ್ಟೋಕ್ಸ್ 13 (14ಎ, 4X2), ಬೂಮ್ರಾ ಸಿ ಕ್ರಾಲಿ ಬಿ ಸ್ಟೋಕ್ಸ್ 7 (20ಎ, 6X1), ಸಿರಾಜ್ ಔಟಾಗದೆ 2 (9ಎ)
ಇತರೆ 19 (ಬೈ 6, ಲೆಗ್‌ಬೈ 7, ನೋಬಾಲ್ 3, ವೈಡ್ 3)
ವಿಕೆಟ್ ಪತನ: 4-153 (ಚೇತೇಶ್ವರ್ ಪೂಜಾರ; 52.3), 5-190 (ಶ್ರೇಯಸ್ ಅಯ್ಯರ್; 59.2), 6-198 (ರಿಷಭ್ ಪಂತ್; 62.2), 7-207 (ಶಾರ್ದೂಲ್ ಠಾಕೂರ್; 69.1), 8-230 (ಮೊಹಮ್ಮದ್ ಶಮಿ; 73.4), 9-236 (ರವೀಂದ್ರ ಜಡೇಜ; 79.2), 10-245 (ಜಸ್‌ಪ್ರೀತ್ ಬೂಮ್ರಾ; 81.5)
ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 19–5–46–1, ಸ್ಟುವರ್ಟ್ ಬ್ರಾಡ್ 16–1–58–2, ಮ್ಯಾಟಿ ಪಾಟ್ಸ್ 17–3–50–2, ಜಾಕ್ ಲೀಚ್ 12–1–28–1, ಬೆನ್ ಸ್ಟೋಕ್ಸ್ 11.5–0–33–4, ಜೋ ರೂಟ್ 6–1–17–0
ಇಂಗ್ಲೆಂಡ್ 3ಕ್ಕೆ 259 (57 ಓವರ್)
ಲೀಸ್ ರನೌಟ್ (ಶಮಿ/ಜಡೇಜ) 56 (65 ಎ, 4X8), ಕ್ರಾಲಿ ಬಿ ಬೂಮ್ರಾ 46 (76 ಎ, 4X7), ಪೋಪ್ ಸಿ ಪಂತ್ ಬಿ ಬೂಮ್ರಾ 0 (3 ಎ), ರೂಟ್ ಬ್ಯಾಟಿಂಗ್ 76(112ಎ, 4X9), ಜಾನಿ ಬೆಸ್ಟೋ ಬ್ಯಾಟಿಂಗ್ 72 (87 ಎ, 4X8, 6X1)
ಇತರೆ : 9 (ಲೆಗ್‌ಬೈ 7, ನೋಬಾಲ್ 1, ವೈಡ್ 1)
ವಿಕೆಟ್ ಪತನ: 1–107 (ಜ್ಯಾಕ್ ಕ್ರಾಲಿ; 21.4), 2–107 (ಒಲಿ ಪೋಪ್; 23.1), 3–109 (ಅಲೆಕ್ಸ್ ಲೀಸ್; 24.1)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 13–0–53–2, ಮೊಹಮ್ಮದ್ ಶಮಿ 12–2–49–0, ರವೀಂದ್ರ ಜಡೇಜ 15–2–53–0, ಮೊಹಮ್ಮದ್ ಸಿರಾಜ್ 10–0–64–0, ಶಾರ್ದೂಲ್ ಠಾಕೂರ್ 7–0–33–0

ಮಂದಾನ, ಶಫಾಲಿ ಬ್ಯಾಟಿಂಗ್ ವೈಭವ

ಕ್ರಿಕೆಟ್: ಶ್ರೀಲಂಕಾ ವಿರುದ್ಧ ಭಾರತಕ್ಕೆ 10 ವಿಕೆಟ್ ಜಯ

ಪಲ್ಲೆಕೆಲೆ (ಪಿಟಿಐ): 'ತಂಡಕ್ಕೆ ಉತ್ತಮ ಆರಂಭ ನೀಡುತ್ತಿಲ್ಲ' ಎಂದು ತಮ್ಮನ್ನು ಟೀಕಿಸಿದವರಿಗೆ ಸ್ಮೃತಿ ಮಂದಾನ ಮತ್ತು ಶಫಾಲಿ ವರ್ಮ ಬ್ಯಾಟ್‌ನಿಂದಲೇ ಉತ್ತರ ನೀಡಿದರು.

ಶ್ರೀಲಂಕಾ ವಿರುದ್ಧ ಸೋಮವಾರ ನಡೆದ ಎರಡನೇ ಏಕದಿನ ಪಂದ್ಯದಲ್ಲಿ ಇಬ್ಬರೂ ಭರ್ಜರಿ ಆಟವಾಡಿ ತಂಡಕ್ಕೆ 10 ವಿಕೆಟ್‌ಗಳ ಜಯ ತಂದಿತ್ತರು. ಮೊದಲು ಬ್ಯಾಟ್ ಮಾಡಿದ ಲಂಕಾ 173 ರನ್ ಗಳಿಸಿದರೆ, ಭಾರತ 25.4 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ ಗುರಿ ತಲುಪಿತು.


ಸ್ಮೃತಿ ಮಂದಾನ

ಸ್ಮೃತಿ ಮಂದಾನ 94 (83 ಎ, 4X11, 6X1) ಮತ್ತು ಶಫಾಲಿ 71 (71 ಎ, 4X4, 6X1) ಗೆಲುವಿನ ರೂವಾರಿ ಎನಿಸಿದರು. ಮೂರು ಪಂದ್ಯಗಳ ಸರಣಿಯಲ್ಲಿ ಭಾರತ 2–0 ಮುನ್ನಡೆ ಗಳಿಸಿತು.

ಲಂಕಾ ವಿರುದ್ಧದ ಸರಣಿಯಲ್ಲಿ ಇದುವರೆಗೆ ಸ್ಮೃತಿ ಮತ್ತು ಶಫಾಲಿ ತಂಡಕ್ಕೆ ಉತ್ತಮ ಆರಂಭ ನೀಡಿರಲಿಲ್ಲ. ಇದರಿಂದ ಬಳಿಕ ಬರುವ ಬ್ಯಾಟರ್‌ಗಳು ಒತ್ತಡದಲ್ಲೇ ಆಡಬೇಕಿತ್ತು. ಆದರೆ ಇಬ್ಬರೂ ಏಕಕಾಲಕ್ಕೆ ಫಾರ್ಮ್ ಕಂಡುಕೊಂಡರು.

ಮಹಿಳೆಯರ ಏಕದಿನ ಪಂದ್ಯದಲ್ಲಿ ತಂಡವೊಂದು ಯಾವುದೇ ವಿಕೆಟ್ ಕಳೆದುಕೊಳ್ಳದೆ ಇಷ್ಟು ದೊಡ್ಡ ಮೊತ್ತವನ್ನು ಬೆನ್ನಟ್ಟಿ ಗೆಲುವು ಪಡೆದಿರುವುದು ಇದೇ ಮೊದಲು. ಲಂಕಾ ವಿರುದ್ಧ ಭಾರತದ ಪರ ಯಾವುದೇ ವಿಕೆಟ್‌ಗೆ ದಾಖಲಾದ ಅತಿದೊಡ್ಡ ಜೊತೆಯಾಟ ಇದಾಗಿದೆ.

ಮೊದಲು ಬ್ಯಾಟ್ ಮಾಡಿದ ಲಂಕಾ ತಂಡ, ಭಾರತದ ಶಿಸ್ತಿನ ಬೌಲಿಂಗ್ ಮುಂದೆ ಪರದಾಟ ನಡೆಸಿತು. ರೇಣುಕಾ ಸಿಂಗ್ (28ಕ್ಕೆ 4) ಯಶಸ್ವಿ ಬೌಲರ್ ಎನಿಸಿಕೊಂಡರೆ, ಮೇಘನಾ ಸಿಂಗ್ ಮತ್ತು ದೀಪ್ತಿ ಶರ್ಮ ತಲಾ ಎರಡು ವಿಕೆಟ್ ಪಡೆದರು.

ಸರಣಿಯ ಮೂರನೇ ಹಾಗೂ ಕೊನೆಯ ಪಂದ್ಯ ಗುರುವಾರ ನಡೆಯಲಿದ್ದು, ಭಾರತ ಸರಣಿ 'ಕ್ಲೀನ್‌ಸ್ವೀಪ್' ಮಾಡುವ ವಿಶ್ವಾ‌ಸದಲ್ಲಿದೆ.


ಶಫಾಲಿ ವರ್ಮ ಬ್ಯಾಟಿಂಗ್ ವೈಖರಿ –ಪಿಟಿಐ ಚಿತ್ರಗಳು

ಸಂಕ್ಷಿಪ್ತ ಸ್ಕೋರ್: ಶ್ರೀಲಂಕಾ 173 (50 ಓವರ್) ಚಾಮರಿ ಅಟಪಟ್ಟು 27, ಅನುಷ್ಕಾ ಸಂಜೀವನಿ 25, ನೀಲಾಕ್ಷಿ ಡಿ'ಸಿಲ್ವ 32, ಅಮಾ ಕಾಂಚನ ಔಟಾಗದೆ 47, ರೇಣುಕಾ ಸಿಂಗ್ 28ಕ್ಕೆ 4, ಮೇಘನಾ ಸಿಂಗ್ 43ಕ್ಕೆ 2, ದೀಪ್ತಿ ಶರ್ಮ 30ಕ್ಕೆ 2. ಭಾರತ: ವಿಕೆಟ್ ನಷ್ಟವಿಲ್ಲದೆ 174 (25.4 ಓವರ್) ಶಫಾಲಿ ವರ್ಮ ಔಟಾಗದೆ 71, ಸ್ಮೃತಿ ಮಂದಾನ ಔಟಾಗದೆ 94
ಫಲಿತಾಂಶ: ಭಾರತಕ್ಕೆ 10 ವಿಕೆಟ್‌ಗಳ ಗೆಲುವು

ಸ್ಕ್ವಾಷ್ ಟೂರ್ನಿ: ಅನಾಹತ್‌ಗೆ ಪ್ರಶಸ್ತಿ


ಅನಾಹತ್ ಸಿಂಗ್

ನವದೆಹಲಿ (ಪಿಟಿಐ): ಭಾರತದ ಅನಾಹತ್ ಸಿಂಗ್ ಅವರು ಹ್ಯಾಂಬರ್ಗ್‌ನಲ್ಲಿ ನಡೆದ ಜರ್ಮನಿ ಜೂನಿಯರ್ ಓಪನ್ ಸ್ಕ್ವಾಷ್ ಚಾಂಪಿಯನ್‌ಷಿಪ್‌ನ‌ಲ್ಲಿ ಪ್ರಶಸ್ತಿ ಜಯಿಸಿದ್ದಾರೆ. 15 ವರ್ಷ‌ದೊಳಗಿನವರ ಫೈನಲ್ ಪಂದ್ಯದಲ್ಲಿ 3–0ಯಿಂದ ಈಜಿಪ್ಟ್‌ನ ಮಲಾಕ್ ಸಮೀರ್ ಅವರನ್ನು ಸೋಲಿಸಿದರು.

'ಸಾರ್ವಜನಿಕ ಮೈದಾನಗಳಲ್ಲಿ ಮೂಲಸೌಕರ್ಯ ಒದಗಿಸಿ'



ಮುಂಬೈ (ಪಿಟಿಐ): 'ಸಾರ್ವಜನಿಕರ ಬಳಕೆಗೆ ಇರುವ ಮೈದಾನಗಳಲ್ಲಿ ಕ್ರೀಡಾಪ‌ಟುಗಳಿಗೆ ಶೌಚಾಲಯ, ಕುಡಿಯುವ ನೀರು ಒಳಗೊಂಡಂತೆ ಮೂಲಸೌಕರ್ಯಗಳನ್ನು ಒದಗಿಸಿಕೊಡಿ' ಎಂದು ಬಾಂಬೆ ಹೈಕೋರ್ಟ್ ಬಿಸಿಸಿಐ, ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ (ಎಂಸಿಎ) ಮತ್ತು ಸ್ಥಳೀಯ ಸಂಸ್ಥೆಗಳಿಗೆ ಸೂಚಿಸಿದೆ.

'ಹಲವು ಮಕ್ಕಳು ಮತ್ತು ಯುವಕರು ಸಾರ್ವಜನಿಕ ಮೈದಾನಗಳಲ್ಲಿ ಕ್ರಿಕೆಟ್ ಹಾಗೂ ಇತರ ಕ್ರೀಡೆಗಳನ್ನು ಆಡುವರು. ವಿವಿಧ ಕ್ರಿಕೆಟ್ ಸಂಸ್ಥೆಗಳು ಮತ್ತು ಸ್ಥಳೀಯ ಸಂಸ್ಥೆಗಳ ಸುಪರ್ದಿಯಲ್ಲಿರುವಂತಹ ಮೈದಾನಗಳಲ್ಲಿ ಮೂಲಸೌಕರ್ಯದ ಕೊರತೆಯಿದೆ' ಎಂದು ನ್ಯಾಯಮೂರ್ತಿಗಳಾದ ಅನಿಲ್ ಮೆನನ್ ಮತ್ತು ಎಂ.ಎಸ್.ಕಾರ್ಣಿಕ್ ಅವರಿದ್ದ ಪೀಠ ಹೇಳಿದೆ.

'ಕ್ರಿಕೆಟ್‌ಗೆ ಉತ್ತೇಜನ ನೀಡಲು ನಡೆಸುವ ತರಬೇತಿ ಶಿಬಿರಗಳು ಮತ್ತು ಕ್ರಿಕೆಟ್ ಪಂದ್ಯ ನಡೆಯುವ ತಾಣಗಳಲ್ಲಿ ಕಡ್ಡಾಯವಾಗಿ ಮೂಲಸೌಕರ್ಯ ಇರಬೇಕು ಎಂದು ಬಿಸಿಸಿಐ ಮತ್ತು ಎಂಸಿಎ ಹೇಳುತ್ತದೆ. ಆದರೆ ವಾಸ್ತವ ಪರಿಸ್ಥಿತಿ ಭಿನ್ನವಾಗಿದೆ' ಎಂದಿದೆ.

ವೃತ್ತಿಪರ ಕ್ರಿಕೆಟ್ ಆಟಗಾರರೂ ಆಗಿರುವ ಬಾಂಬೆ ಹೈಕೋರ್ಟ್ ವಕೀಲ ರಾಹುಲ್ ತಿವಾರಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ವೇಳೆ ಪೀಠ ಈ ಸೂಚನೆ ನೀಡಿದೆ.

'ಕ್ರಿಕೆಟ್ ಟೂರ್ನಿ ಅಥವಾ ತರಬೇತಿ ಶಿಬಿರ ಆಯೋಜಿಸಲು ಮೈದಾನಗಳನ್ನು ಕಾಯ್ದಿರಿಸುವಾಗ ಸಂಬಂಧಪಟ್ಟ ಸ್ಥಳೀಯ ಸಂಸ್ಥೆ ಅಥವಾ ಕ್ರಿಕೆಟ್ ಸಂಸ್ಥೆಗೆ ಶುಲ್ಕ ಪಾವತಿಸಬೇಕು. ಆದರೆ ಅಲ್ಲಿ ಯಾವುದೇ ಮೂಲಸೌಕರ್ಯ ಇರುವುದಿಲ್ಲ' ಎಂದು ತಿವಾರಿ ಅರ್ಜಿಯಲ್ಲಿ ದೂರಿದ್ದರು.

ಸಂಕ್ಷಿಪ್ತ ಸುದ್ದಿ

ಕೊಕ್ಕೊ: ಪ್ರಶಸ್ತಿಗೆ 16 ತಂಡಗಳ ಸೆಣಸು

ಮೈಸೂರು: ಇಲ್ಲಿನ ಮೈಸೂರು ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ವಿಭಾಗದ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ಮಂಗಳವಾರದಿಂದ ಜುಲೈ 7ರವರೆಗೆ ಅಖಿಲ ಭಾರತ ಅಂತರ ವಿಶ್ವವಿದ್ಯಾಲ‌ಯದ ಮಹಿಳೆಯರ ಕೊಕ್ಕೊ ಟೂರ್ನಿ ನಡೆಯಲಿದೆ.

ದೇಶದ 4 ವಲಯಗಳಿಂದ ತಲಾ 4ರಂತೆ 16 ತಂಡಗಳು ಪಾಲ್ಗೊಳ್ಳಲಿ‌ದ್ದು, ದಕ್ಷಿಣ ವಲಯದಿಂದ ರಾಜ್ಯದ ಮೈಸೂರು, ಆಂಧ್ರ ಪ್ರದೇಶದ ಕಾಕತೀಯ ವಿಶ್ವವಿದ್ಯಾಲಯ, ಕೇರಳದ ಕ್ಯಾಲಿಕಟ್ ಹಾಗೂ ಕೇರಳ ವಿಶ್ವವಿದ್ಯಾ‌ಲಯಗಳು ಕಣದಲ್ಲಿವೆ.

ಮೈಸೂರು ವಿಶ್ವವಿದ್ಯಾಲಯವು ಮಂಗಳವಾರ ಎರಡು ಪಂದ್ಯಗಳನ್ನು ಆಡಲಿದ್ದು, ಕುರುಕ್ಷೇತ್ರ ವಿಶ್ವವಿದ್ಯಾ‌ಲಯ ಹಾಗೂ ಉತ್ಕಲ ವಿಶ್ವವಿದ್ಯಾ‌ಲಯ ತಂಡಗಳನ್ನು ಎದುರಿಸಲಿದೆ. ಮೊದಲ ದಿನ ಒಟ್ಟು 16 ಪಂದ್ಯಗಳು ನಡೆಯಲಿವೆ.

ಬಾಕ್ಸಿಂಗ್: ಗೀತಿಕಾ, ಆಫಿಯಾಗೆ ಚಿನ್ನ

ನವದೆಹಲಿ (ಪಿಟಿಐ): ವಿಶ್ವ ಯೂತ್ ಚಾಂಪಿಯನ್ ಆಫಿಯಾ ಪಠಾಣ್ ಮತ್ತು ಗೀತಿಕಾ ಅವರು ಕಜಕಸ್ತಾನದ ನೂರ್ ಸುಲ್ತಾನ್‌ನಲ್ಲಿ ನಡೆದ ಚೊಚ್ಚಲ ಎಲೋರ್ಡ ಬಾಕ್ಸಿಂಗ್ ಕಪ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದರು.

ಕೊನೆಯ ದಿನವಾದ ಸೋಮವಾರ ನಡೆದ ಸ್ಪರ್ಧೆಯಲ್ಲಿ ಕಲೈವನಿ ಶ್ರೀನಿವಾಸನ್ ಮತ್ತು ಜಮುನಾ ಬೋರೊ ಅವರು ಬೆಳ್ಳಿ ಜಯಿಸಿದರು. ಭಾರತ ಒಟ್ಟು 14 ಪದಕಗಳೊಂದಿಗೆ ತನ್ನ ಅಭಿಯಾನ ಕೊನೆಗೊಳಿಸಿತು. ತಲಾ ಎರಡು ಚಿನ್ನ ಮತ್ತು ಬೆಳ್ಳಿಯ ಜತೆ 10 ಕಂಚಿನ ಪದಕಗಳನ್ನು ಜಯಿಸಿತು.

ಮಹಿಳೆಯರ 81 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ಆಫಿಯಾ 5–0 ರಲ್ಲಿ ಲಜ್ಜತ್ ಕಂಗಿಬಯೆವಾ ಅವರನ್ನು ಮಣಿಸಿದರು. 48 ಕೆ.ಜಿ ವಿಭಾಗದಲ್ಲಿ ಸ್ಪರ್ಧಿಸಿದ ಗೀತಿಕಾ 4–1 ರಲ್ಲಿ ಭಾರತದವರೇ ಆದ ಕಲೈವನಿ ವಿರುದ್ಧ ಗೆದ್ದರು.

ವಾಲಿಬಾಲ್ ಪಟು ಷಣ್ಮುಖಪ್ಪ ನಿಧನ


ಷಣ್ಮುಖಪ್ಪ

ದಾವಣಗೆರೆ: ಇಲ್ಲಿನ ಎಂಎಸ್‌ಬಿ ಕಾಲೇಜಿನ ದೈಹಿಕ ಶಿಕ್ಷಣ ವಿಭಾಗದ ನಿವೃತ್ತ ನಿರ್ದೇಶಕ, ವಾಲಿಬಾಲ್ ತಂಡದ ಮಾಜಿ ರಾಷ್ಟ್ರೀಯ ಆಟಗಾರ, ಕೆ.ಷಣ್ಮು‌ಖಪ್ಪ (64) ಹೃದಯಾಘಾತದಿಂದ ಸೋಮವಾರ ನಿಧನರಾದರು.

ಇಲ್ಲಿನ ವಿದ್ಯಾನಗರ ನಿವಾಸಿ ಷಣ್ಮುಖಪ್ಪ ಎರಡು ಬಾರಿ ಮೈಸೂರು ವಿಶ್ವವಿದ್ಯಾಲಯದಿಂದ ರಾಷ್ಟ್ರೀಯ ವಾಲಿಬಾಲ್ ಚಾಂಪಿಯನ್‌ಷಿಪ್‌ನ‌ಲ್ಲಿ ಭಾಗವಹಿಸಿದ್ದರು. ದಾವಣಗೆರೆ ವಾಲಿಬಾಲ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿದ್ದರು. 34ನೇ ರಾಷ್ಟ್ರೀಯ ವಾಲಿಬಾಲ್ ಚಾಂಪಿಯನ್‌ಷಿಪ್‌ನ ಸಂಘಟನಾ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದರು. ಅವರಿಗೆ ಪತ್ನಿ, ಪುತ್ರ ಇದ್ದಾರೆ. ಮಂಗಳವಾರ ಮಧ್ಯಾಹ್ನ 12.30ಕ್ಕೆ ಇಲ್ಲಿನ ಆನೆಕೊಂಡದಲ್ಲಿ ಅವರ ಅಂತ್ಯಕ್ರಿಯೆ ನಡೆಯಲಿದೆ.

ವಿಂಬಲ್ಡನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿ: ನೋರಿ, ಗೊಫಿನ್‌ಗೆ ಗೆಲುವು

ಕ್ವಾರ್ಟರ್‌ಗೆ ಜೊಕೊ, ಜಬೇರ್

ಲಂಡನ್ (ರಾಯಿಟರ್ಸ್/ ಎಎಫ್‌ಪಿ): ಸತತ ನಾಲ್ಕನೇ ಪ್ರಶಸ್ತಿ ಮೇಲೆ ಕಣ್ಣಿಟ್ಟಿರುವ ಸರ್ಬಿಯದ ನೊವಾಕ್ ಜೊಕೊವಿಚ್ ವಿಂಬಲ್ಡನ್ ಗ್ರ್ಯಾನ್ ಸ್ಲಾಮ್ ಟೆನಿಸ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಭಾನುವಾರ ರಾತ್ರಿ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಪ್ರಿಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಅವರು 6-2, 4-6, 6-1, 6-2 ರಲ್ಲಿ ನೆದರ್ಲೆಂಡ್ಸ್‌ನ ಟಿಮ್ ವ್ಯಾನ್ ರಿಜ್‌ಥೊವೆನ್ ಅವರನ್ನು ಮಣಿಸಿದರು.

ಇಲ್ಲಿ ಅಗ್ರಶ್ರೇಯಾಂಕ ಪಡೆದಿರುವ ಜೊಕೊವಿಚ್, ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ 13ನೇ ಬಾರಿ ಕ್ವಾರ್ಟರ್‌ಫೈನ‌ಲ್ ಪ್ರವೇಶಿಸಿದ ಸಾಧನೆ ಮಾಡಿದರು.

ಮೊದಲ ಸೆಟ್‌ನಲ್ಲಿ ಎರಡು ಸಲ ಎದುರಾಳಿಯ ಸರ್ವ್ ಬ್ರೇಕ್ ಮಾಡಿದ ಜೊಕೊವಿಚ್, 6–2 ರಲ್ಲಿ ಗೆದ್ದು ಮುನ್ನಡೆ ಸಾಧಿಸಿದರು.

ವಿಂಬಲ್ಡನ್ ಟೂರ್ನಿಗೆ ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದ ರಿಜ್‌ಥೊವೆನ್ 2ನೇ ಸೆಟ್‌ನಲ್ಲಿ ಎದುರಾಳಿಯ ಸರ್ವ್ ಬ್ರೇಕ್ ಮಾಡಿ ಅಚ್ಚರಿ ಉಂಟುಮಾಡಿದರು. ತಮ್ಮ ಎಲ್ಲ ಸರ್ವ್‌ಗಳಲ್ಲಿ ಪಾಯಿಂಟ್ ಗಿಟ್ಟಿಸಿ ಸೆಟ್ ಗೆದ್ದರಲ್ಲದೆ 1–1 ರಲ್ಲಿ ಸಮಬಲ ಸಾಧಿಸಿದರು.

ಆದರೆ ಮುಂದಿನ ಎರಡೂ ಸೆಟ್‌ಗಳಲ್ಲಿ ಜೊಕೊವಿಚ್ ಪೂರ್ಣ ಪ್ರಭುತ್ವ ಸಾಧಿಸಿದರು. ಕೇವಲ ಮೂರು ಗೇಮ್‌ಗಳನ್ನು ಎದುರಾಳಿಗೆ ಬಿಟ್ಟುಕೊಟ್ಟು 2 ಗಂಟೆ 39 ನಿಮಿಷಗಳಲ್ಲಿ ಗೆಲುವಿನ ನಗು ಬೀರಿದರು.

ಜೊಕೊವಿಚ್ ಅವರು ಶುಕ್ರವಾರ ನಡೆಯಲಿರುವ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಇಟಲಿಯ ಯಾನಿಕ್ ಸಿನೆರ್ ವಿರುದ್ಧ ಪೈಪೋಟಿ ನಡೆಸುವರು.

ಸಿನೆರ್ ಅವರು ಇನ್ನೊಂದು ಪ್ರಿಕ್ವಾರ್ಟರ್ ಫೈನಲ್ ಪಂದ್ಯದಲ್ಲಿ 6-1, 6-4, 6-7(8), 6-3 ರಲ್ಲಿ ಐದನೇ ಶ್ರೇಯಾಂಕದ ಆಟಗಾರ ಸ್ಪೇನ್‌ನ ಕಾರ್ಲೋಸ್ ಅಲ್ಕರಾಸ್ ಅವರನ್ನು ಮಣಿಸಿದರು.

ಎಂಟರಘಟ್ಟಕ್ಕೆ ಕಿರ್ಗಿಯೊಸ್: ಭುಜದ ನೋವಿನ ನಡುವೆಯೂ ಉತ್ತಮ ಆಟವಾಡಿದ ಆಸ್ಟ್ರೇಲಿಯಾದ ನಿಕ್ ಕಿರ್ಗಿಯೊಸ್ ಕ್ವಾರ್ಟರ್‌ಫೈನಲ್ ತಲುಪಿದರು. ಐದು ಸೆಟ್‌ಗಳ ಪ್ರಿಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಅವರು 4–6, 6–4, 7–6 (7/2), 3–6, 6–2ರಿಂದ ಅಮೆರಿಕದ ಬ್ರೆಂಡನ್ ನಕಶಿಮಾ ಅವರನ್ನು ಸೋಲಿಸಿದರು.

ನೋರಿ, ಗೊಫಿನ್‌ಗೆ ಗೆಲುವು: ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಆತಿಥೇಯ ದೇಶದ ಕ್ಯಾಮರನ್ ನೋರಿ ಮತ್ತು ಬೆಲ್ಜಿಯಂನ ಡೇವಿಡ್ ಗೊಫಿನ್ ಎಂಟರಘಟ್ಟ ಪ್ರವೇಶಿಸಿದರು. ನೋರಿ 6-4 7-5 6-4 ರಲ್ಲಿ ಅಮೆರಿಕದ ಟಾಮಿ ಪೌಲ್ ವಿರುದ್ಧ ಗೆದ್ದರು. ವಿಂಬಲ್ಡನ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿದ ಬ್ರಿಟನ್‌ನ ಐದನೇ ಆಟಗಾರ ಎಂಬ ಗೌರವ ಅವರಿಗೆ ಒಲಿಯಿತು. ರೋಚಕ ಹೋರಾಟದಲ್ಲಿ ಗೊಫಿನ್ 7-6 (3), 5-7, 5-7, 6-4, 7-5 ರಲ್ಲಿ ಅಮೆರಿಕದ ಫ್ರಾನ್ಸೆಸ್ ಟಿಯಾಫೊ ಅವರನ್ನು ಸೋಲಿಸಿದರು.

ಚಿಲಿಯ ಕ್ರಿಸ್ಟಿಯನ್ ಗಾರಿನ್ 2-6, 5-7, 7-6 (3), 6-4, 7-6 (6) ರಲ್ಲಿ ಆಸ್ಟ್ರೇಲಿಯಾದ ಅಲೆಕ್ಸ್ ಡಿ ಮಿನುಯೆರ್ ಅವರನ್ನು ಮಣಿಸಿದರು.

ಎಂಟರಘಟ್ಟಕ್ಕೆ ಜಬೇರ್: ಟುನೀಷ್ಯದ ಆನ್ಸ್ ಜಬೇರ್ ಮಹಿಳೆಯರ ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಅವರು 7–6, 6–4 ರಲ್ಲಿ ಬೆಲ್ಜಿಯಂನ ಎಲೈಸ್ ಮಾರ್ಟೆನ್ಸ್ ಎದುರು ಜಯ ಸಾಧಿಸಿದರು.

ಇನ್ನೊಂದು ಪಂದ್ಯದಲ್ಲಿ ಜರ್ಮನಿಯ ಯೂಲ್ ನೀಮಯೆರ್ 6–2, 6–4 ರಲ್ಲಿ ಬ್ರಿಟನ್‌ನ ಹೆದರ್ ವಾಟ್ಸನ್ ಅವರನ್ನು ಸೋಲಿಸಿದರು.


ನೊವಾಕ್ ಜೊಕೊವಿಚ್ ಚೆಂಡನ್ನು ರಿಟರ್ನ್ ಮಾಡಿದ ಕ್ಷಣ –ಎಎಫ್‌ಪಿ ಚಿತ್ರ

ಸಿಸಿಪಸ್, ಕಿರ್ಗಿಯೊಸ್‌ಗೆ ದಂಡ

ವಿಂಬಲ್ಡನ್ ಟೂರ್ನಿಯ ಪಂದ್ಯದ ವೇಳೆ ಕ್ರೀಡಾಸ್ಫೂ‌ರ್ತಿಗೆ ವಿರುದ್ಧವಾಗಿ ವರ್ತಿಸಿದ ಸ್ಟೆಫಾನೊಸ್ ಸಿಸಿಪಸ್‌ಗೆ ₹ 7.80 ಲಕ್ಷ ಹಾಗೂ ನಿಕ್ ಕಿರ್ಗಿಯೊಸ್‌ಗೆ ₹ 3.15 ಲಕ್ಷ ದಂಡ ವಿಧಿಸಲಾಗಿದೆ.

ಇವರಿಬ್ಬರ ನಡುವಿನ ಮೂರನೇ ಸುತ್ತಿನ ಪಂದ್ಯ ಕಾವೇರುವಂತೆ ಮಾಡಿತ್ತು. ಸಿಸಿಪಸ್ ಅವರು ಹತಾಶೆಯಿಂದ ಚೆಂಡನ್ನು ಪ್ರೇಕ್ಷಕರತ್ತ ಹೊಡೆದಿದ್ದರು. ಕಿರ್ಗಿಯೊಸ್ ಅಶ್ಲೀಲ ಪದಗಳನ್ನು ಬಳಸಿ ತೆಗಳಿದ್ದರು.

ಮೊದಲ ಸುತ್ತಿನ ಪಂದ್ಯದ ವೇಳೆ ಪ್ರೇಕ್ಷಕನತ್ತ ಉಗುಳಿದ್ದಕ್ಕೆ ಕಿರ್ಗಿಯೊಸ್‌ಗೆ ₹ 7.80 ಲಕ್ಷ ದಂಡ ವಿಧಿಸಲಾಗಿತ್ತು.

ಫುಟ್‌ಬಾಲ್: ಭಾರತ ಪರಾಭವ

ಜೆಸ್ಹೆಮ್, ನಾರ್ವೆ (ಪಿಟಿಐ): ಭಾರತ 17 ವರ್ಷದೊಳಗಿನ ಮಹಿಳಾ ತಂಡದವರು ಇಲ್ಲಿ ನಡೆಯುತ್ತಿರುವ ನಾರ್ಡಿಕ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ 0–3 ಗೋಲುಗಳಿಂದ ಐಸ್‌ಲೆಂಡ್ ಎದುರು ಸೋತರು.

ಎಮಿಲಿಯಾ ಎರಡು ಗೋಲು ಹಾಗೂ ಲಿಜಾ ಬೋರ್ಕ್ ಒಂದು ಗೋಲು ಗಳಿಸಿದರು. ಮೊದಲ ಅವಧಿಯಲ್ಲಿ ಉಭಯ ತಂಡಗಳು ಜಿದ್ದಾಜಿದ್ದಿನ ಪೈಪೋಟಿ ನಡೆಸಿದವು. ಭಾರತ ತಂಡದ ಅನಿತಾ ಕುಮಾರಿ, ಗೋಲು ಗಳಿಸುವ 2–3 ಉತ್ತಮ ಅವಕಾಶ ಸೃಷ್ಟಿಸಿದ್ದರು. ಆದರೆ ಹೊಂದಾಣಿಕೆಯ ಕೊರತೆಯಿಂದ ಗೋಲು ಬರಲಿಲ್ಲ. ಎರಡನೇ ಅವಧಿಯಲ್ಲಿ ಐಸ್‌ಲೆಂಡ್ ತಂಡ ಪಾರಮ್ಯ ಮೆರೆಯಿತು. ಭಾರತದ ತಂಡದ ಗೋಲ್‌ಕೀಪರ್ ಮೆಲೊಡಿ ಚಾನು ಅವರ ಮಿಂಚಿನ ಪ್ರದರ್ಶನ ಇಲ್ಲದೇ ಇರುತ್ತಿದ್ದಲ್ಲಿ, ಸೋಲಿನ ಅಂತರ ಇನ್ನಷ್ಟು ಹೆಚ್ಚುತ್ತಿತ್ತು.

17 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಗೆ ಸಿದ್ಧತೆಯ ಅಂಗವಾಗಿ ಭಾರತ ತಂಡ ಯುರೋಪ್ ಪ್ರವಾಸದಲ್ಲಿದೆ.

ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್: ಮೂವರಿಗೆ ಮತ್ತೆ ಟ್ರಯಲ್ಸ್

ತಿರುವನಂತಪುರ (ಪಿಟಿಐ): ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ಗೆ ಭಾರತ ತಂಡದಲ್ಲಿ ಸ್ಥಾನ ಪಡೆದಿರುವ ಮೂವರು ಅಥ್ಲೀಟ್‌ಗಳಿಗೆ ಮತ್ತೊಮ್ಮೆ ಟ್ರಯಲ್ಸ್‌ನ‌ಲ್ಲಿ ಪಾಲ್ಗೊಳ್ಳುವಂತೆ ಭಾರತ ಅಥ್ಲೆಟಿಕ್ ಫೆಡರೇಷನ್ (ಎಎಫ್‌ಐ) ಸೂಚಿಸಿದೆ.

400 ಮೀ. ಓಟದ ಸ್ಪರ್ಧಿ ಐಶ್ವರ್ಯಾ ಮಿಶ್ರಾ, ಲಾಂಗ್ ಜಂಪ್ ಸ್ಪರ್ಧಿ ಜೆಸ್ವಿನ್ ಆಲ್ಡ್ರಿನ್ ಮತ್ತು 4X400 ಮೀ. ರಿಲೇ ತಂಡದ ಸ್ಪರ್ಧಿ ಅರೋಕಿಯ ರಾಜೀವ್ ಅವರು ಸೋಮವಾರ ನಡೆದ ಟ್ರಯ‌ಲ್ಸ್‌ನಲ್ಲಿ ಉತ್ತಮ ಸಾಧನೆ ತೋರಲು ವಿಫಲರಾದರು.

'ಮೂವರು ಅಥ್ಲೀಟ್‌ಗಳು ನಿರೀಕ್ಷಿತ ಪ್ರದರ್ಶನ ನೀಡಲು ವಿಫಲರಾಗಿ‌ದ್ದಾರೆ. ಎನ್‌ಐಎಸ್ ಪಟಿಯಾಲದಲ್ಲಿ ಶುಕ್ರವಾರ ಮತ್ತೊಂದು ಟ್ರಯಲ್ಸ್‌ನ‌ಲ್ಲಿ ಪಾಲ್ಗೊಳ್ಳುವಂತೆ ಸೂಚಿಸಲಾಗಿದೆ' ಎಂದು ಎಎಫ್‌ಐ ಅಧ್ಯಕ್ಷ ಆದಿಲ್ ಸುಮರಿವಾಲಾ ಹೇಳಿದರು.

ಮಹಿಳಾ ವಿಶ್ವಕಪ್ ಹಾಕಿ ಟೂರ್ನಿ: ಚೀನಾ ಎದುರಾಳಿ

ಭಾರತಕ್ಕೆ ಮೊದಲ ಜಯದ ನಿರೀಕ್ಷೆ

ಆ್ಯಮ್‌ಸ್ಟಲ್‌ವೀನ್, ನೆದರ್ಲೆಂಡ್ಸ್ (ಪಿಟಿಐ): ಈ ಬಾರಿಯ ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಮೊದಲ ಗೆಲುವಿನ ನಿರೀ‌ಕ್ಷೆಯಲ್ಲಿರುವ ಭಾರತ ಮಹಿಳಾ ತಂಡವು ಮಂಗಳವಾರ ಚೀನಾ ತಂಡಕ್ಕೆ ಮುಖಾ‌ಮುಖಿಯಾಗಲಿದೆ.

ಭಾನುವಾರ ನಡೆದ ಬಿ ಗುಂಪಿನ ಪಂದ್ಯದಲ್ಲಿ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಇಂಗ್ಲೆಂಡ್ ತಂಡದ ಎದುರು 1–1ರಿಂದ ಡ್ರಾ ಸಾಧಿಸಿದ್ದ ಭಾರತ, ಡಿಫೆನ್ಸ್ ವಿಭಾಗದಲ್ಲಿ ಉತ್ತಮ ಸಾಮರ್ಥ್ಯ ತೋರಿತ್ತು. ಚೀನಾ ಎದುರು ಗೆಲುವು ಪಡೆಯಬೇಕಾದರೆ ಆಕ್ರಮಣ ವಿಭಾಗವು ಪರಿಣಾಮಕಾರಿ ಆಟವಾಡಬೇಕಿದೆ.

ಇಂಗ್ಲೆಂಡ್ ಎದುರು ಉಪನಾಯಕಿ ದೀಪ್ ಗ್ರೇಸ್ ಎಕ್ಕಾ, ನಿಕ್ಕಿ ಪ್ರಧಾನ್, ಗುರ್ಜಿತ್ ಕೌರ್ ಮತ್ತು ಉದಿತಾ ಅವರಿದ್ದ ಡಿಫೆನ್ಸ್ ವಿಭಾಗವು ಇಂಗ್ಲೆಂಡ್ ತಂಡಕ್ಕೆ ಒಂದೂ ಪೆನಾಲ್ಟಿ ಕಾರ್ನರ್ ಅವಕಾಶ ನೀಡಿರಲಿಲ್ಲ. ನಾಯಕಿ, ಗೋಲ್‌ಕೀಪರ್ ಸವಿತಾ ಪೂನಿಯಾ ಕೂಡ ಎದುರಾಳಿ ತಂಡದ ಹಲವು ಗೋಲು ಪ್ರಯತ್ನಗಳನ್ನು ಯಶಸ್ವಿಯಾಗಿ ತಡೆದಿದ್ದರು.

ಚೀನಾ ಮೊದಲ ಪಂದ್ಯದಲ್ಲಿ ನ್ಯೂಜಿಲೆಂಡ್ ಎದುರು 2–2ರಿಂದ ಡ್ರಾ ಸಾಧಿಸಿತ್ತು.

ಎಫ್‌ಐಎಚ್ ಪ್ರೊ ಲೀಗ್ ಟೂರ್ನಿಯ ಮೊದಲ ಲೆಗ್‌ನಲ್ಲಿ ಭಾರತ 7–1ರಿಂದ ಮತ್ತು ಎರಡನೇ ಲೆಗ್‌ನಲ್ಲಿ 2–1ರಿಂದ ಚೀನಾಕ್ಕೆ ಸೋಲುಣಿಸಿತ್ತು. ವಿಶ್ವ ರ‍್ಯಾಂಕಿಂಗ್‌ನಲ್ಲಿ ಎಂಟನೇ ಸ್ಥಾನದಲ್ಲಿರುವ ಭಾರತ ಮತ್ತು 13ನೇ ಕ್ರಮಾಂಕದ ಚೀನಾ ನಡುವೆ ಜಿದ್ದಾಜಿದ್ದಿನ ಪೈಪೋಟಿ ನಡೆಯುವ ಸಾಧ್ಯತೆಯಿದೆ.

ಪಂದ್ಯ ಆರಂಭ: ರಾತ್ರಿ 8 ಗಂಟೆ
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್


ಲಿಯೊನಾರ್ಡೊ ವ್ಯಾನ್ ಅಶ್ವದೊಂದಿಗೆ ಮುನ್ನುಗ್ಗಿದ ಕೇಖ್ರಿ ರಿಯೊ

ಈಕ್ವೆಸ್ಟ್ರಿಯನ್: ಖೇಕ್ರಿ ರಿಯೊಗೆ ಅಗ್ರಸ್ಥಾನ

ಬೆಂಗಳೂರು: ಯುಆರ್‌ಬಿ ಕ್ಲಬ್‌ನ ಕೇಖ್ರಿ ರಿಯೊ ಅವರು ಈಕ್ವೆಸ್ಟ್ರಿಯನ್ ಪ್ರೀಮಿಯರ್ ಲೀಗ್‌ನ 130 ಸೆಂಟಿ ಮೀಟರ್ ಶೋ ಜಂಪಿಂಗ್‌ನಲ್ಲಿ ಅಗ್ರಸ್ಥಾನ ಗಳಿಸಿದರು.

ಕೇಖ್ರಿ ಲಿಯೊನಾರ್ಡೊ ವ್ಯಾನ್ ಅಶ್ವವನ್ನು ಮುನ್ನಡೆಸಿದರು. ಯುಆರ್‌ಬಿ ಕ್ಲಬ್‌ನವರೇ ಆದ ಪ್ರಣಯ್ ಖರೆ (ವೆನಿಲ್ಲಾ ಸ್ಕೈ ಅಶ್ವ) ಮತ್ತು ನಿತಿನ್ ಗುಪ್ತಾ (ಹನ್ನಾ) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು.

ಲಯಕ್ಕೆ ಮರಳುವರೆ ಸಿಂಧು, ಪ್ರಣಯ್?

ಕ್ವಾಲಾಲಂಪುರ (ಪಿಟಿಐ): ಭಾರತದ ಪಿ.ವಿ.ಸಿಂಧು ಮತ್ತು ಎಚ್.ಎಸ್. ಪ್ರಣಯ್ ಅವರು ಮಂಗಳವಾರ ಇಲ್ಲಿ ಆರಂಭವಾಗಲಿರುವ ಮಲೇಷ್ಯಾ ಮಾಸ್ಟರ್ಸ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಸವಾಲು ಮುನ್ನಡೆಸಲಿದ್ದು, ಲಯ ಕಂಡುಕೊಳ್ಳುವ ವಿಶ್ವಾಸದಲ್ಲಿದ್ದಾರೆ.

ಭಾನುವಾರ ಕೊನೆಗೊಂಡ ಮಲೇಷ್ಯಾ ಓಪನ್ ಟೂರ್ನಿಯ ಕ್ವಾ‌ರ್ಟರ್‌ಫೈನಲ್‌ನಲ್ಲಿ ಇವರಿಬ್ಬರು ಸೋತಿದ್ದರು. ಹೀಗಾಗಿ ತಪ್ಪುಗಳನ್ನು ತಿದ್ದಿಕೊಂಡು ಮುನ್ನುಗ್ಗುವ ಛಲದಲ್ಲಿದ್ದಾರೆ.

ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ ಸಿಂಧು, ವಿಶ್ವ ಟೂರ್ ಟೂರ್ನಿಗಳಲ್ಲಿ ಸತತವಾಗಿ ಕ್ವಾರ್ಟರ್‌ಫೈ‌ನಲ್ ಅಥವಾ ಸೆಮಿಫೈನಲ್ ತಲುಪಿ ಆದರೆ ಪ್ರಮುಖ ಆಟಗಾರ್ತಿಯರ ಎದುರು ಅವರ ಸೋಲಿನ 'ಪರ್ವ' ಮುಂದುವರಿದಿದೆ. ಈ ಟೂರ್ನಿಯ ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಅವರಿಗೆ ಮತ್ತೆ ಬಿಂಗ್ ಜಿಯಾವೊ ಸವಾಲು ಎದುರಾಗಿದೆ.

ಲಂಡನ್ ಒಲಿಂಪಿಕ್ಸ್ ಕಂಚು ವಿಜೇತೆ ಸೈನಾ ನೆಹ್ವಾಲ್ ಮೊದಲ ಸುತ್ತಿನಲ್ಲಿ ಕೊರಿಯಾದ ಕಿಮ್ ಗಾ ಯುನ್ ವಿರುದ್ಧ ಆಡುವರು.

ಪುರುಷರ ಸಿಂಗಲ್ಸ್ ಮೊದಲ ಸುತ್ತಿನಲ್ಲಿ ಪ್ರಣಯ್, ಇಂಡೊನೇ‌ಷ್ಯಾದ ಶೇಸರ್ ಹಿರೇನ್ ರುಸ್ತಾವಿಟೊ ಅವರನ್ನು ಎದುರಿಸಲಿದ್ದಾರೆ.